Sri J. MOHAMED IMAM.—As they said once, this should be viewed as a spiritual conception, a conception which should be cherished by one and all. We are here and we must try to resolve and see that the spiritual conception never dies. On the other hand, we must see that it unites us together for our mutual benefit and for the progress and prosperity of the State. You know, Sir, that one crore of our brethren who were living once with us and who were once enjoying the same culture and the same language have been torn asunder limb by limb and thrown in other States to remain in the tail end of other States. Bombay Karnataka is at the tail-end of Bombay and Mangalore is at the tail-end of Madras. Gulbarga is at the tail-end of Hyderabad. They have been disregarded and neglected. They cannot call those places as their home. They have been suffering. They are anxious to come together. Should we close our doors to them? Should we bar their entry? If we close our doors and if we bar their entry, we will be closing ourselves in and making ourselves prisoners. These are not mere words. This is my faith. We must all join together, and come together for the prosperity of the State and for the good of the State. We must make all of us joyous. All the people who want to live together, and who want to unite together for mutual advantage must be encouraged. We must work together. Instead of exchanging curses, we must exchange blessings and we should not find fault with each other, as was done yesterday by one Hon'ble Member. This is a supreme opportunity for all of us to come together under one Government, and if we lose this opportunity, I cannot say what the future will be and what the resultant catastrophe will be.

These four parts of Karnataka, Mysore, Karnataka parts of Hyderabad, Karnataka parts of Bombay and Karnataka parts of Madras, form four pillars.

Sri R. ANANTARAMAN (Chamarajpet).—Andhra?

Sri J. MOHAMED IMAM.—So far as Andhra is concerned, we are glad that we got Bellary. They have decided to share our joys and to share our sufferings. They have decided to be our comrades and we will never give up our comrades. They have paved the way for Karnataka. When the question of Bellary came up before this House, every member of this House welcomed it as a first step towards Karnataka. Now to achieve Karnataka, the united efforts of all of us is required. To make Karnataka a living reality, a living accomplishment, our unstinted support and our sincere support is required.

I was telling that the four parts of Karnataka are like pillars of the temple of Karnataka. The foundation has been laid for Karnataka by the merger

(SRI J. MOHAMED IMAM.)
of Bellary. Now an edifice has to be built, and a superstructure has to be built, and that lies with us.

It is argued and it is expressed by many that the advocacy of United Karnataka is nothing but a manoeuvre in the game of power politics. It is also said that some people seek power and with that object, they are trying to unite Karnataka. I can tell you that those people who want to join Mysore are not guided by any passion for power. If their aim had been only to gain power, to become ministers and to become politicians, then it was quite easy for them to have their own Karnataka province, without Mysore and without all the complications. If they wanted power, they could have formed their own Karnataka and would have had twenty Ministers and forty deputy Ministers. The very fact that they want to join Mysore indicates that they are surrendering their power, that they are surrendering their individuality and that they are surrendering their personality. It is the common point of interest, it is the love towards the State of Karnataka that has prompted them, that has made them particular to join the State of Mysore. That is why I say that this desire to join Karnataka is a spiritual conception, is a supreme choice which we must all honour.

Again, Sir, as I said, they are anxiously waiting to join Mysore. They are appealing to the State of Mysore to have them with them. They are appealing that they should be given a home. This should not be disregarded. One or two objections were raised against Karnataka. It is said that the formation of linguistic provinces will lead to Balkanisation and that they may lead to friction between one State and another, and that it may create unhealthy rivalry. Sir, past history is quite otherwise. This is not the first linguistic province which will be created. Orissa was made a linguistic province on similar grounds. Sind became a similar province. Bihar, originally part of Bengal, became a province of its own. Recently Andhra became a province of its own. Did we find any difficulties? Has the country suffered in any way? Did we find any unpleasantness or any disadvantage? On the other hand, after the formation of provinces, those people are quite happy. They are working out the destinies of those States. They have prospered. Administration is much better. For that matter, the entire Northern India is composed of linguistic provinces. Panjab speaks Punjabi, U. P. speaks Hindi, and so on. This confusion is prevalent only in the South which has to be resolved one day or the other.

It is also said—why not have two States? One State for Mysore itself. . . .

(*A Voice.*—Who said that?)

Sri J. MOHAMED IMAM.—It was said sometimes. So, nobody will say that, I presume.

Sri H. C. LINGA REDDY (Malur).—You cannot presume that nobody will say that.

Sri J. MOHAMED IMAM.—Then, I will anticipate and say, It is advocated by some that there should be two Karnatakas. . . .

Mr. SPEAKER.—In fact, one Hon'ble Member has said it.

Sri J. MOHAMED IMAM.—He is not here, Sir. It has been advocated that there should be two States—one for Mysore and another for the rest of Karnataka. I know that if this principle is accepted, it will be a very dangerous proposition. Accepting this principle is something like cutting a component into two parts or breaking a coconut into two parts. I said, that it is not the desire of those Karnatakas to have their own province and have an individuality of their own. It is the desire of those people that all people who have a common culture and a common language must come together into one fold, and the conditions that were prevailing long ago during the reign of Krishnadevaraya and Tippu Sultan must be restored. It is only a united Karnataka that will add to the glory of the State of Mysore.

Another factor I want to say is this. A big country helps the growth of commerce and industrialisation. The bigger the State the greater the trade

and commerce—I have already said this, and I will give you only one example. Our newspapers, Dailies and others—I would like to ascertain from Sri P. R. Ramaiya as to what was their circulation or their sale before Bellary merged into Mysore and what is their sale after the merger. Mysore has so many industries and so many products. The Industries Minister may be able to give the details. We have got Mysore Sandal Soap. We have Mysore Silk and so many other products. Our sales are limited because our jurisdiction is limited.

(Interruption).

If the State is big, people will be actuated by patriotic motives and buy the products of their State. There will be greater sales and there will be a greater scope for business. I remember that last time, the Finance Minister struggled very hard to get a loan of three crores. He has had to appeal to outsiders. Supposing there had been a bigger Karnataka, and an appeal had been made, his appeal would have been welcomed. This is the administrative advantage. If you want to start an industry or a factory, a greater country will give you greater scope and you will have better facilities to start them and there will be better trade. These are the advantages which you will derive in the long run.

I must say a few words with regard to one aspectmen tioned by my friend Sri Gopala Gowda, and that is about the Telugu-speaking people, specially in Kolar. We and the people of Kolar have been living in comradeship for centuries together. It is true, almost all of them speak Telugu. Apart from that, we have lived together. We have shared each other's sorrows. We have shared each other's joys. That area has produced many eminent Kannada people. We have lived for centuries and centuries. . . .

Sri Mulka GOVINDA REDDY.—Why do you want to have them under the bondage of Kannadigas ?

Sri J. MOHAMED IMAM.—Our comradeship, and our having lived together for centuries, I think, will overwhelm the language question. I must point out that the first Chief Minister of Mysore is a Mysore Andhra gentleman, Sri K. C. Reddy.

2 P.M.

The first Minister in the Union comes from Kolar and he is a Mysore Andhra. The person who built greater Mysore in the 17th Century from the Krishna to Mysore was Hyder Ali who was born in Budikote in Kolar. The language is not the sole criterion. But there are other things. So I personally feel, whatever may happen, we cannot do anything else. The choice is very clear, it is theirs. I cannot say anything more. I have done my duty. I have explained what I feel. I am not a man to mince matters, whatever may be the result. I feel in the innermost conscience of my heart that United Karnataka under the circumstances, taking the future set up into consideration, is desirable because it is better to have a big province. It is better in our own interest that our province is enlarged. It is for mutual benefit. With all these, I pray that my friends, especially my Congress friends, should not go against their own undisputed and uncontradicted declarations and policies. They must take a charitable view, a wider view and not a narrow-minded view. Sir, I know we are all very anxious to serve the State and we want to render our service. We will not be in a position to render any service for lack of opportunities; for rendering service, opportunities also must present themselves and that opportunity has presented itself before you. If you render service now, this service will be remembered by future generation and posterity but if you miss this opportunity, I do not know what will happen. So far as I am concerned, I feel I am serving a majestic and noble cause, the righteousness of which will be determined by the march of events in the subsequent years and the posterity will judge.

ಶ್ರೀ ಟಿ. ಎಸ್. ಮುಡಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಧ್ಯಕ್ಷರೇ, ಸುಮಾರು ಶತಮಾನಗಳಿಂದ ಯಾವ ವಿಷಯಕ್ಕೋಸ್ಕರವಾಗಿ ಈ United Karnataka ಕ್ಕಾಗಿ linguistic basis ಮೇಲೆ ಪ್ರಾಂತಗಳನ್ನು ಹಂಚಬೇಕೆಂದು ನಾವುಗಳೆಲ್ಲರೂ ಆಸಕ್ತಿಯನ್ನು ವಹಿಸಿ ಅಂದಿನಿಂದಲೂ ಕೂಡ ನಾವು ಶ್ರಮಿಸಿಕೊಂಡು ಬಂದಿದ್ದೇವೋ ಆ ವಿಷಯದ

(ಶ್ರೀ ಟಿ. ಎನ್. ಮುಡಲಗಿರಿಗೌಡ.)

ತೀರ್ಮಾನ ಅಂತಿಮ ಘಟ್ಟಕ್ಕೆ ಬಂದು ಮನಬಿಚ್ಚಿ ಮಾತನಾಡತಕ್ಕಂಥ ಮತ್ತು ಮನಬಿಚ್ಚಿ ತಿಳಿಸತಕ್ಕಂಥ ಒಂದು ಸಂದರ್ಭ ಈ ದಿವಸ ನಮಗೆ ಒದಗಿದೆ. ಈ ವಿಷಯದಲ್ಲಿ ಈವರೆಗೆ ಈ ಸಭೆ ಮತ್ತು ಮೇಲಿನ ಸಭೆಯ ಅನೇಕ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ದಿವಸ ಇಲ್ಲಿ ಏತಕ್ಕೋಸ್ಕರವಾಗಿ ನಾವು ಇದನ್ನು ಚರ್ಚಿಸುತ್ತಿದ್ದೇವೆ ಎಂಬುದು ಗೊತ್ತಿರತಕ್ಕಂಥ ವಿಷಯ. ಶ್ರೀ ಶೇಷಾದ್ರಿ ಕಮಿಟಿ ರಿಪೋರ್ಟ್ ನಮ್ಮ ಮುಂದೆ ಬಂದಿರತಕ್ಕ ಸಂದರ್ಭದಲ್ಲಿ ಈ ರಿಪೋರ್ಟ್ ನಮಗೆ ಇಂದು United Karnātaka ಅಥವಾ Linguistic ಪ್ರಾಂತ ವಿಭಜನೆಗೆ ಸಹಕಾರಿಯಾಗಿದೆಯೇ ಇಲ್ಲವೇ ಎನ್ನುವ ವಿಷಯದ ಮೇಲೆ ನಮ್ಮ ನಮ್ಮ ಅಭಿಪ್ರಾಯಗಳನ್ನೂ ಕೂಡ ತಿಳಿಸಿದ್ದೇವೆ. ಇಂಡಿಯಾ ಸರ್ಕಾರದವರು ಪ್ರಾಂತ್ಯ ವಿಭಜನೆಯ ವಿಷಯದಲ್ಲಿ ಒಂದು ಏರ್ಪಾಡನ್ನು ನಮಗೂ ಮಾಡಿದಂಥ ಕಾಲದಲ್ಲಿ ಅವರವರ ಅಭಿಪ್ರಾಯಗಳನ್ನು ಸಲ್ಲಿಸತಕ್ಕಂಥ ಸಂದರ್ಭದಲ್ಲಿ ಏನು ಒಂದು ಗೊಂದಲ ದೇಶಾದ್ಯಂತ ಎದ್ದಿತ್ತೋ ಆ ಸಂದರ್ಭದಲ್ಲಿ ಮೈಸೂರು ಸರಕಾರದವರು ಇದರ ವಿಷಯವಾಗಿ ಹೆಚ್ಚಿನ ಗೊಂದಲಕ್ಕೆ ಅವಕಾಶ ಕೊಡಬಾರದು, ಇದನ್ನು ಯಾವುದಾದರೂ ಒಂದು ರೀತಿಯಲ್ಲಿ ಸೌಮ್ಯವಾದ ರೀತಿಯಲ್ಲಿ ಬಗೆಹರಿಸಬೇಕು ಎಂಬ ಭಾವನೆಯಿಂದ, ಅದಕ್ಕೋಸ್ಕರವಾಗಿ Committee ಯನ್ನು ರಚನೆಮಾಡಿದರು. ನಮಗೆ ಒಂದು ಗೊತ್ತಾದಂಥ ಅಧಿಕೃತವಾದ ಅಂಕಿ ಅಂಶಗಳು ನಮ್ಮಲ್ಲಿ ಇಲ್ಲದೆ ಇರುವಾಗ ನಮಗೆ ಗೊತ್ತಿದ್ದ ಅಂಕಿ ಅಂಶಗಳ ಮೇಲೆ ವಿಷಯಗಳನ್ನು ತಿಳಿಸತಕ್ಕದ್ದೂ ಮತ್ತು ಒಂದು ತೀರ್ಮಾನಕ್ಕೆ ಬರುವುದೂ ಅಸಾಧ್ಯವಾಗುತ್ತದೆ, ಅಂತಹ ಸಂದರ್ಭದಲ್ಲಿ ನಾವು ಏನು ತಿಳಿಸಿದರೂ, ನಮ್ಮ ಹೇಳಿಕೆ ಮತ್ತು ನಮ್ಮ ಅಭಿಪ್ರಾಯಗಳಿಗೆ ಮನ್ನಣೆ ದೊರೆಯಲಾರದು ಎನ್ನುವ ಉದ್ದೇಶದಿಂದ ಈ ಕಮಿಟಿಯನ್ನು ರಚನೆ ಮಾಡಿ ಆ ಕಮಿಟಿಯವರು ನಮ್ಮ ಮುಂದೆ ಈ ರಿಪೋರ್ಟನ್ನು ಇಟ್ಟಿದ್ದಾರೆ. ಈ ರಿಪೋರ್ಟನ್ನು ನಾವು ಆಧಾರವಾಗಿಟ್ಟುಕೊಂಡು ಇಂದಿನ ದಿವಸ ನಾವು ನಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದೇವೆ. ಈ ರಿಪೋರ್ಟಿನಲ್ಲಿ ಬಂದಿರತಕ್ಕಂಥ ಅಂಕಿ ಅಂಶಗಳು ಕೆಲವು ಪರಿಪೂರ್ಣವಾಗಿವೆ, ಮತ್ತೆ ನಮಗೆ ಒದಗಿಸಬೇಕಾದಂಥ ಕೆಲವು ಅಂಕಿ ಅಂಶಗಳನ್ನು ಒದಗಿಸಿಲ್ಲ ಎನ್ನತಕ್ಕಂಥ ಪೀಠಿಕಾ ಪ್ರಕರಣಗಳೂ ಕೂಡ ಇವೆ. ರಿಪೋರ್ಟಿನಮೇಲೆ, ನಮ್ಮ ನಮ್ಮ ಅಭಿಪ್ರಾಯಗಳನ್ನು, ಅದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂದು ಹೇಳುವುದಕ್ಕೆ ನಮಗೆ ಸರ್ವವಿಧವಾದಂಥ ಹಕ್ಕುಬಾಧ್ಯತೆಗಳಿವೆ. ಅದರಂತೆಯೇ ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಆದರೆ Committee ಯವರಿಗೆ ಎಷ್ಟು ಅವಕಾಶ ಮತ್ತು ಸೌಲಭ್ಯಗಳಿದ್ದವೋ ಎಷ್ಟರ ಮಟ್ಟಿಗೆ ಈ ಕಮಿಟಿಯವರು ಕೆಲಸಮಾಡುವುದಕ್ಕೆ ಸಾಧ್ಯವಿತ್ತೋ, ಅದಕ್ಕಿಂತಲೂ ಹೆಚ್ಚಿನ ಒಂದು ಶ್ರಮವನ್ನು ವಹಿಸಿ ಅವರು ನಮ್ಮ ಮುಂದೆ ಈ ರಿಪೋರ್ಟನ್ನು ಕೊಟ್ಟಿದ್ದಾರೆ. ಎನ್ನುವುದು ಒಂದು ನಿರ್ವಿವಾದವಾದಂಥ ವಿಷಯ, ಒಂದು ವೇಳೆ ಇದರಲ್ಲಿರತಕ್ಕಂಥ ಅಭಿಪ್ರಾಯಗಳಿಗೆ ವ್ಯತ್ಯಾಸ ಇರುವ ಪಕ್ಷದಲ್ಲಿ ಆ ಕಮಿಟಿಯ ಎಲ್ಲಾ ಸದಸ್ಯರೂ ಕೂಡ ಒಮ್ಮತವಾದ ಅಭಿಪ್ರಾಯವನ್ನು ಏನೂ ಕೊಡುತ್ತಿರಲಿಲ್ಲ. ಆ ಕಮಿಟಿಯ ಎಲ್ಲಾ ಸದಸ್ಯರುಗಳೂ ಕೂಡ ಕಮಿಟಿಯ ರಿಪೋರ್ಟನ್ನು ಕೊಡುವಾಗ ಯಾವ dissenting note ಇಲ್ಲದೆ ತಮ್ಮ ಯಾವ ಭಿನ್ನಾಭಿಪ್ರಾಯಗಳನ್ನೂ ಕೊಡದೆ ಒಂದು ಸಂಪೂರ್ಣವಾದ ಒಮ್ಮತವಾದ ರಿಪೋರ್ಟನ್ನು ನಮ್ಮ ಮುಂದೆ ಕೊಟ್ಟಿರತಕ್ಕದ್ದು ಅದು ಸರ್ವಸಮ್ಮತವಾದ ರಿಪೋರ್ಟ್ ಎಂದು ನಮ್ಮಗಳ ಭಾವನೆ.

ಶ್ರೀ ಎ. ಭೀಮಪ್ಪನಾಯಕ್.—Fact Finding ನ್ನು ಯಾರೂ ಬದಲಾಯಿಸಿಲ್ಲ. 4 ರೂಪಾಯಿ ಕಂದಾಯ ಬರುತ್ತದೆ ಎಂಬುದನ್ನು 5 ರೂಪಾಯಿ ಎಂದರೆ ಯಾರಾದರೂ ಕಪಾಳಕ್ಕೆ ಹೊಡೆಯುತ್ತಾರೆ. ಅಂದರೆ ಸರ್ವಸಮ್ಮತವಾಗಿದೆ ಎಂಬ ಪ್ರಶ್ನೆ ಅಲ್ಲ. ಅವರು facts ಮಾತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು.—ಉದಾಹರಣೆಗೆ ಆಸ್ಪತ್ರೆಗಳ ಸಂಖ್ಯೆ ಎಷ್ಟು ಎಂಬುದನ್ನು ಕೊಟ್ಟಿದ್ದಾರೋ ಅದಕ್ಕಿಂತ ಜಾಸ್ತಿ ಇದ್ದರೆ ಅವರು ಏತಕ್ಕೆ ಅದನ್ನು ಹೇಳಲಿಲ್ಲ ?

ಶ್ರೀ ಟಿ. ಎನ್. ಮುಡಲಗಿರಿಗೌಡ.—ಶ್ರೀಮಾನ್ ಭೀಮಪ್ಪನಾಯಕ್‌ರವರು ಈಗ ತಾನೇ ಹೇಳಿದ ಹಾಗೆ 4ನ್ನು 5 ಎಂದು ಕೊಡುವುದಕ್ಕಾಗುವುದಿಲ್ಲ, 5ನ್ನು 4 ಎಂದು ಕೊಡುವುದಕ್ಕಾಗುವುದಿಲ್ಲ. ನಿಶ್ಚಯ. ಅಷ್ಟು ತಿಳುವಳಿಕೆ ನನಗಿದೆ. ಅಷ್ಟು ತಿಳುವಳಿಕೆ ನನಗಿಲ್ಲವೆಂದು ಅವರು ತಿಳಿದುಕೊಳ್ಳಬೇಕಾಗಿಲ್ಲ. ನಿನ್ನೆ ನಡೆದಂಥ ಒಂದು ಚರ್ಚೆಯಲ್ಲಿ ಶ್ರೀಮಾನ್ ಎ. ಭೀಮಪ್ಪನಾಯಕರು ಆ ರಿಪೋರ್ಟ್ ಎಷ್ಟು ಅಸಮಂಜಸವಾಗಿದೆ ಎಂಬುದನ್ನು ಅವರ ವಾಣಿಯಿಂದ ತಿಳಿಸಿದ್ದಾರೆ. ಮತ್ತು ಇಲ್ಲಿ ಅವರು ಕೊಟ್ಟಿರತಕ್ಕಂಥ ಒಂದು ರಿಪೋರ್ಟಿನ ಮೇಲೆ ಶ್ರೀಮಾನ್ ಎಸ್ ಗೋಪಾಲಗೌಡರು ಒಂದು ಕಟುವಾದ ಟೀಕೆಯನ್ನು ಮಾಡಿದ್ದಾರೆ. ನಾನು ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿದ್ದೇನೆ. ಟೀಕೆ ಮಾಡಿದ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದುದು ಸಾಧುವಾಗಿದೆಯೇ ಎಂಬುದನ್ನು ಸ್ಪಷ್ಟೀಕರಿಸುವುದಕ್ಕೋಸ್ಕರ ನಾನು ಈ ಮಾತನ್ನು ಹೇಳಬೇಕಾಗಿ ಬಂತು. ಎಲ್ಲಿ ಇದೆ ಎಂಬುದನ್ನೂ ಕೂಡ ನಾನು ತಿಳಿಸುತ್ತೇನೆ. ಅದು ರಿಪೋರ್ಟಿನ 22ನೇ ಪೇಜಿನಲ್ಲಿದೆ :—

"ಮೇಲೆ ಕಂಡ ಸರ್ವೇ ಪರಿಶೀಲನೆಯಿಂದ ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ ಭಾಷಾವಾರು ಆಧಾರದ ಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆ ಬೇರೆ ಭಾಷೆಗಳನ್ನು ಆಡತಕ್ಕ ಅಲ್ಪ ಸಂಖ್ಯಾತರನ್ನು ಬಿಟ್ಟು ಬಿಡುವುದಕ್ಕೆ ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ" ಎಂಬುದಾಗಿ ಸಮಿತಿಯವರು ಅಭಿಪ್ರಾಯವನ್ನು ಕೊಡಬೇಕಾಗಿದ್ದರೆ ಅವರೂ ಸಹ ಈ ರಿಪೋರ್ಟಿನಲ್ಲಿ ಸಂಗ್ರಹಿಸಿರತಕ್ಕಂಥ ಅಂಕಿ ಅಂಶಗಳ ಆಧಾರದ ಮೇಲೆ ಈ ಅಭಿಪ್ರಾಯವನ್ನು ಅವರು ಸೂಚಿಸಿದ್ದಾರೆ. ಈ ಅಂಕಿ ಅಂಶಗಳಾದರೂ ಕೂಡ ಅವು ಯಾವುವು ಎಂದರೆ :— ಮದ್ರಾಸ್ ಕರ್ಣಾಟಕ, ಬೊಂಬಾಯಿ ಕರ್ಣಾಟಕ, ಮತ್ತು ಹೈದರಾಬಾದ್ ಕರ್ಣಾಟಕ ಇಂತಹ ಪ್ರಾಂತಗಳಲ್ಲಿ ಇರತಕ್ಕಂಥ ಕನ್ನಡ ಮಾತನಾಡತಕ್ಕಂಥ ಜನ ಎಷ್ಟು ಜನ ಇದ್ದಾರೆ, ಕನ್ನಡ ಮಾತನಾಡದೆ ಇರತಕ್ಕಂಥ ಜನ ಎಷ್ಟು ಜನ ಇದ್ದಾರೆ, ಪ್ರತಿಯೊಂದು ಪ್ರಾಂತದಲ್ಲೂ ಕೂಡ ಎಷ್ಟೆಷ್ಟು ಕನ್ನಡ ಮಾತನಾಡದೆ ಇರತಕ್ಕಂಥ ಜನ ಇದ್ದಾರೆ, ಅವರ ರಕ್ಷಣೆಯನ್ನೂ ಅವರ ವರ್ಗಾವಣೆ ಬದಲಾವಣೆಯನ್ನೂ ಮತ್ತು ಅವರ ಪುರೋಭಿವೃದ್ಧಿಯನ್ನೂ ಯಾವ ದೃಷ್ಟಿಯಲ್ಲಿ ಮಾಡಬೇಕೆಂಬುದನ್ನು ಪರಿಶೀಲನೆ ಮಾಡುವಾಗ ಕಮಿಟಿಯವರು ಆ ಅಭಿಪ್ರಾಯಕ್ಕೆ ಬಂದಿದ್ದಾರೆ. ನಾವು ಪ್ರತಿಯೊಂದು ಪ್ರಾಂತ್ಯವನ್ನು ನೋಡುತ್ತಾ ಬಂದರೆ ಪ್ರತಿಯೊಂದು ಪ್ರಾಂತದಲ್ಲೂ ಕೂಡ ಕೆಲವು ಭಾಗಗಳಲ್ಲಿ ಹೆಚ್ಚು ಜನ ಬೇರೆ ಬೇರೆ ಭಾಷೆಯನ್ನು

ಮಾತನಾಡತಕ್ಕಂಥ ಜನಗಳು ಇದ್ದಾರೆಂಬುದು ಈ ರಿಪೋರ್ಟಿನ ಅಂಕಿ ಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗಿರುವಾಗ ನಾವು ಇಂದಿನ ದಿವಸ ಯಾವ ಸಿದ್ಧಾಂತಗಳಿಂದ ಒಂದು ತೀರ್ಮಾನಕ್ಕೆ ಬರಬೇಕು ಎನ್ನತಕ್ಕಂಥಾದ್ದು ಬಹಳ ಪ್ರಾಮುಖ್ಯವಾದ ವಿಷಯ. ನಾವು, ಮುಂದಿನ ನಮ್ಮ ಪೀಳಿಗೆ, ಎಲ್ಲರೂ ಸೌಖ್ಯವಾಗಿ ಬಾಳಿ ಬದುಕಬೇಕಾಗಿದ್ದರೆ ಯಾವ ಮುಂದಾಲೋಚನೆ ಮಾಡಬೇಕು ಎನ್ನುವುದನ್ನೂ ಕೂಡ ನಾವು ಯೋಚಿಸಬೇಕಾಗಿದೆ. ಫೆಬ್ರುವರಿ 19ನೇ ತಾರೀಖಿನ ದಿವಸ ರಾಜಪ್ರಮುಖರಾದ ಶ್ರೀಮನ್ಮಹಾರಾಜರು ಅಪ್ಪಣೆಕೊಡಿಸಿದಂಥ ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ: "ಭಾರತದ ಅನೇಕ ರಾಜ್ಯಗಳ ಎಲ್ಲೆಕಟ್ಟುಗಳನ್ನು ಬದಲಾಯಿಸಬೇಕಾದ ಸಂಭವ ಒದಗಬಹುದು. ಇಂಥ ಪರಿಣಾಮವುಂಟಾಗಬಹುದಾದ ರಾಜ್ಯಗಳ ಪೈಕಿ ನಮ್ಮ ಸಂಸ್ಥಾನವೂ ಒಂದಾಗಿದೆಯೆಂದೂ ಕಂಡುಬರುತ್ತದೆ." ಅಂದ ಮೇಲೆ ಮೈಸೂರು ಸಂಸ್ಥಾನದ ಎಲ್ಲೆ ಕಟ್ಟನ್ನೂ ಕೂಡ ಇಂತಹ ಸಂದರ್ಭದಲ್ಲಿ ಬದಲಾಯಿಸತಕ್ಕಂಥ ಪ್ರಮೇಯ ಒದಗಬಹುದು ಎಂಬುದನ್ನು ಅವರು ವ್ಯಕ್ತಪಡಿಸಿದ್ದಾರೆ. ಅಂತಹ ಪ್ರಮೇಯ ಒದಗಿದಾಗ ಯಾವ ಹಿನ್ನೆಲೆಯನ್ನು ನಾವು ಇಟ್ಟುಕೊಂಡು ಇದನ್ನು ನಾವು ಯೋಚಿಸಬೇಕು ಎನ್ನತಕ್ಕಂಥ ಒಂದು ಮುನ್ ಸೂಚನೆಯನ್ನೂ ಸಹ ಈ ರೀತಿ ಕೊಟ್ಟಿದ್ದಾರೆ. ಯಾವ ಪುನರ್ವ್ಯವಸ್ಥೆಯ ಏರ್ಪಾಡನ್ನೇ ಕೈಗೊಳ್ಳಲಿ ಅದಕ್ಕೆ ಸಂಬಂಧಪಟ್ಟ ಜನಗಳ ಹಿತಸಾಧನೆಯೇ ಅದರ ಗುರಿಯಾಗಿರಬೇಕು, ಜನರ ಸುಖ ಸಂಪತ್ತುಗಳು ಹೆಚ್ಚುವಂತಿದ್ದರೆ ಮಾತ್ರವೇ ರಾಜ್ಯಗಳ ಈಗಿನ ವ್ಯವಸ್ಥಾಕ್ರಮವನ್ನು ಬದಲಾಯಿಸುವುದು ಯುಕ್ತವಾದುದು ಎಂದು ಅವರು ವ್ಯಕ್ತಪಡಿಸಿದ್ದಾರೆ. ಇದನ್ನು ನಾವು ಬಹಳ ಪ್ರಾಮುಖ್ಯವಾಗಿಟ್ಟುಕೊಂಡು ಈ Fact Finding Committee Report ನ್ನು ಆಲೋಚನೆ ಮಾಡುವಾಗ, ಸರಿದೂಗಿಸುವಾಗ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ನಮ್ಮ ಮುಂದೆ ಕನ್ನಡ ಮಾತನಾಡತಕ್ಕಂಥ ಕನ್ನಡ ಭಾಷೆಯನ್ನು ಉಪಯೋಗಿಸತಕ್ಕಂಥ ಪ್ರಾಂತ್ಯಗಳ ಆರ್ಥಿಕ ವ್ಯವಸ್ಥೆ, ಮತ್ತು ಪ್ರಾಕೃತಿಕಸಂಪತ್ತು ಇತ್ಯಾದಿ ಎಲ್ಲಾ ಅಂಕಿ ಅಂಶಗಳನ್ನೂ ಕೂಡ ಇಟ್ಟಿದ್ದಾರೆ. ಇದನ್ನು ಯೋಚನೆ ಮಾಡುವಾಗ ನಾವು ಕನ್ನಡ ಭಾಷೆಯನ್ನು ಮಾತನಾಡತಕ್ಕಂಥ ಕನ್ನಡಿಗರಾದ ನಮ್ಮ ಅಣ್ಣ ತಮ್ಮಂದಿರ ಕ್ಷೇಮ ಸಾಧನೆಯನ್ನು ಮರೆತು ನಮ್ಮ ಕ್ಷೇಮ ಸಾಧನೆಯೇ ಮುಖ್ಯವೆಂದು ನೋಡಬಾರದು. ಅವರ ಕ್ಷೇಮವನ್ನು, ನಾವು ನೋಡತಕ್ಕದ್ದು, ಮತ್ತು ಗಮನಿಸಬೇಕಾದದ್ದು ನಮ್ಮಗಳ ಕರ್ತವ್ಯವಾಗಿದೆ.

ನಾವು ಇಂದಿನ ದಿವಸ ಸ್ವತಂತ್ರ ಭಾರತದಲ್ಲಿ ಜೀವಿಸುತ್ತಿದ್ದೇವೆ. ಭಾಷೆಯ ಅಮಲಿನಲ್ಲಿ ನಾವು ತಲೆ ಕೆಡಿಸಿಕೊಳ್ಳುವುದಕ್ಕಿಂತಲೂ ಮುಖ್ಯವಾಗಿ ಸ್ವತಂತ್ರ ಭಾರತದಲ್ಲಿ ಜೀವಿಸುತ್ತಿರುವ ಪ್ರತಿಯೊಬ್ಬ ಪ್ರಜೆಯೂ ಕೂಡ ಕ್ಷೇಮವಾಗಿರಬೇಕು, ಆತನು ಯಾವ ಭಾಷೆಯನ್ನೇ ಮಾತನಾಡುತ್ತಿರಲಿ, ಯಾವ ಪ್ರಾಂತ್ಯದಲ್ಲೇ ಇರಲಿ, ಅವರ ಕಷ್ಟವೇ ನಮ್ಮ ಕಷ್ಟ ಅನ್ನುವುದು ನಮ್ಮ ಆದ್ಯ ಕರ್ತವ್ಯ. ಭಾರತಕ್ಕೆ ಕ್ಷಾಮ ಒದಗಿದ್ದಕಾಲದಲ್ಲಿ, ಭಾರತದಲ್ಲಿ ಭೂಕಂಪ ಸಂಭವಿಸಿದ ಕಾಲದಲ್ಲಿ ನಾವು ಬೇರೆ ಭಾಷೆ ಮಾತನಾಡುವವರು, ಬೇರೆ ಪ್ರದೇಶಕ್ಕೆ ಸೇರಿದವರು ಎಂಬ ಭಾವನೆಯನ್ನು ಭಾರತೀಯರಾದ ನಾವು, ಮೈಸೂರಿನವರಾದ ನಾವು ಎಂದೂ ವ್ಯಕ್ತಪಡಿಸಿಲ್ಲ. ಕೈಲಾದಮಟ್ಟಿಗೂ, ಮನುಷ್ಯಮಾತ್ರದವನು ಹೇಗೆ ಪರಸ್ಪರ ಸೌಹಾರ್ದ ಭಾವನೆಯಿಂದ ವರ್ತಿಸಬೇಕೋ, ಅದರಲ್ಲೂ ಭಾರತೀಯರಾದ ನಮಗೆ ಸಹೃದಯತೆ ಎಷ್ಟಿರಬೇಕೋ ಅಷ್ಟೂ ಸೌಹಾರ್ದತೆಯಿಂದ, ಸಹೃದಯತೆಯಿಂದ, ಸೌಜನ್ಯತೆಯಿಂದ ಹಾಗೂ ದೇಶಪ್ರೇಮದಿಂದ ಮೊದಲಿನಿಂದಲೂ ನಡೆದುಕೊಂಡು ಬಂದಿದ್ದೇವೆ. ಆದ್ದರಿಂದ ಇವೊತ್ತಿನವರೆಗೂ ನಮ್ಮಲ್ಲಿ ಕನ್ನಡವನ್ನು ಮಾತನಾಡತಕ್ಕಂಥವರ ಯೋಗಕ್ಷೇಮವನ್ನು ಮಾತ್ರ ನಾವು ನೋಡಬೇಕು, ಕನ್ನಡಿಗರ ಯೋಗಕ್ಷೇಮವೇ ನಮ್ಮ ಸಾಧನೆ ಎಂಬ ಸಂಕುಚಿತ ಭಾವನೆ ಬೆಳೆದುಬಂದಿಲ್ಲ. ಭಾರತದ ಕೀರ್ತಿಯನ್ನು ಬೆಳೆಸತಕ್ಕ ಯಾವ ಮನುಷ್ಯನೇ ಆಗಲಿ ಅಂಥ ಸಂಕುಚಿತ ಮನೋಭಾವವುಳ್ಳವನಾಗಿದ್ದರೆ ಆತನು ಭಾರತದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುವುದಕ್ಕೆ ಅರ್ಹನಲ್ಲ. ಇಡೀ ಭಾರತ ನನ್ನದು, ಭಾರತದ ಕುಟುಂಬ ನನ್ನ ಕುಟುಂಬ ಎಂಬ ಪ್ರೇಮ ವಿಶ್ವಾಸಗಳು ಯಾವ ವ್ಯಕ್ತಿಗಿದೆಯೋ ಆ ವ್ಯಕ್ತಿಗೆ ಮಾತ್ರ ಭಾರತದಲ್ಲಿ ಪ್ರಥಮ ಸ್ಥಾನವನ್ನು, ಉಚ್ಚ ಸ್ಥಾನವನ್ನು ಪಡೆಯತಕ್ಕ ಯೋಗ್ಯತೆ ಬರುತ್ತದೆ. ಅದುಬಿಟ್ಟು, ಆಂಧ್ರದ ಮೇಲೆ ನನ್ನ ಪ್ರೇಮ ಪೂರ್ಣವಾಗಿದೆಯೆಂದು ಆಂಧ್ರನು ಹೇಳಿದರೆ, ಅಥವಾ ತಮಿಳುನಾಡಿನ ಮೇಲೆ ತನಗೆ ಪ್ರೇಮ ಪೂರ್ತಿಯಾಗಿದೆಯೆಂದು ತಮಿಳನು ಹೇಳಿದರೆ, ಅವನು ಆಯಾಪ್ರಾಂತ್ಯ ಮಾತ್ರಕ್ಕೆ ಒಬ್ಬ ಮುಖ್ಯ ವ್ಯಕ್ತಿಯಾಗಿ ಉಳಿಯಬಲ್ಲನೇ ಹೊರತು ಭಾರತದ ಪ್ರಮುಖ ವ್ಯಕ್ತಿಯಾಗಿ ಉಳಿಯುವ ಹಾಗಿಲ್ಲ. ಆದ್ದರಿಂದ ನಾವು ಇಂದು ಸ್ವತಂತ್ರ ಭಾರತದಲ್ಲಿದ್ದೇವೆಂಬುದನ್ನು ಮರೆಯಬಾರದು. ಭಾರತದ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆನಮ್ಮ ಭಾವನೆಗಳೂ ಊಹಾಪೋಹಗಳೂ ನಾನಾ ತೆರನಾಗಿದ್ದವು. ನಮಗೆ ಆಗ ಇದ್ದಂಥ ತೊಂದರೆಗಳು ತೊಡಕುಗಳು ಸಹಜವಾದುವು. ಆಗ ವಿಶೇಷವಾದ ತೊಂದರೆಗಳನ್ನೂ ತೊಡಕುಗಳನ್ನೂ ಅನುಭವಿಸಬೇಕಾದ ಸಂದರ್ಭವಿತ್ತು. ಆದರೆ ಇಂದು ಸ್ವತಂತ್ರ ಭಾರತದಲ್ಲಿರುವಾಗ ಆ ತೊಂದರೆಗಳು, ತೊಡಕುಗಳು ಬರಲಾರವು. ಯಾರು ಯಾವ ಭಾಷೆಯನ್ನೇ ಮಾತನಾಡುತ್ತಿರಲಿ ಅವನ ಹಕ್ಕುಗಳಿಗೆ ಚ್ಯುತಿಯಿಲ್ಲ. ನಮ್ಮ ಈ ಅಸೆಂಬ್ಲಿಯಲ್ಲೂ, ಹಿಂದಿನ ಅಸೆಂಬ್ಲಿಯಲ್ಲೂ ಕೂಡ ಬರೀ ಕನ್ನಡ ಮಾತನಾಡತಕ್ಕವರೇ ಬರುತ್ತಿರಲಿಲ್ಲ. ಬೇರೆ ಬೇರೆ ಭಾಷೆಗಳನ್ನಾಡುವ ಜನರೂ ಕೂಡ ದೇಶವನ್ನು ಪ್ರತಿನಿಧಿಸತಕ್ಕ, ದೇಶದ ಸೌಭಾಗ್ಯವನ್ನು, ಬೆಳಕನ್ನು ಬೆಳಗುವ ಪ್ರತಿನಿಧಿಗಳು ಈ ಸಭೆಗೆ ಬರುವ ಅವಕಾಶವನ್ನು ಮೈಸೂರಿನವರು ಮೊದಲಿನಿಂದಲೂ ಪಡೆದು ಬಂದಿದ್ದಾರೆ. ಅಂದಮೇಲೆ ಸ್ವತಂತ್ರ ಭಾರತದಲ್ಲಿ ನಾವು ಪ್ರಾಂತ್ಯಗಳಲ್ಲಿ ಭಾಷೆಭಾಷೆಗಳಿಗೆ ಉಂಟಾಗಬಹುದಾದ ತಿಕ್ಕಾಟಕ್ಕೆ ಅವಕಾಶ ಕೊಟ್ಟು ಮೈಸೂರಿನ ಭವಿಷ್ಯವನ್ನು ಕೆಡಿಸುವುದು ಸರಿಯೇ? ಭಾರತಕ್ಕೆ ಭವಿಷ್ಯ ಭವ್ಯವಾಗಿರಬೇಕೆಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಭಾಷೆಗಳ ತಿಕ್ಕಾಟಕ್ಕೆ ಪ್ರಾಂತಗಳ ತಿಕ್ಕಾಟಕ್ಕೆ ಅವಕಾಶಕೊಟ್ಟು ಕೇಂದ್ರ ಸರ್ಕಾರದ ಭದ್ರತೆಯನ್ನು ಸಡಿಲಿಸಿ, ಇಂಥ ಭಾಷಾ ಪ್ರಾಂತ್ಯಗಳ ನಿರ್ಮಾಣವನ್ನೋ ಭಾಷೆಗಳ ಮೇಲಿನ ಪ್ರೇಮವನ್ನೋ ಬಯಸತಕ್ಕದ್ದು ಸರಿಯೋ ಎಂಬುದನ್ನು ಯೋಚನೆಮಾಡಬೇಕು. ಇದರಿಂದ ನಮ್ಮ ಭವ್ಯ ಭಾರತದ ಹಿತಕ್ಕೆ ಎಷ್ಟು ಧಕ್ಕೆ ಬರುತ್ತದೆ, ಭದ್ರವಾಗಿ ಬೆಳೆದು ನಿಲ್ಲುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಬೇಕೇ ಹೊರತು, ಬರೀ ನಮ್ಮ ಪ್ರಾಂತ್ಯದಲ್ಲಿ ನಾವು ಭದ್ರವಾಗಿ ಉಳಿಯಬಲ್ಲೆವು, ನಮ್ಮ ಸ್ಥಾನಮಾನಗಳು ಭದ್ರವಾಗಬಲ್ಲವು, ನಮ್ಮ ನಮ್ಮ ಜನ ಪುರೋಭಿವೃದ್ಧಿಗೆ ಬರುವುದಕ್ಕೆ ಸಾಧ್ಯವಾಗಬಹುದು

(ಟಿ. ಎಸ್. ಮೂಡಲಗಿರಿಗೌಡ.)

ಎಂದು ಯೋಚನೆ ಮಾಡುವುದು ಸರಿಯಲ್ಲ. ಭಾರತ ಇಂದು ಮಹೋನ್ನತಿಯ ಮಟ್ಟಕ್ಕೆ ಬಂದಿದೆ; ಇನ್ನು ಅದು ಅಧೋಗತಿಗೆ ಇಳಿಯಲು ಸಾಧ್ಯವಿಲ್ಲ—ಇಳಿಸು ವುದು ಸರಿಯೂ ಅಲ್ಲ. ಈಗಿರುವ ಚೌಕಟ್ಟಿನಲ್ಲಿ ಅದು ಸಾಧ್ಯವಿಲ್ಲವೆಂದು ಎಲ್ಲರೂ ಮನಗಂಡವರಾಗಿದ್ದಾರೆ.

ಇಂದು ಮುಖ್ಯವಾಗಿ ನಾವು ನೋಡಬೇಕಾದದ್ದು ಅಷ್ಟೇ ಹೊರತು, ಅಲ್ಲಿನ (ಮೈಸೂರೇತರ ಕನ್ನಡ ಪ್ರಾಂತ್ಯಗಳ) ಪುರೋಭಿವೃದ್ಧಿ ಕಾರ್ಯಗಳೇ ಆಗಲಿ, ರಸ್ತೆ ನಿರ್ಮಾಣ ಕಾರ್ಯಗಳೇ ಆಗಲಿ, ಸ್ಕೂಲುಗಳ, ವಿದ್ಯುಚ್ಛಕ್ತಿ ಕಾಮಗಾರಿಗಳ ಬಗ್ಗೆ ಇರುವ ಅಂಕಿ ಅಂಶಗಳನ್ನೇ ಆಗಲಿ ಯೋಚನೆ ಮಾಡುತ್ತಾ ಬಂದರೆ, ನಮ್ಮಲ್ಲಿಯೂ ಕೆಲವು ಭಾಗಗಳಲ್ಲಿ ಕೊರತೆಯಿರತಕ್ಕ ಸನ್ನಿವೇಶಗಳು ಇದ್ದೇ ಇವೆ. ಇಲ್ಲಿಗಿಂತ ಪುರೋಭಿ ವೃದ್ಧಿ ಕಾರ್ಯಗಳು ಕೆಲವು ಅಲ್ಲಿವೆಯೆಂದು ಕೆಲವರು ಹೇಳಿದ್ದಾರೆ. ಇನ್ನು ಕೆಲವರು ವಿಶೇಷವಾಗಿ ಹಣ ವನ್ನು ನಾವು ಖರ್ಚುಮಾಡಬೇಕಾದ ಸನ್ನಿವೇಶ ಒದ ಗುತ್ತದೆಂದೂ ಹೇಳಿದ್ದಾರೆ. ಈಗತಾನೆ ಮಾತನಾ ಡಿದ ಶ್ರೀಮಾನ್ ಇಮಾಂ ಸಾಹೇಬರು ಬೊಂಬಾಯಿ ಕನ್ನಡ ಪ್ರಾಂತ್ಯದಲ್ಲಿ ಇಲ್ಲಿಗಿಂತಲೂ ರಸ್ತೆಗಳು ಉತ್ತ ಮವಾಗಿವೆ, ವಿದ್ಯಾಭ್ಯಾಸ ಹೆಚ್ಚಾಗಿದೆಯೆಂದು ತಿಳಿಸಿ ದರು. ಆದರೆ, ಈ ರಿಪೋರ್ಟಿನಲ್ಲಿ ನೋಡುವುದಾ ದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆಯೇ ಹೊರತು ಸ್ಕೂಲುಗಳ ಸಂಖ್ಯೆ ಇಲ್ಲಿಗಿಂತ ಹೆಚ್ಚಾಗಿದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏನೇ ಇರಲಿ, ಇವೆಲ್ಲಾ ನಾನಾಗಲೇ ಹೇಳಿದಹಾಗೆ, ಅಷ್ಟು ಪ್ರಾಮುಖ್ಯವಾದ ವಿಷಯಗಳಲ್ಲ. ಹತ್ತಾರು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿ ಆ ಪ್ರಾಂತ್ಯವನ್ನು ಅಭಿ ವೃದ್ಧಿಗೆ ತರುವುದಕ್ಕೆ ಸಾಧ್ಯವಿದೆ. ಹತ್ತಾರುಕೋಟಿ ರೂಪಾಯಿಗಳನ್ನು ಬೇಕಾದರೂ ಖರ್ಚುಮಾಡೋಣ. ನಾವು ಎಷ್ಟು ಸುಖ ಸಂತೋಷದಿಂದ ಬಾಳಬೇಕೆಂದು ಇಷ್ಟಪಡುತ್ತೇವೆಯೋ, ನಮ್ಮ ಅಣ್ಣತಮ್ಮಂದಿ ರಾದ ಅವರನ್ನೂ ಅಷ್ಟು ಉನ್ನತಸ್ಥಿತಿಗೆ ತರ ಬೇಕೆಂಬ ಅಭಿಪ್ರಾಯದಿಂದ ಕೆಲಸ ಮಾಡುತ್ತೇವೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಹೀಗೆ ಪ್ರಾಂತ್ಯಗಳನ್ನು ಒಂದು ಮಾಡುವುದರಿಂದ ನಮಗೆ ಆಗತಕ್ಕ ನಷ್ಟವೇನು, ಜವಾಬ್ದಾರಿಯೇನು, ಇಂದು ಆ ಜವಾಬ್ದಾರಿಯನ್ನು ಹೊರುವುದಕ್ಕೆ ಶಕ್ತಿಯಿದೆಯೇ—ಇವುಗಳನ್ನು ನೋಡಬೇಕು. ಹೊರ ಬಹುದಾಗಿದ್ದರೆ ಎಷ್ಟು ಭಾರವನ್ನಾದರೂ ಹೊರೋಣ. ಈಗಿರತಕ್ಕ ಮದ್ರಾಸ್ ಕನ್ನಡ ಪ್ರಾಂತ್ಯವನ್ನೇ ಆಗಲಿ, ಬೊಂಬಾಯಿ ಕನ್ನಡ ಪ್ರಾಂತ್ಯವನ್ನೇ ಆಗಲಿ ಹೈದರಾ ಬಾದ್ ಕನ್ನಡ ಪ್ರಾಂತ್ಯವನ್ನೇ ಆಗಲಿ, ನಾವು ತೆಗೆದು ಕೊಂಡರೆ ಅಲ್ಲಿರತಕ್ಕ ಸಾಲಗಳು, ಅಲ್ಲಿನ liabilities ಎಲ್ಲವೂ, ಸುಮಾರು ಒಂದುನೂರು ಕೋಟಿ ರೂಪಾಯಿ ಗಳು, ಮರುಕ್ಷಣದಲ್ಲಿ ನಮ್ಮ ಮೇಲೆ ಬರುತ್ತ ವೆಂಬುದನ್ನು ಪ್ರಾಮುಖ್ಯವಾಗಿ ನೋಡತಕ್ಕದ್ದು ನಮ್ಮ ಕರ್ತವ್ಯ. ಎಷ್ಟೇ ಒಪ್ಪಿ ಈ ದಿವಸ ಒಂದು ಆಸ್ತಿ ಯನ್ನು ಕೊಂಡುಕೊಂಡರೇ ಆಗಲಿ, ಒಂದು ಸಂಬಂಧ ವನ್ನು ಬೆಳೆಸಿದರೇ ಆಗಲಿ, ಅದರೊಡನೆ ಬರತಕ್ಕ ಸೌಖ್ಯವೆಷ್ಟು, ಸಾಲದ ಜವಾಬ್ದಾರಿಯೆಷ್ಟು ಎಂಬು ದನ್ನೂ ಗಣನೆಗೆ ತೆಗೆದುಕೊಳ್ಳುವುದು ಮುಖ್ಯ. ಹುಡುಗಿ ನಾಗರಿಕತೆಯಿಂದಿಲ್ಲವೆಂದು ಹೇಳಿದರೂ ನಮ್ಮ ಮನೆಗೆ ಕರೆದುಕೊಂಡು ಹೋದಮೇಲೆ ನಾಗ ರಿಕಳನ್ನಾಗಿ ಮಾಡಬಹುದು. ಅದು ಅಷ್ಟು ಕಷ್ಟ ವಾದ ಕೆಲಸವಲ್ಲ. ಆದರೆ ಹುಡುಗಿಯನ್ನು ತಂದು ಕೊಳ್ಳುವುದರಿಂದ ಬರತಕ್ಕ ಕಷ್ಟ ನಷ್ಟವೇನು, ಒಟ್ಟಿ ನಲ್ಲಿ ಅದರಿಂದ ನಮಗೆ ಸುಖ ದೊರಕುತ್ತದೆಯೋ ಅಥವ ನಷ್ಟ ಆಗುತ್ತದೆಯೋ ಎಂಬುದನ್ನು ತೀವ್ರವಾಗಿ ಯೋಚನೆ ಮಾಡಬೇಕು. ಒಂದು ಸಂಬಂಧವನ್ನು ಬೆಳೆಸುವುದರಿಂದ, ಹುಡುಗಿಯ ತಂದೆತಾಯಿಗಳ ಸಾಲಸೋಲಗಳೂ ತಲೆಯ ಮೇಲೆ ಬೀಳುವುದಾದರೆ, ಆ ಸಾಲವನ್ನು ತೀರಿಸುವುದೇ ಒಂದು ದೊಡ್ಡ ಗಂಡಾಂತರವಾಗುತ್ತದೆ.

ಆದ್ದರಿಂದ ಈ ಪ್ರಶ್ನೆ ಅಷ್ಟು ಸುಲಭವಾದ ಪ್ರಶ್ನೆಯಲ್ಲ. ನಾವು ಅವರ ಪುರೋಭಿವೃದ್ಧಿಗೆ ಕೈಹಾಕುವುದಕ್ಕೆ ಮೊದಲು, ಅವರನ್ನು ನಮ್ಮ ಸರಿಸಮಾನರಾಗುವಂತೆ ಪರಿವರ್ತನೆ ಮಾಡು ವುದಕ್ಕೆ ಮೊದಲು, ಹೆಚ್ಚಾಗಿ ನಮಗೆ ಅವರಿಂದ ಉಂಟಾಗತಕ್ಕ ಹಾನಿ ಎಷ್ಟೆಂಬುದನ್ನು ಪರಿಗಣಿಸು ವುದು ಪ್ರಾಮುಖ್ಯವಾದ ವಿಷಯ. ಹೀಗೆ ಅಗಾಧ ವಾದ ಹಾನಿಕಾರಕ ಪರಿಸ್ಥಿತಿ ಬರುವಾಗ ಅದನ್ನು ಪರಿಹರಿಸುವುದು ಹೇಗೆ ? ಇದು ಅಷ್ಟು ಹಗುರವಾಗಿ ಯೋಚನೆ ಮಾಡತಕ್ಕ ಪ್ರಶ್ನೆಯಲ್ಲ. ಕಷ್ಟನಷ್ಟಗಳಿ ಲ್ಲದೆ ತೊಂದರೆಗಳೇ ಬರುವುದಿಲ್ಲ ಎನ್ನುವಹಾಗಿದ್ದರೆ, ಒಂದೇ ಒಂದು ಪ್ರಾಂತ್ಯವನ್ನಾಗಿ ಮಾಡೋಣ. ಆದರೆ ಈಗ, ಅಲ್ಲಿ ಖರ್ಚುಮಾಡುವ ಪ್ರತಿಯೊಂದು ಕಾಸೂ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೂ ಬೀಳುತ್ತದೆಂಬುದನ್ನು ನಾವು ಮರೆಯ ಬಾರದು. ನಮ್ಮ ಮೇಲೆ ಬೀಳತಕ್ಕ ಜವಾಬ್ದಾರಿ ಯನ್ನು ಎಲ್ಲರೂ ಹಂಚಿಕೊಳ್ಳಬೇಕಾಗುತ್ತದೆ. ನಮ ಗೀಗ ಅದನ್ನು ಹಂಚಿಕೊಂಡು ಹೊರತಕ್ಕ ಶಕ್ತಿ ಯಿದೆಯೇ ? ನಮ್ಮ ಪುರೋಭಿವೃದ್ಧಿಯನ್ನು ಸಾಧಿಸ ಬೇಕಾದರೇ ನಾವು ಇವೊತ್ತಿನ ದಿವಸ ಇಂಡಿಯಾ ಸರ್ಕಾರದವರ ನೆರವನ್ನು ಬೇಡುತ್ತಿದ್ದೇವೆ. ಒಂದು ವೇಳೆ ಇದಕ್ಕೂ ನೆರವನ್ನು ಕೊಡುತ್ತಾರೆಂದು ಭಾವಿ ಸೋಣ. ಆ ನೆರವನ್ನು ಪಡೆದರೂ ಈ ಹೊಣೆಗಾರಿಕೆ ಯನ್ನೂ ಹೊತ್ತು ನಮ್ಮ ಪುರೋಭಿವೃದ್ಧಿ ಸಾಧನೆ ಯನ್ನೂ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದು ಪ್ರಾಮುಖ್ಯವಾಗಿ ಗಮನಿಸಬೇಕಾದ ವಿಷಯ. ಬಗೆ ಹರಿಯತಕ್ಕ ಮಾರ್ಗವೇ ನಮಗೆ, ಗೊತ್ತಾಗುತ್ತಿಲ್ಲ.

2-30 P.M.

ಇದನ್ನು ನಾವೀಗ ಬಗೆಹರಿಸಬೇಕಾಗಿದೆ. ಇನ್ನೊಂದು ರೀತಿಯಲ್ಲಿ ವಿಚಾರಮಾಡಿ ನೋಡೋಣ. 100; 200 ವರ್ಷಗಳ ಹಿಂದೆ ಆ ನಮ್ಮ ಅಣ್ಣ ತಮ್ಮಂದಿರುಗಳು ನಮ್ಮ ಕುಟುಂಬವನ್ನೇ ಬಿಟ್ಟು ಬೇರೆ ಕಡೆಗೆ ಹೊರಟು ಹೋಗಿದ್ದಾರೆ. ಹಾಗೆ ಅವರು ಹೊರಟುಹೋಗಿ ಯಾವುದೋ ಒಂದು ದೂರದೇಶದಲ್ಲಿ ನೂರಾರು ವರ್ಷ ಗಳ ತನಕ ಇದ್ದು ಈಗ 'ಅವರು ನಾವೂ ಬರುತ್ತೇವೆ, ನಿಮ್ಮ ಕುಟುಂಬದಲ್ಲೇ ಇರುತ್ತೇವೆ' ಎಂದು ಹೇಳಿದರೆ, ಹಾಗೆ ಅವರು ಬಂದು ನಮ್ಮ ಸಂಸಾರದಲ್ಲಿ ಸೇರಿ ಕೊಳ್ಳುವುದರಿಂದ ನಮ್ಮ ಸಂಸಾರಕ್ಕೇನೂ ತೊಂದರೆ ಯಾಗುವುದಿಲ್ಲ. ಇದರಿಂದೇನೂ ಕಳವಳಕ್ಕೆ ಆಸ್ಪದ ವಿಲ್ಲ ಎಂದು ಹೇಳತಕ್ಕವರು, ನೂರಕ್ಕಂತೂ ಇಲ್ಲ, ಲಕ್ಷಕ್ಕಾದರೂ ಹಾಗೆ ಹೇಳತಕ್ಕವರು ಎಷ್ಟಿದ್ದಾರೆ ಎಂದು ನಾವು ಈಗ ನೋಡಬೇಕಾಗಿದೆ. ಹಾಗೆ ಒಂದು ಕುಟುಂಬದಲ್ಲಿದ್ದು ಒಂದಾವರ್ತಿ ಬಿಟ್ಟುಹೋದನಂತರ ಆ ಅಣ್ಣತಮ್ಮಂದಿರು ಪುನಃ ಬಂದು ಅದೇ ಕುಟುಂ ಬಕ್ಕೆ ಸೇರಿರತಕ್ಕಂಥ ಸನ್ನಿವೇಶಗಳನ್ನು ನಾನು ಜಗತ್ತಿ ನಲ್ಲೇ ಈವರೆಗೆ ಎಲ್ಲಿಯೂ ನೋಡಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಆಸ್ತಿ ಇದ್ದರೆ ಬರಲಿ ಎಂದು ಹೇಳುತ್ತಿದ್ದಾರೋ ?

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆಸ್ತಿ ಇದ್ದರೂ ಬಂದು ಒಂದುಗೂಡಿದ್ದು ನೋಡಿಲ್ಲ. ಶ್ರೀಮಾನ್ ಮಹಮ್ಮದ್ ಇಮಾಂರವರು ತೆಂಗಿನಕಾಯಿಯ ಒಂದು ಉದಾಹರಣೆ ಕೊಟ್ಟರು. ಆದರೆ ಒಂದಾವರ್ತಿ ಆ ತೆಂಗಿನಕಾಯಿ ಒಡೆದುಹೋದಮೇಲೆ ಮತ್ತೆ ಅದನ್ನು ಒಂದುಗೂಡಿಸುವುದಕ್ಕೆ ಆ ಸೃಷ್ಟಿಕರ್ತನಿಗೂ ಕೂಡ ಸಾಧ್ಯವಿಲ್ಲ. ಹಾಗೆಯೇ ಒಡೆದುಹೋದಂಥ ದೇಹವನ್ನು ಕೂಡಿಸುವುದೂ, ಈ ಒಡೆದುಹೋದಕಾಯಿ ಯಂತೇ ಆಗುವುದಿಲ್ಲವೇ ? ಇದು ಸಾಧ್ಯವೇ ಎಂದು ಕೇಳಬೇಕಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಬಳ್ಳಾರಿ ಕಾಯಿ ಹೇಗೆ ಸೇರಿಕೊಂಡಿತೋ, ಈ ಕಾಯಿಗಳೂ ಹಾಗೆಯೇ ಸೇರಿಕೊಳ್ಳುತ್ತವೆ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಬಳ್ಳಾರಿ ತೆಂಗಿನಕಾಯಿಯಲ್ಲಿ ನೀರಿದೆ ಎಂಬ ಒಂದು ಭ್ರಮೆ ಯಿತ್ತು. ಬಳ್ಳಾರಿ ತೆಂಗಿನಕಾಯಿ ಕೈಗೆ ತೆಗೆದು ಕೊಂಡು ನೋಡಿದಾಗ ನೀರೆಲ್ಲಾ ಹೋಗಿದೆಯೆಂಬುದು ಗೊತ್ತಾಯಿತು. ಆದರೆ ನಾವು ಹಾಗೆಲ್ಲಾ ಮಾತ ನಾಡಬಾರದು ; ಒಂದು ಗೌರವ ಮನೋಭಾವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ಆದುದರಿಂದಲೇ ನಾವು ಹೀಗೆ ಹೇಳುತ್ತಿರುವಾಗ, ಅವ ರನ್ನೂ ದೂರವಿಡಬೇಕು, ಅವರನ್ನು ಕಡೆಗಣ್ಣಿನಿಂದ ನೋಡಬೇಕು, ಅವರು ಹಾಗೆಯೇ ಕಷ್ಟದಲ್ಲಿರಲಿ ಅನ್ನತಕ್ಕಂಥ ಭಾವನೆ ನಮಗಿರಬಾರದು, ಹಾಗೆ ಯೋಚಿಸತಕ್ಕದ್ದು ಸರಿಯಾದ್ದಲ್ಲ, ಆ ನಮ್ಮ ಅಣ್ಣ ತಮ್ಮಂದಿರೂ ನವ್ಮ ಮಟ್ಟಕ್ಕೆ ಬರಬೇಕು. ಹಾಗೆ ಅವರೂ ಸಹ ನಮ್ಮಂತೆ ಸುಖದಿಂದಿರಬೇಕಾದರೆ ಯಾವ ಮಾರ್ಗಗಳನ್ನು ನಾವು ಕಂಡುಹಿಡಿಯಬೇಕು ಎನ್ನು ವುದು ಇಂದಿನ ಮುಖ್ಯ ಪ್ರಶ್ನೆ. ಇದಕ್ಕೆ ಒಂದು ಸುಗಮವಾದ ದಾರಿಯನ್ನು ಕಂಡುಹಿಡಿಯದೆ ''ನಾವೂ ಸಹ ಬಂದು ನಿಮ್ಮ ಮೈಸೂರಿನಲ್ಲೇ ಸೇರಿ ಕೊಳ್ಳುತ್ತೇವೆ'' ಎಂದು ಹೇಳಿದರೆ ಇದರಲ್ಲಿ ಏನು ಅರ್ಥ ವಿದೆ ಅನ್ನುವುದನ್ನು ಎಷ್ಟು ಆಲೋಚನೆ ಮಾಡಿನೋಡಿ ದಾಗ್ಯೂ ಅದು ನನಗೆ ಗೊತ್ತಾಗುತ್ತಿಲ್ಲ. ಆದರೆ ದಕ್ಷಿಣ ಇಂಡಿಯಾದಲ್ಲಿ ನಮ್ಮ ಮೈಸೂರು ತನ್ನದೇ ಆದಂಥ ಒಂದು ವೈಶಿಷ್ಟ್ಯವನ್ನು, ಒಂದು ಸಂಸ್ಕೃತಿ ಯನ್ನು ಮತ್ತು ಒಂದು ಸಾಂಪ್ರದಾಯವನ್ನು ಬೆಳೆಸಿ ಕೊಂಡು ಬಂದಿರತಕ್ಕದ್ದಾಗಿದೆ ಎನ್ನುವುದನ್ನು ಮರೆಯಬಾರದು. ನಾವು ಸಾಮಾನ್ಯವಾಗಿ ಯಾವ ಒಂದು ತೆಲಗು ಪ್ರಾಂತ್ಯಕ್ಕೆ ಹೋಗಲಿ, ಅಥವಾ ತಮಿಳು ಪ್ರಾಂತ್ಯಕ್ಕೇ ಹೋಗಿ ನೋಡಲಿ ಅಥವಾ ಕನ್ನಡ ಪ್ರಾಂತ್ಯಕ್ಕೆ ಹೋಗಿ ನೋಡಲಿ, ಕೇವಲ ಭಾಷೆ ಯೊಂದರಲ್ಲಿ ವ್ಯತ್ಯಾಸ ಕಂಡುಬರುತ್ತಿದೆಯೇ ವಿನಾ ಸಂಪ್ರದಾಯ ಅಥವಾ ಜನರ ನಡವಳಿಕೆಗಳಲ್ಲಿ ಯಾವ ಒಂದು ಹೆಚ್ಚು ವ್ಯತ್ಯಾಸವೂ ಇದ್ದಂತೆ ಕಂಡುಬರುವು ದಿಲ್ಲ. ಈಗ ನಾವು ಈ ನಮ್ಮ ಮೈಸೂರು ದೇಶ ವನ್ನು ತೆಗೆದುಕೊಂಡು ನೋಡೋಣ: ಇದು ತನ್ನ ಒಂದು ಭಾಷೆಯಮೇಲೆ ಬೆಳೆದುಕೊಂಡು ಬಂದಂಥ ದೇಶವಾಗಿರುವುದಿಲ್ಲ. ಇದು ತನ್ನದೇ ಆದಂಥ ಒಂದು ವೈಶಿಷ್ಟ್ಯದಮೇಲೆ ಬೆಳೆದುಕೊಂಡುಬಂದಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ಯಾವುದೋ ಅಂಥ ಒಂದು ವೈಶಿಷ್ಟ್ಯ!

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶ್ರೀಮಾನ್ ಚೆನ್ನಿಗರಾಮಯ್ಯನವರು ಅಂಥ ಒಂದು ವೈಶಿಷ್ಟ್ಯ ಯಾವುದು ಎಂದು ಕೇಳುತ್ತಿರುವುದು ನನಗೆ ಅವರು ಈ ಅಂಶವನ್ನು ಬಹಳ ಒಳ್ಳೆಯ ಸಮಯದಲ್ಲೇ ಎಚ್ಚರಿಸಿ ದಂತಾಯಿತು. ಅದು ಏನೆಂದರೆ ಈ ನಮ್ಮ ಮೈಸೂ ರಿನ ಜನತೆ, ಇಡೀ ಇಂಡಿಯಾದೇಶದಲ್ಲಿ ಮತ್ತು ಪ್ರಪಂಚ ದಲ್ಲಿ ಎಲ್ಲಿಗೆ ಹೋಗಲಿ, ಇದಕ್ಕೆ ಒಂದು ಹೆಚ್ಚಿನಗೌರವ, ಮರ್ಯಾದೆ ಮತ್ತು ಒಂದು ಹೆಚ್ಚಿನ ಸ್ಥಾನಮಾನ ದೊರೆಯುತ್ತಿದೆ. ಇತರ ಎಲ್ಲ ಭಾಗಗಳಿಗಿಂತಲೂ ಈ ಮೈಸೂರಿಗೇ ಒಂದು ಹೆಚ್ಚಿನ ಸ್ಥಾನಮಾನವಿದೆ. ಈ ಮೈಸೂರಿನ ಮಕ್ಕಳು ಇಡೀ ಪ್ರಪಂಚದ ಮೂಲೆ ಮೂಲೆಯಲ್ಲೂ ನಮ್ಮ ಮೈಸೂರಿನ ಕೀರ್ತಿಯನ್ನು ಬೆಳ ಗಿದ್ದಾರೆ. ನಮ್ಮ ಮೈಸೂರು ಹೀಗೆ ಘನತೆ ಗೌರವ ಗಳನ್ನು ಪಡೆದಿರುವುದು ಕೇವಲ ಇಂಡಿಯಾ ದೇಶದಲ್ಲೇ ಅಲ್ಲ; ಈ ನಮ್ಮ ಮೈಸೂರಿಗೆ ಎಲ್ಲೆಲ್ಲೂ ಇಂಥ ಒಂದು ಗೌರವ ವಿದೆ. ಇವರು ಇಂಗ್ಲೆಂಡಿಗೆ ಹೋಗಲಿ, ಜಪಾನ್ ಅಥವಾ ಜರ್ಮನಿಗೆ ಹೋಗಲಿ, ಯಾವ ದೇಶಕ್ಕೇ ಹೋಗಲಿ ಅಲ್ಲೂ ಸಹ ನಮ್ಮ ಮೈಸೂರಿನ ಪ್ರಜೆಗಳಿಗಿರುವಷ್ಟು ಗೌರವ ಮತ್ತು ಸ್ಥಾನ ಮಾನ ಗಳು ಮತ್ತೆ ಯಾವ ದೇಶದವರಿಗೂ ಇಲ್ಲವೆಂದರೆ ಇದಕ್ಕೆ ಯಾರದೂ ಭಿನ್ನಾಭಿಪ್ರಾಯ ಇರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಮೈಸೂರು ತನ್ನದೇ ಆದಂಥ ಒಂದು ವೈಶಿಷ್ಟ್ಯದಮೇಲೆ ಬೆಳೆದುಕೊಂಡು ಬಂದಿದೆ. ಈ ಮೈಸೂರಿನ ವೈಶಿಷ್ಟ್ಯ ಏನೆಂದರೆ ಮತ್ತೊಬ್ಬರ ಏಳಿಗೆಗೆ ಕುಂದುಕವನ್ನು ಬಯ ಸದೆ, ಅನ್ಯರಿಗೆ ಅನಾನುಕೂಲಪಡಿಸದಂತೆ ತನ್ನ ಏಳಿಗೆ ಯನ್ನು ತಾನು ಸಾಧಿಸಿರುವುದು. ಈ ದಿವಸ ಅದನ್ನು ಕೆಳಗಿಳಿಸುವುದಕ್ಕೆ ಅಥವಾ ಅದನ್ನು ಒಂದು ಕೀಳು ಭಾವನೆಯಿಂದ ನೋಡುವುದಕ್ಕೆ ಯಾರೂ ಮನಸ್ಸನ್ನು ಮಾಡಬಾರದು. ಹೀಗೆ ಹಿಂದಿನಿಂದಲೂ ನಮಗೊಂದು ವಿಶಿಷ್ಟತೆಯನ್ನು ಬೆಳಸಿಕೊಂಡು ಬರುವಂತೆ ಮಾಡಿ ದವರಿಗೆ ನಾವೀದಿವಸ ಒಂದು ಅಗೌರವ ಮಾಡತಕ್ಕದ್ದು ಸರಿಯಲ್ಲ. ನಾವೆಲ್ಲರೂ ಇಡೀ ಭಾರತದಲ್ಲೇ ನಮ್ಮ ಈ ಮೈಸೂರಿನ ಹಿರಿಮೆಯನ್ನು ಎತ್ತಿಹಿಡಿಯಬೇಕಾ ಗಿದೆ. ಇದಕ್ಕೆ ಇಡೀ ಭಾರತದಲ್ಲೇ ಈ ದಿವಸ ಹೆಚ್ಚಿನ ಮನ್ನಣೆ ದೊರೆತಿದೆ. ಆದರೆ ಹೀಗೆ ನಮ್ಮ ಮೈಸೂ ರಿನ ವೈಶಿಷ್ಟ್ಯ ಇನ್ನೊಬ್ಬರಿಗೆ ಹಿಂಸೆ ಕೊಡತಕ್ಕ ಅಥವಾ ಇನ್ನೊಬ್ಬರ ಕ್ಷೇಮವನ್ನು ಕುಂಠಿತಗೊಳಿಸ ತಕ್ಕಂಥಾದ್ದಲ್ಲ. ನಾವೂ ಸುಖವಾಗಿ ಬೆಳೆದು ಅನ್ಯರಿಗೂ ಅಂಥ ಅವಕಾಶ ದೊರೆಯಲೆಂದು ಬಯಸುವಂಥ ಒಂದು ಸಂಪ್ರದಾಯವನ್ನು ನಾವು ಬೆಳಸಿಕೊಂಡು ಬಂದಿದ್ದೇವೆ. ಅಷ್ಟು ಹೊರತು ನಾವು ಅನ್ಯರ ಅಭಿವೃದ್ಧಿಗೆ ಎಂದೂ ಅಡ್ಡಿಪಡಿಸಿಲ್ಲ. ಹೀಗೆ ನಾವು ನಮ್ಮದೇ ಆದಂಥ ಒಂದು ಸಂಪ್ರ ದಾಯವನ್ನು ಬೆಳೆಸಿಕೊಂಡು ಬಂದಿರುವಾಗ ಇದನ್ನು ಕುಲಗೆಡಿಸುವುದು, ಈ ದಿವಸ ಕಮ್ಮಿಮಾಡುವುದು ಸರಿಯಾದುದಲ್ಲ. ಆದರೆ ಅಂಥ ಒಂದು ಸಮಸ್ಯೆ ಈ ದಿವಸ ಬಂದದೆ; ಅದನ್ನು ನಾವೀದಿವಸ ಬಹಳ ಎಚ್ಚರಿಕೆ ಯಿಂದ ಬಗೆಹರಿಸಬೇಕಾಗಿರುತ್ತೆಂದು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ.

ಸ್ವಾಮಿ, ನಮ್ಮ ಮೈಸೂರಿನ ದಿವಾನಗಿರಿಯನ್ನು ಮತ್ತು ಮೈಸೂರಿನ ಆಡಳಿತವನ್ನು ಹೊರಗಿನಿಂದ ಬಂದವರು ಅನೇಕರು ಮಾಡಿದ್ದಾರೆ. ಸರ್. ಕೆ. ಶೇಷಾದ್ರಯ್ಯರ್ ಅವರು ಇಲ್ಲಿ ದಿವಾನಗಿರಿ ಮಾಡಿ ದರು. ಮೈಸೂರಿನಲ್ಲಿ ಶ್ರೀ ರಂಗಾಚಾರ್ಲು ಅವರು ದಿವಾನರಾಗಿದ್ದರು. ಇವರೆಲ್ಲರೂ ಹೊರಗಿನವರೇ ? ಹೀಗೆ ಎಷ್ಟೋ ಜನ ಹೊರಗಡೆಯಿಂದ ಇಲ್ಲಿಗೆ ಬಂದು ಆಡಳಿತಮಾಡಿದ್ದಾಗ್ಯೂ ಅವರು ಯಾರೊಬ್ಬರೂ ಈ ನಮ್ಮ ಮೈಸೂರಿನ ಒಂದು ಹಿರಿಮೆಯನ್ನಾಗಲಿ ಅಥವಾ ಇದರ ಎಲ್ಲೆಕಟ್ಟನ್ನಾಗಲಿ ಹೆಚ್ಚುಕಡಮೆ ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಕಡಮೆ ಮಾಡುವುದು ಬೇಡ. ಅವರು ಹೆಚ್ಚುಮಾಡುವುದಕ್ಕೆ ಪ್ರಯತ್ನಪಟ್ಟಿದ್ದರೋ ?

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮೈಸೂರನ್ನು ಸೇರಿಸಿ ಅಖಂಡ ಕರ್ಣಾಟಕ ಮಾಡಬೇಕೆಂದು ಯಾರೂ ಸಹ ಹೇಳಿರುವುದಿಲ್ಲ. ಈ ದಿವಸ ಕೂಡ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾರವರೂ ಕೂಡ ಇದು ಆಗಬಾರದು ಎಂದು ಹೇಳುತ್ತಿದ್ದಾರೆ. (ಸಭೆಯಲ್ಲೆಲ್ಲಾ ಗದ್ದಲ).

ಒಬ್ಬ ಸದಸ್ಯರು.—ಹಾಗೆ ತಿಳಿಸಲು ಅವರಿಗೇನು ಅಧಿಕಾರವಿದೆ ?

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅವರಿಗೆ ಅಧಿಕಾರ ಇದೆಯೋ ಇಲ್ಲವೇ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅವರೂ ಸಹ ಮೈಸೂರಿಗಾಗಿ ದುಡಿದಿದ್ದಾರೆ. ಅವರಿಗೆ ಮೈಸೂರಿನ ಆಡಳಿತವೆಲ್ಲಾ ಸಂಪೂರ್ಣವಾಗಿ ಗೊತ್ತಿದೆ. ಇಂಥ ದೊಡ್ಡವರು ಹೇಳಿರುವುದಕ್ಕೆ ವಿರೋಧವಾಗಿ ನಾವು ಹೋದರೆ ಅದರಿಂದ ನಮಗೆ ಬಹಳ ಕೆಡಕಾಗುತ್ತದೆ. ಹೀಗೆ ಈ ಕರ್ಣಾಟಕ ಏಕೀಕರಣದ ಬಗ್ಗೆ ಮೈಸೂರನ್ನು ಸೇರಿಸಿದರೆ ನಮಗೇನೂ ಹಣಕಾಸಿನ ತೊಂದರೆ ಬರುವುದಿಲ್ಲ, ದೇಶ ಬಹಳ ಅಭಿವೃದ್ಧಿಗೆ ಬರಲು ಮಾರ್ಗವಿದೆ, ಎಂದು ಅವರಾರೂ ಅಭಿಪ್ರಾಯ ಕೊಟ್ಟಿಲ್ಲ. ಹೀಗೆ ಅಂಥ ದೊಡ್ಡ ದೊಡ್ಡ ಮಹನೀಯರೆಲ್ಲ ಒಂದು ಸದಭಿಪ್ರಾಯವನ್ನು ವ್ಯಕ್ತಪಡಿಸಿರುವಾಗ ನಾವು ಈ ವಿಚಾರದಲ್ಲಿ ಎಷ್ಟು ಜಾಗರೂಕರಾಗಿದ್ದರೂ ಸಾಲದು. ಈ ಸಂಬಂಧದಲ್ಲಿ ಮುಂದೆ ಇದರಿಂದ ನಮ್ಮ ಮೈಸೂರಿನ ಆಗು ಹೋಗುಗಳು ಏನಾಗಬಹುದೆಂಬುದನ್ನು ನಾವು ಮುಂದಾಲೋಚನೆ ಮಾಡಿಕೊಂಡು ಇಂದು ನಮ್ಮ ಅಭಿಪ್ರಾಯಗಳನ್ನು ನಾವು ವ್ಯಕ್ತಪಡಿಸಬೇಕಾಗಿದೆ. ಇದರಲ್ಲಿ ಒಂದು ಪ್ರಾಮುಖ್ಯ ವಿಷಯವೇನೆಂದರೆ ಈ ವಿಷಯವನ್ನು ಈಗಾಗಲೇ ಯಾರಾದರೂ ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ಗೊತ್ತಾಗಲಿಲ್ಲ, ಅದು ಆಡಳಿತವಿಚಾರ.

ಹೈದರಾಬಾದಿನ ಆಡಳಿತವರ್ಗ, ಬೊಂಬಾಯಿನ ಆಡಳಿತವರ್ಗ ಮತ್ತು ಮದ್ರಾಸಿನ ಆಡಳಿತವರ್ಗ ಮತ್ತು ಮೈಸೂರಿನ ಆಡಳಿತವರ್ಗ, ಈ ಒಂದೊಂದು ಆಡಳಿತವರ್ಗಕ್ಕೂ ಒಂದೊಂದು ಬಾಬಿನಲ್ಲಿ ವ್ಯತ್ಯಾಸವಿರುತ್ತದೆ. ಈ ದಿವಸ ನಾವು ಆ ಬಳ್ಳಾರಿಯೊಂದನ್ನು ಸೇರಿಸಿಕೊಂಡಿದ್ದರಿಂದಲೇ ನಮಗೆ ಎಷ್ಟೋ ಧಕ್ಕೆ ತಗಲಿದೆ, ತೊಡಕಾಗಿದೆಯೆಂಬುದನ್ನು ಆಲೋಚನೆ ಮಾಡಬೇಕಾಗಿದೆ. ಈ ಸಂಬಂಧವಾಗಿ ಆ ಅಂಕಿ ಅಂಶಗಳ ಸಮಿತಿಯವರು ಹೀಗೆ ಹೇಳಿದ್ದಾರೆ: "ನಾನಾ ಪ್ರದೇಶಗಳನ್ನು ಒಟ್ಟುಗೂಡಿಸಿ ಒಂದು ಸುಸಂಘಟಿತವಾದ ರಾಜ್ಯವನ್ನಾಗಿ ಮಾಡುವ ಸಂದರ್ಭದಲ್ಲಿ ಆಡಳಿತದ ಸಂಬಂಧವಾಗಿ ಅನೇಕ ಸಮಸ್ಯೆಗಳು ಹುಟ್ಟುತ್ತವೆ. ಅವುಗಳಲ್ಲಿ ನೌಕರಿಗಳಿಗೆ ಸಂಬಂಧಪಟ್ಟ ಸಮಸ್ಯೆಯು ಜಟಿಲವಾದ ಸಮಸ್ಯೆಯೇ ಆಗಿದೆ. ಹುದ್ದೆಗಳನ್ನು ಹಂಚುವುದು, ಹಾಗೆ ಹಂಚಿದ ಹುದ್ದೆಗಳನ್ನು ಭರ್ತಿಮಾಡಲು ಶಿಬ್ಬಂದಿವರ್ಗವನ್ನು ನೇಮಿಸುವುದು ಮತ್ತು ಅವರ ಸಂಬಳದ ಸ್ಕೇಲುಗಳನ್ನು ಗೊತ್ತು ಮಾಡುವುದು ಮೊದಲಾದ ವಿಷಯಗಳು ಈ ಸಮಸ್ಯೆಗಳಲ್ಲಿ ಸೇರಿರುತ್ತವೆ" ಎಂದು ತಿಳಿಸಿದ್ದಾರೆ. ಇದು ಆಡಳಿತಕ್ಕೆ ಸೇರಿದ ಬಹಳ ಪ್ರಾಮುಖ್ಯವಾದ ವಿಷಯ ಎಂದು ನಾವು ಯೋಚನೆ ಮಾಡಬೇಕಾಗಿದೆ. ಅದೇ ಸಮಿತಿಯವರು ಮುಂದೆ ಮತ್ತೊಂದು ಅಂಶವನ್ನು ಹೀಗೆ ಹೇಳಿದ್ದಾರೆ:—"ಹಾಗೆ ವರ್ಗಾಯಿಸಲ್ಪಟ್ಟ ಹುದ್ದೆಗಳನ್ನು ಭರ್ತಿಮಾಡುವುದಕ್ಕಾಗಿ ಜನಗಳನ್ನು ಆರಿಸಿಕೊಳ್ಳಬೇಕಾದ ವಿಷಯವು ನಾವು ಎದುರಿಸಬೇಕಾದ ಇನ್ನೊಂದು ಪ್ರಶ್ನೆಯಾಗಿದೆ. ನಾವು ಈ ವಿಷಯದಲ್ಲಿ ಯಾವ ಸಲಹೆಯನ್ನೂ ಮಾಡುವ ಪರಿಸ್ಥಿತಿಯಲ್ಲಿಲ್ಲ. ಜನಗಳನ್ನು ಹುದ್ದೆಗಳಿಗೆ ಆರಿಸಿಕೊಳ್ಳುವ ವಿಷಯದಲ್ಲಿ ಆ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳಿರುವುದೂ ಒಂದು ದೊಡ್ಡ ತೊಂದರೆ. ಈ ವಿದ್ಯಮಾನಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವುದಾಗಿವೆ. ಒಂದೊಂದು ಸ್ಥಳದಲ್ಲಿ ಒಂದೊಂದು ವಿಧವಾದ ಸಂಬಳಗಳ ಸ್ಕೇಲುಗಳಿರುವುದೂ ಕೂಡ ವಿಲೀನೀಕರಣದ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುವುದಾಗಿದೆ. ಹೈದ್ರಾಬಾದ್, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿರುವ ಸಂಬಳದ ಸ್ಕೇಲುಗಳನ್ನು ಪರಿಶೀಲಿಸುವುದರಿಂದ ಸಂಬಳಗಳ ವಿಷಯದಲ್ಲಿಯೂ ಮತ್ತು ಭತ್ಯಗಳ ವಿಷಯದಲ್ಲಿಯೂ ಬಹಳ ವ್ಯತ್ಯಾಸಗಳಿರುವುದು ವ್ಯಕ್ತಪಟ್ಟಿದೆ" ಎಂದು ಸೂಚಿಸಿದ್ದಾರೆ. ಈಗ ನಾವು ಈ ಸಂಬಳದ ವಿಚಾರವಾಗಿ ಬರಿ ಒಂದು ಗೆಜೆಟೆಡ್ ಕೇಡರಿನ ವಿಷಯವನ್ನೇ ತೆಗೆದುಕೊಂಡು ನೋಡುವುದಾದರೆ—ಬೊಂಬಾಯಿ ಪೋಲೀಸ್ ಇಲಾಖೆಯಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟರಿಗೆ ರೂಪಾಯಿ 530-30-650-45-740ಗಳ ಸ್ಕೇಲಿದೆ. ಅದರ ಕೆಳಗಿನ ಎರಡನೆಯ ದರ್ಜೆ ಸಂಬಳದ ಸ್ಕೇಲು 300-20-500 ರೂಪಾಯಿ ಎಂದಿದೆ. ಇನ್ನು ಇದೇರೀತಿ ಹೈದರಾಬಾದಿನಲ್ಲಿ ಇದೇ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರಿಗೆ ಕೊಟ್ಟಿರುವ ಸಂಬಳದ ಸ್ಕೇಲು 300-20-500-20-600-25-700 ಎಂದಿದೆ. ಮದ್ರಾಸಿನಲ್ಲೂ ಕೂಡ ಹೀಗೇ ಜಾಸ್ತಿಯಿದೆ. ಆದರೆ ನಮ್ಮಲ್ಲಿರ ತಕ್ಕಂಥ ಗ್ರೇಡುಗಳು ಎಷ್ಟು ವ್ಯತ್ಯಾಸವಾಗಿವೆ, ಈ ಆಡಳಿತ ವರ್ಗಾವಣೆಯಲ್ಲಿ ಎಷ್ಟು ತೊಂದರೆಗಳಿವೆ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಬಹಳ ಎಚ್ಚರಿಕೆಯಿಂದ ಪರಿಶೀಲನೆ ಮಾಡಬೇಕು. ಈಗ ಇದರ ಜೊತೆಗೆ ನಾವು ಇನ್ನೂ ಒಂದು ದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಈಗ ಹೊಸದಾಗಿ ಆಗಿರುವ ಈ ಐ. ಎ. ಎಸ್. ಮತ್ತು ಐ. ಪಿ. ಎಸ್. ಸಂಬಳದ ಹುದ್ದೆಗಳನ್ನು ಭರ್ತಿಮಾಡುವುದಕ್ಕೆ ಪ್ರಾರಂಭ ಮಾಡಿರತಕ್ಕದ್ದರ ಬಗ್ಗೆ ಅಧಿಕಾರಿ ವರ್ಗದಲ್ಲಿ ಈಗಾಗಲೇ ತುಂಬ ಅಸಮಾಧಾನಗಳು ಬೆಳೆಯುತ್ತಿವೆ. ಇದರಿಂದ ಮುಂದಕ್ಕೆ ಅನೇಕ ದೊಡ್ಡ ತೊಂದರೆಗಳಾಗುವ ಸಂಭವವಿದೆ. ಈ ಒಂದು ದೊಡ್ಡ ಜಟಿಲವಾದ ಸಮಸ್ಯೆಯನ್ನು ನಾವೀಗ ಎದುರಿಸಬೇಕಾಗಿದೆ. ಹೀಗೆ ಈ ದಿವಸ ಅಲ್ಲಿ ಆಡಳಿತ ವರ್ಗದಲ್ಲಿ ಒಬ್ಬ ಅಧಿಕಾರಿಗೆ 600 ರೂಪಾಯಿಗಳ ಸಂಬಳವಿದ್ದು—ಇಲ್ಲಿ ಅದೇ ಅಧಿಕಾರಿಗೆ 400 ರೂಪಾಯಿ ಸಂಬಳವಿರುವಾಗ ಇವರೆಲ್ಲರಿಗೂ ಒಂದು ಸರಿಸಮನಾಗಿರುವಂಥ ಸ್ಕೇಲುಗಳನ್ನುಂಟುಮಾಡುತ್ತೇವೆಂದರೆ ಅದು ಸಾಧ್ಯವಾಗತಕ್ಕ ಮಾತೆ ? ಇಂಥ ಜಟಿಲ ಸಮಸ್ಯೆಗಳನ್ನು ನಾವು ಹೇಗೆ ಎದುರಿಸುವುದು ? ಈ ವಿಚಾರಗಳನ್ನೆಲ್ಲಾ ನಾವು ಕೂಲಂಕಷವಾಗಿ ಪರ್ಯಾಲೋಚಿಸಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಅಲ್ಲಿ 600 ರೂಪಾಯಿ ಸಂಬಳ— ಇಲ್ಲಿ 400 ರೂಪಾಯಿ ಸಂಬಳ ಇರುವುದರ ಬಗ್ಗೆ ತಾವು ಒಂದು ಉದಾಹರಣೆಯನ್ನು ಕೊಡಬಲ್ಲಿರಾ ?

ಅಧ್ಯಕ್ಷರು.—ಅವರು ಹಾಗೆ ಹೇಳಲಿಲ್ಲ. "ಅಲ್ಲಿ 600 ರೂಪಾಯಿಗಳಿದ್ದರೆ ಇಲ್ಲಿ 400 ರೂಪಾಯಿಗಳ ಸಂಬಳವಿದೆ" ಎಂದು ಹೇಳಿದರು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮೆಡಿಕಲ್ ಇಲಾಖೆಯಲ್ಲಿ ಹೈದರಾಬಾದಿನಲ್ಲಿ ಸಿವಿಲ್ ಸರ್ಜನ್ನರುಗಳಿಗೆ 500-1000 ರೂಪಾಯಿಗಳವರೆಗಿನ ಸಂಬಳದ

ಸ್ಕೇಲಿದೆ. ಗೆಜೆಟೆಡ್ ನೌಕರರ ವಿಚಾರವೇ ಹೀಗಿರುವಾಗ ನಾವಿನ್ನೂ ನಾನ್ ಗೆಜೆಟೆಡ್ ನೌಕರರ ವಿಚಾರವನ್ನು ತೆಗೆದುಕೊಂಡಮೇಲಂತೂ ಅದನ್ನು ಪ್ರಸ್ತಾಪ ಮಾಡುವುದೇ ಬೇಕಾಗಿಲ್ಲ. ಗೆಜೆಟೆಡ್ ನೌಕರರ ಸಮಸ್ಯೆಯೇ ಇಷ್ಟು ಜಟಿಲವಾಗಿರುವಾಗ ಇನ್ನು ನಾನ್ ಗೆಜೆಟೆಡ್ ನೌಕರರ ಸಮಸ್ಯೆ ಇನ್ನೂ ಜಟಿಲವಾಗಿರುತ್ತದೆ. ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುವುದರಲ್ಲಿ ಆ ಅಧಿಕಾರಿಗಳ ವರ್ಗದಲ್ಲಿ ಒಂದು ದೊಡ್ಡ ರೆವಲ್ಯೂಷನ್ನೇ ಆಂದೋಳನವೇ ಆಗಬಹುದೋ ಏನೋ ಎಂದೆನಿಸುತ್ತದೆ.

ಇನ್ನು ಈಗ ನಮ್ಮ ಮೈಸೂರಿನಲ್ಲಿ ನಾವು ಅಚ್ಚುಕಟ್ಟಾಗಿ ವಿಂಗಡಿಸಿರುವ ಜಿಲ್ಲೆ, ತಾಲ್ಲೂಕು, ಹೋಬಳಿ ಮತ್ತು ಒಂದು ಹೋಬಳಿಗೆ ಇಷ್ಟೇ ಗ್ರಾಮಗಳಿರಬೇಕೆಂದು ಒಂದು ವಿಸ್ತೀರ್ಣವನ್ನು ಗೊತ್ತುಮಾಡಿ, ಅದರ ಎಲ್ಲೆ ಕಟ್ಟನ್ನು ನಿರ್ಧರಿಸಿರುತ್ತೇವೆ. ಆದರೆ ಆ ಹೈದರಾಬಾದ್, ಮದ್ರಾಸ್ ಮತ್ತು ಬೊಂಬಾಯಿ ಈ ಪ್ರಾಂತ್ಯಗಳಲ್ಲಿರುವ ಕನ್ನಡ ಪ್ರದೇಶಗಳಲ್ಲಿರತಕ್ಕಂಥ ಆ ಜಿಲ್ಲೆಗಳ, ತಾಲ್ಲೂಕುಗಳ ಎಲ್ಲೆಕಟ್ಟನ್ನು ನಾವು ನೋಡಿದರೆ, ನಮ್ಮಲ್ಲಿರತಕ್ಕ ಎರಡು ಮೂರು ಜಿಲ್ಲೆಗಳನ್ನು ಕೂಡಿಸಿದರೂ ಅಲ್ಲಿರುವ ಒಂದು ಡಿಸ್ಟ್ರಿಕ್ಟ್ ಆಗುವುದಿಲ್ಲ. ಅಂಥ ದೊಡ್ಡ ಡಿಸ್ಟ್ರಿಕ್ಟ್‌ಗಳು ಅಲ್ಲಿವೆ.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕಾಗಿಯೇ ಅಲ್ಲಿಯ ಸಂಬಳದ ಸ್ಕೇಲುಗಳು ಸ್ವಲ್ಪ ಹೆಚ್ಚಾಗಿರುವುದು. ಅದಕ್ಕೇ ಸಂಬಳ ಜಾಸ್ತಿ ಕೊಡುತ್ತೀರುವುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಶ್ರೀಮಾನ್ ಭೀಮಪ್ಪನಾಯಕರು ಪ್ರತಿಯೊಂದು ವಿಷಯವನ್ನು ಮಾತನಾಡುವಾಗಲೂ ಅನುಭವದಿಂದಲೇ ಮಾತನಾಡ ತ್ತಾರೆ, ಆಡಳಿತ ನಡೆಸುವ ಅನುಭವ ಮತ್ತು ದಕ್ಷತೆ ಅವರಿಗಿದೆ ಎಂದು ತಿಳಿದುಕೊಂಡಿದ್ದೇನೆ. ಪ್ರತಿಯೊಬ್ಬ ಅಧಿಕಾರಿಗೂ ಇನ್ನು 10-20 ವರ್ಷ ಅಥವಾ ಅವನು ರಿಟೈರ್ ಆಗುವವರೆಗೂ ಅಲ್ಲಿದ್ದರೂ ಆ ಸಂಬಳವನ್ನೇ ಕೊಡಬೇಕು. ಹೀಗೆಂದು ಅವರ ವಾದವೆಂದು ಕಾಣುತ್ತದೆ. ಒಂದು ಪ್ರಾಂತ್ಯ ಇನ್ನೊಂದು ಪ್ರಾಂತ್ಯಕ್ಕೆ ಮಿಲನವಾದರೆ ಆಗ ಅಧಿಕಾರಿಗಳನ್ನು ಒಂದು ಪ್ರಾಂತ್ಯದಿಂದ ಇನ್ನೊಂದಕ್ಕೆ ವರ್ಗ ಮಾಡಬೇಕಾಗುತ್ತದೆ; ಇದು ಆವಶ್ಯಕ ಮತ್ತು ಸಂಪ್ರದಾಯ. ಹೀಗಿರುವಾಗ, ಒಂದು ಕಡೆ ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಯುದ್ದು ಇನ್ನೊಂದೆಡೆ 500 ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಯಿದ್ದರೆ, ಅದೇ ಕೆಲಸ, ಅದೇ ಜವಾಬ್ದಾರಿ. . . .

ಶ್ರೀ ಎ. ಭೀಮಪ್ಪನಾಯಕ್.—ಇಲ್ಲಿಯೂ ಹೆಚ್ಚು ಸಂಬಳದ ಆಫೀಸರಿದ್ದಾರೆ. ಐ.ಎ.ಎಸ್. ನವರಿದ್ದಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಆಗ ಸರ್ಕಾರದ ಆಡಳಿತ ನಡೆಸುವುದು ಎಷ್ಟು ಕಷ್ಟವಾಗಿರುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ಹಗುರವಾಗಿ ಮಾತನಾಡುವ ಹಾಗಿಲ್ಲ. ಬಳ್ಳಾರಿಯನ್ನು ತೆಗೆದುಕೊಂಡಾಗ ಏನೋ ಹತ್ತಾರು ಅಧಿಕಾರಿಗಳಿಗೆ ಅಷ್ಟು ಯೋಚನೆ ಮಾಡಬೇಕಾಗಿಲ್ಲ ಎಂದು ಉದಾರವಾಗಿ ಮನಸ್ಸು ಮಾಡಿದೆವು. ಆದರೆ ಇಲ್ಲಿ ಇಷ್ಟು ದೊಡ್ಡ ವಿಸ್ತೀರ್ಣವಿರುವ ಪ್ರದೇಶಗಳನ್ನು ಒಂದುಗೂಡಿಸುವಾಗ ಲಕ್ಷಾಂತರ ಜನರನ್ನು ವರ್ಗಾಯಿಸುವ ಮತ್ತು ಒಂದುಗೂಡಿಸುವ ಸಂದರ್ಭದಲ್ಲಿ ಆಡಳಿತವನ್ನು ಸುಗಮವಾಗಿ ಹೇಗೆ ನಿರ್ವಹಣೆ ಮಾಡುವುದು? ಹೀಗೆ ಮಾಡುವಾಗ ಪ್ರಾಂತ್ಯ ಪ್ರಾಂತ್ಯದ ಅಧಿಕಾರಿಗಳಿಗೆ ಎಷ್ಟೋ ವೈಮನಸ್ಯ ಬೆಳೆಯುತ್ತದೆ. ನಮ್ಮ ಅಧಿಕಾರಿಗಳನ್ನು ಆ ಪ್ರಾಂತ್ಯಕ್ಕೆ ವರ್ಗಮಾಡಿದರೆ, ಅಲ್ಲಿರುವ ಅಧಿಕಾರಿ ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿರುತ್ತಾಯಿದ್ದು ಅದೇ ಹುದ್ದೆಯ ಇಲ್ಲಿರುವ ಅಧಿಕಾರಿ 500 ರೂಪಾಯಿ ತೆಗೆದುಕೊಳ್ಳುತ್ತಿರುವಾಗ, ಆಡಳಿತ ದಕ್ಷತೆ ಎಷ್ಟು ಹಿಂದೆ ಬೀಳುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದು ಸುಲಭವಾದ ಸಮಸ್ಯೆಯಲ್ಲ, ಕಠಿಣವಾದ ಸಮಸ್ಯೆ. ಮೈಸೂರಿನವರು ಈ ಸಮಸ್ಯೆಯನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಇದನ್ನೂ ಈ ವರದಿಯಲ್ಲಿ ಹೇಳಿದ್ದಾರೆ.

ಇನ್ನು ದೂರದ ವಿಷಯವನ್ನು ಹೇಳುವಾಗ, ಶ್ರೀಮಾನ್ ಗೋಪಾಲಗೌಡರು ಡೆಲ್ಲಿ, ಎಲ್ಲಿದೆ, ಹಿಮಾಚಲವೆಲ್ಲಿದೆ, ಕನ್ಯಾಕುಮಾರಿ ಎಲ್ಲಿದೆ, ಡೆಲ್ಲಿಯಲ್ಲಿ ಸರ್ಕಾರವಿದ್ದು ಇಷ್ಟು ದೂರ ಆಡಳಿತ ನಡೆಸುತ್ತಿಲ್ಲವೆ ಎಂದು ಹೇಳಿದರು. ಇದು ಕೇಳುವವರಿಗೆ ಇಂಪಾಗಿರುತ್ತದೆ. ನಿಜವೆಂದು ಕಾಣುತ್ತದೆ. ಆದರೆ ಡೆಲ್ಲಿಯ ಸರ್ಕಾರಕ್ಕೂ, ಮೈಸೂರು ಅಥವಾ ಕರ್ಣಾಟಕವೆಂದು ಇಟ್ಟುಕೊಂಡರೂ, ಕರ್ಣಾಟಕ ಸರ್ಕಾರಕ್ಕೂ ಬಹಳ ವ್ಯತ್ಯಾಸವಿದೆ. ಉದಾಹರಣೆಗೆ ಮುಂಬೈ ಕರ್ಣಾಟಕದ ಒಂದು ಹಳ್ಳಿಯಾದ ಬದರೆಯಿಂದ ಒಬ್ಬ ಹಳ್ಳಿಯವನು ಮರದ ವ್ಯಾಜ್ಯಕ್ಕೆ ಸಂಬಂಧಪಟ್ಟ ಒಂದು ಸಣ್ಣ ಕೇಸಿನ ಸಂಬಂಧವಾದ ರೆವಿನ್ಯೂ ಅಪೀಲು ಹಾಕಿದರೆ, 500-600 ಮೈಲಿ ದೂರವಿರುವ ರೆವಿನ್ಯೂ ಕಮೀಷನರ ಕೋರ್ಟಿಗೆ ಬೆಂಗಳೂರಿಗೆ ಈ ವ್ಯಾಜ್ಯಕ್ಕಾಗಿ ಬರಬೇಕಾಗುತ್ತದೆ. ಶ್ರೀಮಾನ್ ಭೀಮಪ್ಪನಾಯಕರಂಥ ಲಾಯರಿಗೆ ಸಾವಿರ ರೂಪಾಯಿ ಫೀಜು ಕೊಡಬೇಕಾಗುತ್ತದೆ. ಈ ಲಾಯರ ಫೀಜು ಅಲ್ಲದೆ ಅದರ ಕಾಲು ಭಾಗ ಅಥವಾ ಅರ್ಧ ಭಾಗದಷ್ಟು ಹಣವನ್ನು ಅವನು ಒಂದು ಸಾರಿ ಅಲ್ಲಿಂದ ಹೋಗಿಬರುವುದಕ್ಕೆ ಖರ್ಚು ಮಾಡಬೇಕಾಗುತ್ತದೆ. ಹೀಗೆ ಸರ್ಕಾರವಿರುವ ಕೇಂದ್ರಕ್ಕೆ ಅಪೀಲುಗಳು ಮತ್ತು ಜನರ ಇತರ ವ್ಯವಹಾರಗಳು ದೃಷ್ಟಿ ಒಂದುಕಡೆಯಿಂದ ಇನ್ನೊಂದು ಕಡೆಗೆ ಬರಬೇಕಾದರೆ, ಬಡಪ್ರಜೆ, ಸಾಮಾನ್ಯ ಪ್ರಜೆಗೆ ಎಷ್ಟು ಖರ್ಚು ಬೀಳುತ್ತದೆ, ಇಷ್ಟು ಖರ್ಚನ್ನು ಹೊರುವುದಕ್ಕೆ ಅವನಿಗೆ ಯೋಗ್ಯತೆ ಇದೆಯೇ ಎಂಬುದನ್ನು ನಾವು ಈ ದಿವಸ ಯೋಚನೆ ಮಾಡಬೇಕಾಗಿದೆ. ಬಹುಶಃ ಕೆಲವು ವರ್ಷಗಳು ಕಳೆದರೆ ಅವರ ಶಕ್ತಿ ಇಮ್ಮಡಿಯಾದರೆ ಸರ್ಕಾರದ ಕೇಂದ್ರವನ್ನು ಧಾರವಾಡಕ್ಕೆ ಸಾಗಿಸಿಕೊಂಡು ಹೋಗುತ್ತೇವೆಂದರೆ ಆಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾಳೆ ಪ್ರಜಾಭಿಪ್ರಾಯ ಹಾಗೆ ಕ್ರೋಡೀಕೃತವಾದರೆ, ಈ ಸಭೆಯ ಮೆಜಾರಿಟಿ ಅಭಿಪ್ರಾಯ ಆ ರೀತಿ ಬಂದು ಬೆಂಗಳೂರಿನಿಂದ ರಾಜಧಾನಿಯನ್ನು ಧಾರ್ವಾಡಕ್ಕೆ ವರ್ಗಾಯಿಸಬೇಕೆಂದು ಅಭಿಪ್ರಾಯ ಪಡುವುದಾದರೆ, ಆ ರೀತಿ ತೀರ್ಮಾನವಾದರೆ ನನ್ನಂಥ ಮತ್ತು ಶ್ರೀಮಾನ್ ನಾಗಯ್ಯರೆಡ್ಡಿಯವರಂಥ ಅಲ್ಪ ಸಂಖ್ಯಾತರ ಗತಿ ಏನು? (ನಗು!)

ಶ್ರೀ ಇಜಾರಿ ಸಿರಸಪ್ಪ (ಹರಪನಹಳ್ಳಿ).—ಆ ರೀತಿ ವರ್ಗಾಯಿಸುವುದಿಲ್ಲವೆಂದು ಭರವಸೆಕೊಟ್ಟರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಟಿ. ಎನ್. ಮೂಡಲಗಿರಿಗೌಡ.—ವೈಯಕ್ತಿಕ ಭರವಸೆ ಕೊಡತಕ್ಕ ರಾಜ್ಯಾಡಳಿತವೇನಿಲ್ಲ. ಇದು ಪ್ರಜಾಪ್ರಭುತ್ವಕ್ಕನುಗುಣವಾಗಿ ನಡೆಸುವ ರಾಜ್ಯ. ಈ ಹೊತ್ತು ಭಾರತ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಅವರೇ ಈ ಒಂದು ಭರವಸೆಯನ್ನು ಕೊಡುತ್ತೇನೆಂದು ಅಧಿಕಾರವಾಣಿಯಿಂದಲ್ಲದೆ ವೈಯಕ್ತಿಕವಾಗಿ ಹೇಳಿದರೂ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಇಜಾರಿ ಸಿರಸಪ್ಪ.—ಆಂಧ್ರದಲ್ಲಿ ರಾಯಲು ಸೀಮೆಯವರ ಒಂದು ಗುಂಪಿತ್ತು. ಅವರೂ ಸರ್ಕಾರ್ ಪ್ರದೇಶಗಳವರೂ ಸೇರಿ ಶ್ರೀ ಬಾಗ್ ಒಪ್ಪಂದ ಮಾಡಿಕೊಂಡ್ರು ಕರ್ನೂಲಿನಲ್ಲಿ ರಾಜಧಾನಿ ಮಾಡಿಕೊಂಡದ್ದು ನಮ್ಮ ಜ್ಞಾಪಕದಲ್ಲಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಪ್ರಜಾಪ್ರಭುತ್ವದಲ್ಲಿ ಪ್ರಜಾವಾಣಿಗೆ ಬೆಲೆಯಿದೆಯೇ ಹೊರತು ವೈಯಕ್ತಿಕವಾಗಿ ಕೊಡತಕ್ಕ ಭರವಸೆಗಳನ್ನು ನಂಬುವುದು ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎ. ಭೀಮಪ್ಪನಾಯಕ್.—ಮಹಮದ್ ಬಿನ್ ತೊಗಲಕ್ ದೆಹಲಿಯನ್ನು ಬಿಟ್ಟು ದೇವಗಿರಿ ರಾಜಧಾನಿಯಾಗಬೇಕೆಂದು ಹೋಗಿದ್ದ! (ನಗು!)

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಹೊತ್ತು ಅಂಥಾದ್ದು ನಡೆಯಬಹುದು. ಇತಿಹಾಸ ಪುನರಾವೃತ್ತಿಯಾದರೂ ಆಗಬಹುದು; ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಚರಿತ್ರೆ ಎಲ್ಲಿ ಪುನರಾವೃತ್ತಿಯಾಗುತ್ತದೆಯೋ ಎನ್ನುವ ಭ್ರಮೆಯೇ ಈ ಹೊತ್ತು ನಮ್ಮಲ್ಲಿರುವುದು.

ಸ್ವಾಮಿ, ಕೋರ್ಟುಗಳ ವಿಷಯವನ್ನು ತೆಗೆದುಕೊಳ್ಳೋಣ. ಹೈಕೋರ್ಟಿರತಕ್ಕ ಒಂದು ಸ್ಥಳಕ್ಕೆ ಆ ದೇಶದ ಪ್ರಜೆ ಬರಬೇಕಾದರೆ, ಎಷ್ಟು ಖರ್ಚಾಗುತ್ತದೆ, ಇದಕ್ಕೆ ಅವನ ಸಾಧನ ಸಂಪತ್ತೆಷ್ಟಿದೆ ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ಮಾನ್ಯ ಮಿತ್ರರು ಸುಪ್ರೀಂ ಕೋರ್ಟಿನ ವಿಷಯ ಹೇಳಿದರು. . . .

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸುಪ್ರೀಂ ಕೋರ್ಟು ಡೆಲ್ಲಿಯಲ್ಲಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಒಂದು ಲಕ್ಷದಲ್ಲಿ ಒಬ್ಬ ಪ್ರಜೆ ಸುಪ್ರೀಂ ಕೋರ್ಟಿಗೆ ಹೋಗುವುದಿಲ್ಲ, ಇನ್ನೂ ವಿರಳ. ನಾವು ಸಾಮಾನ್ಯ ಪ್ರಜೆಯ ವಿಚಾರ ಯೋಚನೆಮಾಡುತ್ತಿದ್ದೇವೆ. ಸಾಮಾನ್ಯ ಪ್ರಜೆ ಎಷ್ಟು ಕಷ್ಟ ನಷ್ಟಗಳಿಗೊಳಗಾಗುತ್ತಾನೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ.

ಮೈಸೂರಿನಲ್ಲಿ ನಮ್ಮ ರಾಜ್ಯಾಂಗ ಸಭೆ ನಡೆದ ಕಾಲದಲ್ಲಿ ಶ್ರೀಮಾನ್ ಇಮಾಂರವರು ಮೈಸೂರಿನ ವೈಶಿಷ್ಟ್ಯದ ವಿಷಯದಲ್ಲಿ ಗಂಟೆಗಟ್ಟಲೆ ಮಾತನಾಡಿ, ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕು, ಇದನ್ನು ಲವಲೇಶವಾದರೂ ಕಡಮೆ ಮಾಡಬಾರದು ಎಂದು ವಾದಿಸಿದ್ದಾರೆ. ಅದು ಪುಟಗಟ್ಟಲೆ ಇದೆ. ಅದನ್ನವರು ಮತ್ತೆ ಜ್ಞಾಪಿಸಿಕೊಳ್ಳಲಿ ಎಂದು ನಾನು ಅವರಿಗೆ ಹೇಳುತ್ತೇನೆ. ಒಟ್ಟಿನಲ್ಲಿ, ಆಡಳಿತದ ವಿಷಯವನ್ನು ಸಾಮಾನ್ಯ ಪ್ರಜೆಯ ದೃಷ್ಟಿಯಿಂದ ಬಹು ಮುಖ್ಯವಾಗಿ ಯೋಚಿಸಬೇಕಾಗಿದೆ. ಇಂಥ ಒಂದು ಸಮಸ್ಯೆಯನ್ನು ನಾವು ಅಷ್ಟು ಸುಲಭವಾಗಿ ಯೋಚಿಸತಕ್ಕದ್ದಲ್ಲ. ಸ್ವಾಮಿ, ಹಿರಿಯರಾಡುವ ಒಂದು ನುಡಿ ಇದೆ. ಸಾಮಾನ್ಯವಾಗಿ ನಾವು ಒಂದು ಮನೆಯನ್ನು ಕಟ್ಟಬೇಕಾದರೆ, ನಾವು ಎಷ್ಟರಮಟ್ಟಿಗೆ ನೋಡಿಕೊಳ್ಳಬಹುದೋ, ಎಷ್ಟರಮಟ್ಟಿಗೆ ಅದರ ರಿಪೇರಿ ಮುಂತಾದ್ದನ್ನೆಲ್ಲಾ ನೋಡಿಕೊಳ್ಳಲು ನಮಗೆ ಶಕ್ತಿಯಿದೆಯೋ ಅದನ್ನು ನೋಡಿ ಅದಕ್ಕೆ ತಕ್ಕಂತೆ ಮನೆಯನ್ನು ಕಟ್ಟಬೇಕೆಂದು ಹೇಳುತ್ತಾರೆ. ಹೀಗೆ ನಾವು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗದ ದೊಡ್ಡ ಮನೆಯನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನೇಕರು ವಿಶಾಲವಾದ ಮನೆಗಳನ್ನು ಕಟ್ಟಿ ಅವುಗಳ ರಿಪೇರಿ ಇಲ್ಲದೆ ಹಾಳುಬಿದ್ದಿರುವುದನ್ನು ಅನೇಕ ಕಡೆ ನೋಡಿದ್ದೇವೆ. ಹೀಗೆ ಮನೆ ದೊಡ್ಡದಾದರೆ ಕಷ್ಟ. ಇದನ್ನರಿತೇ ನಮ್ಮ ಶ್ರೀಮಾನ್ ಚೆನ್ನಿಗರಾಮಯ್ಯನವರು ಅವರ ಮನೆಯನ್ನು ಅಡಕವಾಗಿ ಕಟ್ಟಿಕೊಂಡಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಹಾಗಾದರೆ ವಿಧಾನಸೌಧವನ್ನು ಬಿಟ್ಟುಬಿಡೋಣವೆ?

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಮನೆ ಬಹಳ ದೊಡ್ಡದಾದರೆ, ನಮ್ಮ ಶಕ್ತಿಯೆಲ್ಲಾ ರಿಪೇರಿ ಮಾಡುವುದರಲ್ಲೇ ಕುಂದಿಹೋಗುತ್ತದೆ. ಹೀಗೆ ರಾಜ್ಯವನ್ನು ವಿಶಾಲಮಾಡಿ, ಅದರಿಂದ ಜನರ ಸುಖಸಂಪತ್ತನ್ನೊದಗಿಸುವುದಕ್ಕೆ ಸಾಧ್ಯವಾಗದೆ ಪ್ರಜೆಗಳನ್ನು ಕಡಮೆ ದರ್ಜೆಗೆ ತರುವುದು ರಾಜನೀತಿಯಲ್ಲ. ಕೇಂದ್ರಕ್ಕೆ ನಮ್ಮ ಕೂಗು ಮುಟ್ಟುವುದಿಲ್ಲ, ಆ ಶಕ್ತಿ ನಮ್ಮಲ್ಲಿಲ್ಲ; ಅದಕ್ಕಾಗಿ, ದೊಡ್ಡದು ಮಾಡಿಕೊಂಡು ಒಗ್ಗಟ್ಟಾಗಿ ಕೇಂದ್ರಕ್ಕೆ ನಮ್ಮ ಕೂಗನ್ನು ಮುಟ್ಟಿಸಿದರೆ, ನಮ್ಮ ಕೆಲಸ ಕಾರ್ಯಗಳು, ಕಾರ್ಯವಿಧಾನಗಳು ಚೆನ್ನಾಗಿ ಆಗುತ್ತವೆಂಬ ವಾದವನ್ನು ಕೆಲವರು ಮುಂದಿಡುತ್ತಾರೆ. ಈ ವಾದದಲ್ಲಿ ಲವಲೇಶವಾದರೂ ತಿರುಳಿಲ್ಲ. ಅಲ್ಲದೆ ಬಹುಸಂಖ್ಯೆಯವರ ಕೂಗಿಗೆ ಬೆಲೆಯಿರುತ್ತದೆ ಎಂದು ಹೇಳುವುದಾದರೆ, ನಮ್ಮ ದೇಶದಲ್ಲಿ ಮೆಜಾರಿಟಿ ಅಥವಾ ಬಹುಸಂಖ್ಯಾತ ಕೋಮುಗಳಿಗೇ ಎಲ್ಲಾ ಸೌಲಭ್ಯಗಳೂ ದೊರಕಬೇಕು, ಮೈನಾರಿಟಿ ಅಥವಾ ಅಲ್ಪಸಂಖ್ಯಾತರಿಗೆ ದೊರಕುವುದಿಲ್ಲ ಎಂಬ ವಾದವನ್ನು ಮುಂದಿಟ್ಟಹಾಗಾಗುತ್ತದೆ. ಆದುದರಿಂದ ಈಗ ಡೆಲ್ಲಿ ಸರ್ಕಾರದಲ್ಲಿ ನಮ್ಮ ಕೂಗು ಮುಟ್ಟುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ದುರ್ಯೋಧನನಿಗೆ ನೂರೊಂದು ಜನ ಮಕ್ಕಳಿದ್ದರು. . . .

ಒಬ್ಬ ಸದಸ್ಯರು.—ದುರ್ಯೋಧನನಿಗಲ್ಲ, ಧೃತರಾಷ್ಟ್ರನಿಗೆ. (ನಗು!)

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಧೃತರಾಷ್ಟ್ರನಿಗೆ ಕೌರವರು 101 ಜನ ಮಕ್ಕಳಿದ್ದರು; ಆದರೆ ಪಾಂಡವರು ಐದೇ ಮಂದಿ ಇದ್ದರು.

Mr. SPEAKER.—The House will now adjourn for lunch and meet again at 3-30.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸ್ವಾಮಿ, ಕೇಂದ್ರದಲ್ಲಿ ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆನ್ನುವ ವಾದ ಸಂಖ್ಯೆ ಮೇಲೆ ಪರಿಗಣಿತವಾಗಿಲ್ಲ; ಅದು ವ್ಯಕ್ತಿಯಮೇಲೆ ನಿಂತಿದೆ. ವ್ಯಕ್ತಿಗಳು ತಮ್ಮ ಪ್ರಾಬಲ್ಯ ಮತ್ತು ವಿಶೇಷವಾದ ಗುಣಗಳನ್ನೂ ವಿಶೇಷವಾದ ತಿಳಿವಳಿಕೆಯನ್ನೂ ಹೆಚ್ಚಿನ ಸಾಮರ್ಥ್ಯವನ್ನೂ ಪ್ರದರ್ಶಿಸಿ, ಕೇಂದ್ರದಲ್ಲಿ ಒಂದು ಸಾಮರ್ಥ್ಯವನ್ನು ಶಕ್ತಿಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಹೊರತು, ನಾನು ಆಗಲೇ ತಿಳಿಸಿದಹಾಗೆ, ಧೃತರಾಷ್ಟ್ರನ ಮಕ್ಕಳು 101 ಜನರಿದ್ದರು. ಪಾಂಡವರ ಮಕ್ಕಳು ಐದು ಜನರಿದ್ದರು. ಆದುದರಿಂದ ನಮ್ಮ ಚರಿತ್ರೆಯು ಯಾವುದರಮೇಲೆ ಅವಲಂಬಿಸಿದೆ, ಸಂಖ್ಯೆ ಮೇಲೆಯೋ ಅಥವಾ ಸತ್ಯ, ಧರ್ಮ ಪ್ರತಿಷ್ಠೆಗಳ ಮೇಲೆಯೋ ಎನ್ನತಕ್ಕಂಥಾದ್ದು ನಮಗೆ ಧರ್ಮ ಗ್ರಂಥಗಳಿಂದ ಗೊತ್ತಾಗಿದೆ. ಹೀಗಿದ್ದರೂ ಕೂಡ

ನಾವು ಸಂಖ್ಯಾಬಲದಿಂದ ಕೇಂದ್ರದಲ್ಲಿ ನಮ್ಮ ಆಗುಹೋಗುಗಳನ್ನು ರೂಪಿಸಿಕೊಳ್ಳುತ್ತೇವೆಂದು ಹೇಳಿದರೆ ಅದು ತಿರುಳಿಲ್ಲದ ವಾದ ಮತ್ತು ಭಾರತದ ಪ್ರತಿಷ್ಠೆಗೆ, ಭಾರತದ ಭದ್ರತೆಗೆ, ಭಾರತದ ಗೌರವಕ್ಕೆ ಅದು ಸಂಕುಚಿತ ಮನೋಭಾವದಿಂದ ಕೂಡಿದ ಒಂದು ವಾದ. ಆ ವಾದವನ್ನು ಪಾಶ್ಚಾತ್ಯರಾಷ್ಟ್ರದವರು ಯಾರಾದರೂ ಕೇಳಿದರೆ, ಭಾರತದ ಹೊರಗಡೆ ರಾಷ್ಟ್ರದವರು ಯಾರಾದರೂ ಕೇಳಿದರೆ ನಮಗೆ ಗೌರವ ಖಂಡಿತವಾಗಿ ಬರುವುದಿಲ್ಲ. ಆ ವಾದವನ್ನು ಬಿಡುವುದು ಉತ್ತಮವೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅದರಿಂದ ನಮಗೆ ಸಾಮರ್ಥ್ಯ ಬರುವುದಿಲ್ಲ. ದೇಶ ವಿಶಾಲವಾಗುವುದರಿಂದ ನಮ್ಮ ಆಗುಹೋಗುಗಳನ್ನು ಮತ್ತು ನಮ್ಮ ಪುರೋಭಿವೃದ್ಧಿಯನ್ನು ಹೆಚ್ಚುಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ವಾದದಲ್ಲಿಯೂ ಅಷ್ಟು ತಿರುಳಿಲ್ಲ. ಈಗ ನಾವು ಭಾರತದ ಹೊರಗಡೆಯ ಯಾವ ದೇಶವನ್ನು ತೆಗೆದುತೊಂಡರೂ ಕೂಡ, ಪಾಶ್ಚಾತ್ಯ ರಾಷ್ಟ್ರಗಳನ್ನೂ ತೆಗೆದುಕೊಂಡರೂ ಕೂಡ ದೇಶ ವಿಶಾಲವಾಗಿದ್ದರೆ ಅದರಿಂದ ನಮ್ಮ ಸುಖ ಸಂಪತ್ತುಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದು ನಮಗೆ ಕಂಡುಬರುವುದಿಲ್ಲ. ಉದಾಹರಣೆಗೆ ಬೆಲ್ಜಿಯಂ ತೆಗೆದುಕೊಳ್ಳೋಣ. ಅದರ ವಿಸ್ತೀರ್ಣ 11,775 ಚದರ ಮೈಲಿಗಳು, ಜನಸಂಖ್ಯೆ 83,44,534; ಡೆನ್ಮಾರ್ಕ್ ವಿಸ್ತೀರ್ಣ-16,556 ಚದರ ಮೈಲಿಗಳು; ಜನಸಂಖ್ಯೆ—40,45,332; ಐರಿಷ್ ಫ್ರೀ ಸ್ಟೇಟ್—ವಿಸ್ತೀರ್ಣ—26,601 ಚದರ ಮೈಲಿಗಳು, ಪ್ರಜಾಸಂಖ್ಯೆ—29,53,432; ಕೈಗಾರಿಕೆಗಳಲ್ಲಿ ಅತ್ಯುತ್ತಮವಾದಂಥ ದೇಶವೆಂದು ಪ್ರಪಂಚದಲ್ಲಿ ಖ್ಯಾತಿಯನ್ನು ಪಡೆದಿರುವ ಸ್ವಿಟ್ಜರ್ಲೆಂಡ್ ತೆಗೆದುಕೊಳ್ಳೋಣ. ಅದರ ವಿಸ್ತೀರ್ಣ 15,949 ಚದರ ಮೈಲಿಗಳು, ಪ್ರಜಾಸಂಖ್ಯೆ—42,65,703: United States ತೆಗೆದುಕೊಂಡರೂ ಅವುಗಳಲ್ಲಿ ಯಾವ ಪ್ರಾಂತದಲ್ಲೂ ಕೂಡ 40 ಲಕ್ಷಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆ ಇಲ್ಲ. ಹಾಗೇಯೇ ನಮ್ಮ ಭಾರತದಲ್ಲಿ ಹೊಸದಾಗಿ ಆಗಿರತಕ್ಕಂಥ ಸ್ಟೇಟ್‌ಗಳನ್ನು ತೆಗೆದುಕೊಳ್ಳೋಣ ಅಥವಾ ಕೆಲವು ಹಳೆಯ ಪ್ರಾಂತ್ಯಗಳನ್ನು ತೆಗೆದುಕೊಳ್ಳೋಣ. ಉದಾಹರಣೆಗೆ:—ಸಿಂಧು ದೇಶ ವಿಸ್ತೀರ್ಣ 48,139 ಚದರ ಮೈಲಿಗಳು, ಪ್ರಜಾಸಂಖ್ಯೆ 45,35,000; ಅಸ್ಸಾಂ ವಿಸ್ತೀರ್ಣ 54,921 ಚದರ ಮೈಲಿಗಳು, ಜನಸಂಖ್ಯೆ 1,02,04,733; ಒರಿಸ್ಸಾ—32,198 ಚದರ ಮೈಲಿಗಳು, ಜನಸಂಖ್ಯೆ—87,27,544; ವಿಂಧ್ಯ ಪ್ರದೇಶ—ವಿಸ್ತೀರ್ಣ-24,600 ಚದರ ಮೈಲಿಗಳು, ಪ್ರಜಾಸಂಖ್ಯೆ—35,59,000; ರಾಜಾಸ್ಥಾನ-29,797 ಚದರ ಮೈಲಿಗಳು, ಪ್ರಜಾಸಂಖ್ಯೆ, 42,61,000, ಹೀಗಿದೆ. ಹೀಗೆ ನಾವು ಭಾರತದ ಅನೇಕ ಭಾಗಗಳನ್ನು ನೋಡಿಕೊಂಡು ಹೋದರೂ ಕೂಡ, ಭಾರತದ ಹೊರಗಿನ ಯಾವ ಪಾಶ್ಚಾತ್ಯ ರಾಷ್ಟ್ರಗಳನ್ನು ನೋಡಿದರೂ ಕೂಡ ಆಡಳಿತದ ಒಂದು ಚೌಕಟ್ಟನ್ನು ಒಂದು ಕೋಟಿಯೊಳಗೆ ಏರ್ಪಾಡು ಮಾಡಿಕೊಂಡಿದ್ದಾರೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ಇಟ್ಟುಕೊಂಡಿಲ್ಲ.

A MEMBER.—What about United Provinces?

ಶ್ರೀ ಟಿ. ಎನ್. ಮೂಡಲಗಿರಿಗೌಡ.—United Provinces ಒಂದರಿಂದಲೇ ಎಲ್ಲಾ ಉದಾಹರಣೆಗಳನ್ನು ತೆಗೆದುಕೊಳ್ಳುವ ಹಾಗಿಲ್ಲ.

ಹೀಗೆ ಆಡಳಿತ ಸುಗಮವಾಗಿ ಜನಗಳು ಸುಖಸಾಧನೆಗಳನ್ನು ಸಾಧಿಸತಕ್ಕಂಥ ಮಾರ್ಗದಲ್ಲಿ ಇರಬೇಕಾದರೆ ಒಂದು ನಿಗದಿಯಾದಂಥ, ನಿರ್ದಿಷ್ಟವಾದಂಥ ಚೌಕಟ್ಟು ಇದ್ದರೆ ಮಾತ್ರವೇ ಜನಗಳ ಸುಖಸಂಪತ್ತುಗಳನ್ನು ಸಾಧಿಸುವುದಕ್ಕೆ ಸಾಧ್ಯವಿದೆಯೇ ಹೊರತು unwieldy ಆಗಿದ್ದರೆ ವಿಪರೀತವಾದ ದೇಶವನ್ನು ಏರ್ಪಾಡುಮಾಡಿಕೊಂಡರೆ ಜನಗಳ ಸುಖಸಂಪತ್ತುಗಳ ಸಾಧನೆಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ. ಅದರಿಂದ ನಾವು ಏನು ಸಾಧಿಸುತ್ತೇವೆ ಎಂದು—ಹೇಳುತ್ತೇವೋ—ಅದು ಕನಸಾಗುತ್ತದೆ; ಇದರಲ್ಲಿ ಅರ್ಥವಿಲ್ಲ, ತಿರುಳಿಲ್ಲ ಎಂದು ಹೇಳಬೇಕಾಗಿದೆ. ಒಂದು ಸ್ಟೇಟ್‌ಗೆ ಸಂಬಂಧಪಟ್ಟಂತೆ ಬೊಂಬಾಯಿ ಪ್ರಾಂತದಲ್ಲಾಗಲಿ ಅಥವಾ ಮದ್ರಾಸ್ ಪ್ರಾಂತದಲ್ಲಾಗಲಿ ಇರತಕ್ಕಂಥಹ ಸ್ಟೇಟ್ ಆಫೀಸರ್ ಅಥವಾ ಜಿಲ್ಲಾಧಿಕಾರಿಗಳು ಅಥವಾ ಕಲೆಕ್ಟರಿಗೂ ಮತ್ತೆ ಜನಗಳಿಗೂ ನಿಕಟ ಸಂಪರ್ಕವಿರುವುದಿಲ್ಲ. ನಾನು ಇರತಕ್ಕ ಜಿಲ್ಲೆ ಮತ್ತು ಮದರಾಸ್‌ಜಿಲ್ಲೆಯ ಹತ್ತಿರ ಹತ್ತಿರ. ಯಾವುದೋ ಒಂದು ಸಂದರ್ಭದಲ್ಲಿ ನಾನು ಮದ್ರಾಸ್ ಜಿಲ್ಲೆಯ ಒಂದು ಹಳ್ಳಿಗೆ ಹೋಗಿ ವಿಚಾರಿಸಿದಾಗ ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಎಂದು ನಾವು ಇಲ್ಲಿ ಏನು ಹೇಳುತ್ತೇವೋ. ಅವರು ಇಲ್ಲಿನ ಜಿಲ್ಲಾಧಿಕಾರಿಗೆ ಸಮಾನ ಎಂಬುದು ಗೊತ್ತಾಯಿತು. ಆ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೋಡಿದರೆ ಹಳ್ಳಿಯವರು ಜಿಲ್ಲಾಧಿಕಾರಿಗಳಿಗೆ ಎಷ್ಟು ಗೌರವವನ್ನು ಸಲ್ಲಿಸಬೇಕೋ ಎಷ್ಟು ಭಯ ಭ್ರಾಂತಿಗಳನ್ನು ಇಟ್ಟುಕೊಂಡಿರಬೇಕೋ ಅಷ್ಟೊಂದು ವಿಧವಾದಂಥ ಗೌರವವನ್ನು ಕೂಡ ಅವರು ಇಟ್ಟುಕೊಂಡಿದ್ದಾರೆ ಎಂದರೆ ಆ ಕಲೆಕ್ಟರುಗಳು ಯಾರು, ಅವರಿಂದ ಏನು ಕಾರ್ಯಸಾಧನೆಯಾಗುತ್ತದೆ, ಏನು ಸುಖಸಂಪತ್ತು ದೊರೆಯುತ್ತದೆ ಎಂಬುದು ಅವರಿಗೆ ಅರಿವೇ ಇರುವುದಿಲ್ಲ, ಗೊತ್ತೇ ಇರುವುದಿಲ್ಲ. ಆದರೆ ನಮ್ಮ ಸ್ಟೇಟ್‌ನಲ್ಲಿ ಒಬ್ಬ ಮಂತ್ರಿಯನ್ನೋ, ಒಬ್ಬ ಜಿಲ್ಲಾಧಿಕಾರಿಯನ್ನೋ, ಅಥವಾ ಒಬ್ಬ State officerನ್ನೋ ಮೈಸೂರು ಸಂಸ್ಥಾನದ ಯಾವ ಪ್ರಜೆ ಆಗಲಿ ಎಷ್ಟು ಸುಲಭವಾಗಿ approach ಮಾಡಬಹುದು, ಎಷ್ಟು ಸುಲಭವಾಗಿ ತನ್ನ ಕೆಲಸ ಕಾರ್ಯಗಳನ್ನು ನೆರವೇರಿಸಿ ಕೊಳ್ಳುವುದಕ್ಕೆ ಸಾಧ್ಯವಿದೆ, ಎಷ್ಟು ಸುಲಭವಾಗಿ ತಾನು ತನ್ನ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾವು ಬೆಳಗ್ಗೆ ಎದ್ದರೆ ನಮ್ಮ ಜನಗಳಿಂದ ನೋಡುತ್ತಿದ್ದೇವೆ. ಹಾಗೆ ನಮ್ಮ ಜನಗಳಿಗೆ ಹೆಚ್ಚಿನ ಒಂದು ಸೌಲಭ್ಯ ದೊರೆಯಬಾರದು, ನಮ್ಮ ಜನಗಳು ಸರ್ಕಾರದಿಂದ ದೂರ ಇರಬೇಕು, ಅವರಿಗೆ ಅದರ ಸಂಪರ್ಕ ಸ್ವಲ್ಪ ದೂರವಿರಬೇಕು, ಸರ್ಕಾರದ ಸಂಪರ್ಕ ಹತ್ತಿರ ಆಗುವುದರಲ್ಲಿ ರೈತರ ಗೊಂದಲ ಜಾಸ್ತಿಯಾಗುತ್ತದೆ ಎಂಬುದು ನಮ್ಮಲ್ಲಿ ಮೂಡುವುದಾದರೆ ಆಗ ದೊಡ್ಡದೊಡ್ಡ ಜಿಲ್ಲೆಗಳನ್ನು ಮಾಡಿ ದೊಡ್ಡ ದೊಡ್ಡ ಪ್ರಾಂತವನ್ನು ಮಾಡಿ ಜನರಿಂದ ಸರ್ಕಾರ ದೂರ ಇರುವುದಕ್ಕೆ ಮಾತ್ರ ಸಾಧ್ಯವಿದೆ. ಆಗ ಅಧಿಕಾರಿಗಳ ಸಂಪರ್ಕ, ಸರ್ಕಾರದ ಸಂಪರ್ಕ ಹೆಚ್ಚಾಗಿರುವುದಿಲ್ಲ. ಅವರು ಕಾಡು ಜನಗಳ ಹಾಗೆ ಜೀವಿಸಬೇಕಾದಂಥ ಪರಿಸ್ಥಿತಿ ಬಂದರೂ ಬರಬಹುದು. ನಾಗರಿಕತೆ ಮತ್ತು ತನ್ನ ಮೇಲ್ಮೆಯನ್ನು ರೂಢಿಸಿಕೊಳ್ಳತಕ್ಕಂಥ ಅವಕಾಶಗಳು ಹೆಚ್ಚುಹೆಚ್ಚಾಗಿ ಬೆಳೆಯುವುದು ದೂರವಾಗಿ ನಮ್ಮ ಜನಗಳಿಗೆ ಒಂದು ಕಷ್ಟ ಕಾರ್ಪಣ್ಯಗಳು ಒದಗಬಹುದು ಎಂದು ನನಗೆ ಭಾಸವಾಗುತ್ತದೆ. ಆದುದರಿಂದಲೇ ನಮ್ಮ ದೇಶದ ಆಡಳಿತವನ್ನು ನಡೆಸಿದ ಯಾವ ಪ್ರಮುಖರೂ ಕೂಡ ದೇಶ ದೊಡ್ಡದಾಗುವುದಕ್ಕೆ ಅಥವಾ ವಿಪರೀತವಾಗಿ ಒಂದು ವಿಸ್ತಾರವಾದ

(ಟಿ. ಎಸ್. ಮೂಡಲಗಿರಿಗೌಡ.)

ದೇಶವನ್ನಾಗಿ ಮಾಡುವುದಕ್ಕೆ ಇಷ್ಟಪಡುತ್ತಾ ಇಲ್ಲ. ದೇಶ ದೊಡ್ಡದಾದರೆ ನಮ್ಮ ಜನಗಳಿಗೆ ಹೆಚ್ಚು ತೊಂದರೆ ಒದಗುತ್ತದೆ ಎಂಬುದು ಗೊತ್ತಾದಂಥ ವಿಷಯ. ಮೈಸೂರಿನಲ್ಲಿ ·9 ಮತ್ತು ಹೈದರಾಬಾದ್, ಬೊಂಬಾಯಿ ಕರ್ಣಾಟಕಗಳಲ್ಲಿ 2·0 ಭೂಮಿ ಇದೆ. ನಾವು ಬೆಳಗ್ಗೆ ಎದ್ದರೆ ಸಂಜೆಯವರೆಗೂ ನಮ್ಮ ಸರ್ಕಾರದವರಲ್ಲಿ ಭೂಮಿಯನ್ನು ಕೊಡಿ, ಕೊಡಿ ಎಂದು ಕೇಳಿದರೆ, ಭೂಮಿ ಕೊಡುವುದಿಲ್ಲ ಭೂಮಿ ಇಲ್ಲವೆಂದು ಹೇಳುತ್ತಾರೆ. ನಮ್ಮಲ್ಲಿಯೂ ಸಹ ವಿಶೇಷ ಭೂಮಿ ಇದೆ. ಭೂ ಸಂಪತ್ತು ಬೇಕಾದಷ್ಟು ದೊರೆಯುತ್ತದೆ. ಭೂಮಿ ಇರುವಕಡೆ ಹೋಗುವ ಸ್ವಭಾವ ನಮ್ಮಲ್ಲಿ ಮೊದಲಿನಿಂದಲೂ, ಬೆಳೆದು ಬಂದಿಲ್ಲ. ನಮ್ಮ ಭಾರತದಲ್ಲಿ ಬೊಂಬಾಯಿ ಕರ್ಣಾಟಕದಲ್ಲಾಗಲಿ ಹೈದರಾಬಾದು ಕರ್ಣಾಟಕದಲ್ಲಾಗಲಿ ಭೂ ಸಂಪತ್ತು ಬೇಕಾದಷ್ಟು ಹೆಚ್ಚಾಗಿದ್ದರೆ, ಇಂದು ಅಲ್ಲಿಗೆ ಹೋಗಿ ವ್ಯವಸಾಯ ಮಾಡುವುದಕ್ಕೆ ಯಾವ ಪ್ರಜೆಗಾದರೂ ಹಕ್ಕಿಲ್ಲವೆಂದು ಯಾರು ತಾನೆ ಹೇಳಿದ್ದಾರೆ? ಆದರೆ ನಮ್ಮ ಜನರಲ್ಲಿ ಒಂದು ವಿಶೇಷವಿದೆ. ಪಕ್ಕದ ತಾಲ್ಲೂಕಿನಲ್ಲಿ ಬೇಕಾದಷ್ಟು ಜಮೀನಿದೆ, ಹೋಗಿ, ಬೇಕಾದಷ್ಟು ಜಮೀನು ಕೊಡುತ್ತೇವೆಂದು ಹೇಳಿದರೂ ಹೋಗತಕ್ಕ ಸ್ವಭಾವ ನಮ್ಮ ಜನರಿಗೆ ಬಂದಿಲ್ಲ. ಅವರು adventurous ಅಲ್ಲವೆಂದಾದರೂ ತಿಳಿದುಕೊಳ್ಳಬಹುದು. ಅಂತೂ ಅದು ನಮ್ಮಲ್ಲಿ ಬೆಳೆದು ಬಂದಿರತಕ್ಕ ಸಂಪ್ರದಾಯ. ಪಕ್ಕದ ಮನೆಯಲ್ಲಿರುವವರಾಗಲಿ, ನೂರಾರು ವರ್ಷಗಳಿಂದ ಬೆಳೆದು ಬಂದಿರತಕ್ಕ ಸಂಬಂಧವನ್ನು ಬಿಟ್ಟುಹೋಗುವುದಕ್ಕೆ, ಬೇರೆ ಕಡೆ ನೆಲೆಸುವುದಕ್ಕೆ ಇಷ್ಟವಿಲ್ಲ. ಇಲ್ಲಿಯೇ ಎಷ್ಟೇ ಕಾರ್ಪಣ್ಯಗಳಿಂದ ತೊಳಲುತ್ತಿದ್ದರೂ.! . . .

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಕೂಪ ಮಂಡೂಕ !

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ನಾನು ಬೇಕಾದರೆ ಶ್ರೀಮಾನ್ ಚಿಕ್ಕಲಿಂಗಯ್ಯನವರಿಗೆ ಸರಿಯಾಗಿ ಉತ್ತರಕೊಡಬಲ್ಲೆ. ನಮ್ಮ ಊರಿನ ಪಕ್ಕದಲ್ಲೇ 2,000 ಎಕರೆ ಜಮೀನುಗಳನ್ನು release ಮಾಡಿ ನಮ್ಮ ನಿಮ್ಮ ಪಂಗಡದವರಿಗೆ 1,000 ಎಕರೆಗಳನ್ನು ಕೊಟ್ಟಿರುತ್ತಾರೆ. ಮುನ್ನೂರು ನಾನ್ನೂರು ಸಂಸಾರಗಳವರಿಗೆ, ಅಲ್ಲಿಯೇ ನೆಲೆಸುತ್ತೇವೆಂದವರಿಗೆ, ಬರೆಸಿಕೊಂಡು ಜಮೀನು ಕೊಟ್ಟರು. ಬಹಳ ಕಷ್ಟಪಟ್ಟಿದ್ದರ ಮೇಲೆ 70 ಮನೆಗಳವರು ಸಂಸಾರ ಕಟ್ಟಿಕೊಂಡು ಬಂದರು. ಆದರೆ ಈ ಹೊತ್ತು ನೋಡಿದರೆ ಏಳು ಮನೆಗಳು ಕೂಡ ಅಲ್ಲಿಲ್ಲ. ಇದರಿಂದೇನು ತೋರುತ್ತದೆ? ನಮ್ಮಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ಬೇಕಾದಷ್ಟು ಜಮೀನಿದೆ, ಬನ್ನಿ ಬನ್ನಿ, 10 ಎಕರೆಯಲ್ಲ 20 ಎಕರೆಯಾದರೂ ಉದಾರವಾಗಿ ಕೊಡುತ್ತೇವೆ ಎಂದು ಮಾನ್ಯ ಶ್ರೀಮಾನ್ ಮಂಜಪ್ಪನವರು ಕರೆಯುತ್ತಿದ್ದಾರೆ. ಇಷ್ಟಾದರೂ ಮೈಸೂರು ಸಂಸ್ಥಾನದಲ್ಲಿ ಭೂಮಿ ಸಿಕ್ಕುತ್ತದೆಂದು ಹೇಳಿ ಒಬ್ಬರಾದರೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆಹೋಗಿದ್ದಾರೆಯೇ? ಇದು ನಮ್ಮ ಸಂಪ್ರದಾಯ. ನೀವು ಹೇಳುವ ಸ್ವಭಾವ ನಮ್ಮ ಜನರಿಗಿದ್ದರೆ, ಇಂದು ನಮ್ಮದೇಶದ ಟೀ ತೋಟಗಳಿಗೆ, ಕಾಫಿ ತೋಟಗಳಿಗೆ ಹೊರದೇಶಗಳಿಂದ ಯೂರೋಪಿಯನ್ನರು ಬಂದು ಆಕ್ರಮಿಸಿಕೊಳ್ಳುತ್ತಿದ್ದರೇ? ಆದ್ದರಿಂದ ಏನಿದ್ದರೂ, ಹೆಚ್ಚುಹಣವಿರುವವರು ಹೋಗಿ ನೆಲಸಬಹುದೇ ಹೊರತು ಸಾಮಾನ್ಯಜನರ ವಲಸೆ ಹೋಗುವ ನಿದರ್ಶನಗಳು ಕಂಡುಬಂದಿಲ್ಲ. ಆದ್ದರಿಂದ ವಿಶೇಷವಾಗಿ ಭೂಮಿ ಇದೆಯೆಂದರೂ ಬಹಳ ಶೀಘ್ರಫಲ ಬರುತ್ತದೆಯೇ, ಪ್ರಯೋಜನವಾಗುತ್ತದೆಯೇ, ಯೋಚಿಸಿ ನೋಡಬೇಕು. ಕನ್ನಡ ಮಾತನಾಡತಕ್ಕಂಥ ನಮ್ಮ ಸಹೋದರರ, ನಮ್ಮ ಸ್ವಬಂಧುಗಳ, ನಮ್ಮ ಮನೆತನಕ್ಕೆ ಸೇರಿದವರ ವಿಷಯದಲ್ಲಿ ನಮಗೆ ಸಂಪೂರ್ಣವಾದ ಕನಿಕರವಿದೆ. ಅವರ ಕಷ್ಟಸುಖಗಳಿಗೆ ಇತರರು ಎಷ್ಟು ಬಾಧ್ಯರೋ ಅದಕ್ಕಿಂತ ಹೆಚ್ಚುಬಾಧ್ಯರು ನಾವು. ಆದರೂ, ನಾನು ಒಂದುವೇಳೆ ಅವರ ಕಷ್ಟ ಕಾರ್ಪಣ್ಯಗಳಿಗೆ ಒಪ್ಪುವುದಾದರೂ ನಮ್ಮ ಹೆಂಡತಿ ಮಕ್ಕಳು ಒಪ್ಪುತ್ತಾರೆಂದು ಹೇಗೆ ಭಾವಿಸೋಣ? ನಾವು ಒಪ್ಪಬಹುದು. ಆದರೆ, ಇದರ ಜವಾಬ್ದಾರಿಯನ್ನು, ಇದರ ಕಷ್ಟಸುಖಗಳನ್ನು ಮುಂದೆ ಹೊರಬೇಕಾದ ಅವರು ಒಪ್ಪಬೇಕು. ನಮ್ಮ ಸ್ವಭಾವ, ಸಂಪ್ರದಾಯ ಹೀಗಿರುವಾಗ ಅಷ್ಟು ಸುಲಭವಾಗಿ ಈ ಸಂಪ್ರದಾಯ ಮನೋಭಾವನೆಗಳನ್ನು ಬದಲಾಯಿಸುವುದಕ್ಕೆ ಸಾಧ್ಯವೆ? ಅಲ್ಲಿ ಖನಿಜ ಸಂಪತ್ತು ವಿಶೇಷವಾಗಿದೆಯೆಂದು ಹೇಳಿದ್ದಾರೆ. ಎಷ್ಟೇ ಖನಿಜ ಸಂಪತ್ತಿದ್ದರೂ ನಮಗೆಷ್ಟು ಬರುತ್ತದೆಯೋ ಅಷ್ಟೇಬರುತ್ತದೆ. ಅದಕ್ಕಿಂತ ಹೆಚ್ಚಿಗೆ ಬರುವುದೆಲ್ಲಾ ಇಂಡಿಯಾ ಸರ್ಕಾರದವರಿಗೆ ಹೋಗುತ್ತದೆ.

ಒಬ್ಬ ಸದಸ್ಯರು.—ಅದೂ ನಮ್ಮ ಸರ್ಕಾರ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಾಗಿದ್ದರೆ, ವಿಶಾಲ ಕರ್ಣಾಟಕವನ್ನು ಮಾಡಿದರೆ ಮಾತ್ರ ಬರುತ್ತದೆ, ಇಲ್ಲದಿದ್ದರೆ ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಎಷ್ಟು ಸಂಪತ್ತು ದೊರೆಯುತ್ತದೆಂದು ಹೇಳುತ್ತೇವೆಯೋ ಅದಕ್ಕೆ ಸರಿಯಾಗಿ ಖರ್ಚು ಮಾಡುವ ಜವಾಬ್ದಾರಿಯನ್ನೂ ಹೊರಬೇಕಾಗುತ್ತದೆ.

ಆದ್ದರಿಂದ ಇವೆಲ್ಲಾ ಮುಖ್ಯವಲ್ಲ. ನಾನು ಮೊದಲೇ ಹೇಳಿದಹಾಗೆ, ಆಸ್ಪತ್ರೆಗಳ ಸಂಖ್ಯೆ ರಸ್ತೆಗಳ ಸಂಖ್ಯೆ, ಪಾಠಶಾಲೆಗಳ ಸಂಖ್ಯೆ ಇವು ಮುಖ್ಯವಲ್ಲ. ಒಂದು ತಾಲ್ಲೂಕಿನಲ್ಲಿ ಕಡಮೆಯಿರಬಹುದು, ಇನ್ನೊಂದು ತಾಲ್ಲೂಕಿನಲ್ಲಿ ಹೆಚ್ಚಿಗೆಯಿರಬಹುದು. ಏನಿದ್ದರೂ ನಾವು ಇಲ್ಲಿ 155ನೆಯ ಪುಟದಲ್ಲಿ ಕೊಟ್ಟಿರುವ ಲೇಣಿ ದೇಣಿಗಳ ಕಡೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಯೋಚಿಸಬೇಕಾಗಿದೆ.

ಹೀಗೆ ಈ ವಿಷಯವನ್ನು ಯೋಚಿಸುವಾಗ, ಭಾರತ ಸರ್ಕಾರದವರು, ಈ ರೀತಿ ಮೈಸೂರಿನವರು ಮೈಸೂರು ಮೈಸೂರಿನ ಹಾಗೆಯೇ ಇರಬೇಕೆಂದು ಹೇಳಿದರೆ, ಕೊಡಗಿನವರು ಕೊಡಗಿನ ಹಾಗೆಯೇ ಇರಬೇಕೆಂದು ಹೇಳಿದರೆ, ಆಡಳಿತ ದೃಷ್ಟಿಯಿಂದ ಅವರು ಯಾವ ಯೋಜನೆಯನ್ನು ಮಾಡುತ್ತಾರೆಂಬುದನ್ನು ನೋಡಬೇಕಾಗಿದೆ. ಕೊಡಗು ಕೊಡಗಿನ ಹಾಗೆಯೇ ಉಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಹೇಳಿದರೆ, ಮೈಸೂರು ಮೈಸೂರಿನ ಹಾಗೆಯೇ ಉಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಅವರು ಸೇರುವುದಿಲ್ಲವೆಂದು ಹೇಳಿದರೂ ಕೂಡ ಸೇರಿಸಬೇಕಾದಂಥ ಸಂದರ್ಭ ಒದಗುತ್ತದೆ. ಹೀಗೆ ಹೇಳುವಾಗ ಮೈಸೂರಿನವರಾದ ನಮಗೆ ಬರೀ ಕನ್ನಡ ಮಾತನಾಡತಕ್ಕಂಥವರೆಂದು, ಭಾಷೆಯ ಮೇಲೆ ಪ್ರಾಂತ್ಯ ವಿಂಗಡಣೆ ಮಾಡತಕ್ಕದ್ದು ಸರಿಯೇ ಎಂದು ಯೋಚನೆ ಮಾಡಬೇಕು. ಏಕೆಂದರೆ, ಮೊದಲಿನಿಂದಲೂ ನಮಗೆ ಭಾಷೆಯ ವಿಷಯದಲ್ಲಿ ಗೌರವವಿದ್ದರೂ ಕೂಡ, ಮೈಸೂರಿನಲ್ಲಿರತಕ್ಕ ಎಲ್ಲ ಪ್ರಜೆಗಳ ಯೋಗಕ್ಷೇಮವನ್ನೂ ಕೂಡ ನೋಡುತ್ತಿದ್ದೇವೆಯೇ ಹೊರತು, ಅವನು ತೆಲುಗು ಮಾತನಾಡತಕ್ಕವನು ಎಂದು ಆತನ ಸೌಲಭ್ಯವನ್ನು ಕಡಮೆಮಾಡಿ, ಇವನು ತಮಿಳು ಮಾತನಾಡತಕ್ಕವನು ಎಂದು ಇವನ ಸೌಲಭ್ಯಗಳನ್ನು ಕಡಮೆ ಮಾಡಿ ಎಂದು ಹೇಳಿ ಸಂಕುಚಿತ ಭಾವನೆಯನ್ನು ಎಂದೂ ತೋರ್ಪಡಿಸಿಲ್ಲ. ಆದ್ದರಿಂದ ಭಾಷೆಯ

ಭ್ರಾಂತಿಯಿಂದ ನಾವು ಪ್ರಾಂತ್ಯ ವಿಂಗಡಣೆಗೆ ಹೋಗತಕ್ಕದ್ದು ಸರಿಯಲ್ಲ. ಆಂಧ್ರರೇ ಆಗಲಿ, ತಮಿಳರೇ ಆಗಲಿ ಎಲ್ಲರೂ ಭಾರತೀಯರೇ. ಭಾರತದ ಗೌರವ ಪ್ರತಿಷ್ಠೆಗಳ ಕಡೆ ನಮ್ಮೆಲ್ಲರ ದೃಷ್ಟಿಯಿರಬೇಕೇ ಹೊರತು ಬರೀ ಭಾಷೆಯ ಕಡೆ ನಮ್ಮ ದೃಷ್ಟಿ ಹರಿಸಕೂಡದು. ಆದ್ದರಿಂದ ಪುನರ್ವಿಂಗಡಣಾ ಸಮಿತಿಯವರು ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದಕ್ಕಿಂತಲೂ, ಎಷ್ಟು ಪ್ರದೇಶವನ್ನು ಸೇರಿಸಬೇಕು, ಎಷ್ಟು ಪ್ರಮಾಣದ ಪ್ರಾಂತ್ಯವನ್ನು ವಿಂಗಡಣೆ ಮಾಡಿದರೆ ಆಡಳಿತ ಸುಗಮವಾಗಿ ಆಗಬಲ್ಲದು ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ಅಭಿಪ್ರಾಯವೂ ಕೂಡ ಅದೇ ರೀತಿ ಇರಬೇಕು. ಅದು ಬಿಟ್ಟು ಭಾಷೆಗೆ ಸೋಗೊಟ್ಟು ಸಂಕುಚಿತ ಭಾವನೆಯವರು ಮೈಸೂರಿನವರು ಎಂಬ ಅಪಕೀರ್ತಿಯನ್ನು ನಾವು ಹೊರಬಾರದು. ನಮ್ಮ ಮುಖ್ಯ ಮಂತ್ರಿಗಳಾದರೋ ಇಡೀ ಭಾರತದಲ್ಲಿ ಅವರಿಗೆ ವಿಶೇಷವಾದ ಗೌರವವಿದೆ. ಅವರ ಅಭಿಪ್ರಾಯಗಳೂ ಕೂಡ ಭಾರತದ ಭದ್ರತೆಗೆ, ಭಾರತದ ಪ್ರತಿಷ್ಠೆಗಳಿಗೆ ಅನುಗುಣವಾಗಿರಬೇಕೇ ಹೊರತು ಸಂಕುಚಿತವಾಗಿರಬಾರದು ಎಂಬ ವಿಷಯವನ್ನೂ ಕೂಡ ನಾನು ಅವರಿಗೆ ಸೂಚನೆ ಕೊಟ್ಟು, ಪ್ರಾಂತ್ಯ ನಿರ್ಮಾಣ ಮಾಡುವಾಗ ಅತಿ ವಿಶಾಲವಾಗಿ, ಅಗಾಧವಾಗಿ, ಆಡಳಿತಕ್ಕೆ ಮೀರಿದಂತಹ ಒಂದು ಪ್ರಾಂತ್ಯವನ್ನು ನಿರ್ಮಾಣ ಮಾಡುವುದಕ್ಕಿಂತಲೂ, ಆಡಳಿತಕ್ಕೆ ಸುಗಮವಾದ, ಕ್ಷೇಮಕರವಾದ ಪ್ರಾಂತ್ಯ ನಿರ್ಮಾಣವನ್ನು ಮಾಡಿ ಮೈಸೂರಿನ ಪ್ರತಿಷ್ಠೆ ಮತ್ತು ಗೌರವಗಳನ್ನು ಉಳಿಸಿಕೊಂಡು ಬರಬೇಕೇ ಹೊರತು, ಅದನ್ನು ಅಳಿಸುವ ಪ್ರಾಂತ್ಯ ನಿರ್ಮಾಣವಾಗಬಾರದು ಎಂದು ಒತ್ತಿ ಒತ್ತಿ ಹೇಳಿ, ಮಾನ್ಯ ಸಭೆಯವರೆಲ್ಲರೂ ಕೂಡ, ನಮ್ಮ ಹಿರಿಯರು ಮೈಸೂರಿಗಾಗಿ ದುಡಿದು ಗೌರವವನ್ನು ತೋರಿಸಿ ಇಡೀ ಭಾರತದಲ್ಲಿ ಇಡೀ ಪ್ರಪಂಚದಲ್ಲಿ ಇಂದಿನವರೆಗೆ ಮೈಸೂರನ್ನು ಹೇಗೆ ಗೌರವ ಪ್ರತಿಷ್ಠೆಗಳಿಂದ ಬೆಳಗಿಸಿದ್ದಾರೋ ಆ ಬೆಳಕನ್ನು ತಾವು ಉಳಿಸಿಕೊಂಡು ಬರಬೇಕು, ಆ ಗೌರವವನ್ನು ಉಳಿಸಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಜೈ ಹಿಂದ್.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಈ ಸಮಸ್ಯೆ ಬಹಳ ಪ್ರಾಮುಖ್ಯವಾದದ್ದು. ಈ ವಿಚಾರದಲ್ಲಿ ನಮ್ಮ ಸ್ನೇಹಿತರು ಕೆಲವು ಅಂಕಿ ಅಂಶಗಳೊಡನೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈಗತಾನೆ ಭಾಷಣ ಮಾಡಿದ ಶ್ರೀಮಾನ್ ಮೂಡಲಗಿರಿಗೌಡರು ತಮ್ಮ ಅಭಿಪ್ರಾಯವನ್ನು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ.

ಅಂತೂ, ಇದು ಬಹಳ ಮುಖ್ಯವಾದ ಪ್ರಶ್ನೆ. ಯಾರೇ ಆದರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ಮತ್ತೊಬ್ಬರು ಅದನ್ನು ಟೀಕೆ ಮಾಡುವುದು ಸೂಕ್ತವಲ್ಲ. ಪ್ರತಿಯೊಬ್ಬ ಸದಸ್ಯರೂ ತಮ್ಮ ಜವಾಬ್ದಾರಿಯನ್ನರಿತು ತಮ್ಮ ಅಭಿಪ್ರಾಯವನ್ನು ಪರವಾಗಿಯಾಗಲಿ ವಿರೋಧವಾಗಿಯಾಗಲಿ ಹೇಳುತ್ತಾರೆ. ಶ್ರೀಮಾನ್ ನರಸಿಂಹರೆಡ್ಡಿಯವರು ಹೇಳಿರುವ ರೀತಿಯಲ್ಲಿ, ಯಾರಾದರೂ ತಪ್ಪು ಹೇಳಿದರೆ ಸರಿಮಾಡತಕ್ಕದ್ದು ನಮ್ಮ ಕರ್ತವ್ಯ. ಅಷ್ಟನ್ನು ಯಾರೂ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ಪರವಾಗಿಯೇ ಮಾತನಾಡಲಿ ಅಥವಾ ವ್ಯತಿರಿಕ್ತವಾಗಿಯೇ ಮಾತನಾಡಲಿ, ಎಲ್ಲರೂ ದೇಶಭಕ್ತರೇ; ಎಲ್ಲರಲ್ಲೂ ದೇಶಾಭಿಮಾನವಿದೆ. ಮೈಸೂರು ದೇಶದ ವೈಶಿಷ್ಟ್ಯವನ್ನು ಎತ್ತಿಹಿಡಿಯಬೇಕೆಂದು ಏನೋ ಶ್ರೀಮಾನ್ ಮೂಡಲಗಿರಿಗೌಡರು ಹೇಳಿದರು. ಆದರೆ ಅವರು ಸರಿಯಾಗಿ ಆ ವೈಶಿಷ್ಟ್ಯವೇನೆಂಬುದನ್ನು ತಿಳಿಸಿಲ್ಲ. ಆದರೂ ದೇಶದ ಮಾನತೆಯನ್ನು, ಗೌರವವನ್ನು ಉಳಿಸಿಕೊಳ್ಳಬೇಕು ಅದನ್ನು ಹೆಚ್ಚಿಸಬೇಕು ಎಂಬ ದೇಶಾಭಿಮಾನ ಎಲ್ಲರಿಗೂ ಇದೆ. ಪರವಾಗಿಯೇ ಮಾತನಾಡಲಿ, ವ್ಯತಿರಿಕ್ತವಾಗಿಯೇ ಮಾತನಾಡಲಿ ನಮ್ಮ ನಮ್ಮಲ್ಲಿ ಅಭಿಪ್ರಾಯ ವ್ಯತ್ಯಾಸವಿರಬಹುದು ಅಷ್ಟೆ. ಆದ್ದರಿಂದ ವ್ಯತಿರಿಕ್ತವಾಗಿ ಮಾತನಾಡಿದ್ದರಿಂದಲೇ ದೇಶದ್ರೋಹ ಮಾಡುತ್ತಿದ್ದಾರೆಂದು ಹೇಳಕೂಡದು. ನಮ್ಮ ನಮ್ಮ ದೃಷ್ಟಿಕೋಣದಿಂದ ಹೇಳುವಾಗ ಯಾರೂ ತಪ್ಪು ಭಾವನೆಯನ್ನು ಸೂಚಿಸಬಾರದು.

ಈಗ ನಮ್ಮ ಮೈಸೂರು ದೇಶದ ಪ್ರಜೆಗಳೇ ಆಗಲಿ, ಸದಸ್ಯರುಗಳೇ ಆಗಲಿ ನಮ್ಮ ದೇಶವನ್ನು ವಿಸ್ತರೀಕರಣ ಮಾಡಬೇಕು, ಅಕ್ಕಪಕ್ಕದ ಪ್ರದೇಶಗಳನ್ನು ಸೇರಿಸಿ ಕೊಡಬೇಕು ಎಂದ ಯಾರನ್ನೂ ಕೇಳಿಕೊಂಡಿಲ್ಲ.

4 P. M.

ಈಗ ಅಂಥ ಒಂದು ಸನ್ನಿವೇಶ ಬಂದಿದೆ. ಈ ಹಿಂದೆ ಆಗಲೇ ಈ ಸಂಬಂಧವಾಗಿ ನಮ್ಮ ಕಾಂಗ್ರೆಸ್ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ಸೇರಿಸಿ—ಆ ಸಮ್ಮೇಳನ ಕಾಲದಲ್ಲಿ ನಿಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರು ನಿಮ್ಮ ದೇಶಕ್ಕೆ ನಾವೂ ಬಂದು ಸೇರಿಕೊಳ್ಳುತ್ತೇವೆ ಎಂದು ಕೇಳುವ ಪಕ್ಷಕ್ಕೆ ಆಗ ನೀವೇನು ಅಭಿಪ್ರಾಯಪಡುತ್ತೀರಿ? ಇದಕ್ಕೆ ನಿಮ್ಮ ವ್ಯತಿರಿಕ್ತವಾದ ಭಾವನೆಯೇನಾದರೂ ಇದೆಯೋ ಎಂದು ಕೇಳಿದ್ದಾರೆ. ಆಗ ಅದಕ್ಕೆ ನಮ್ಮದಾರದೂ ಅಭ್ಯಂತರವಿಲ್ಲ ಅನುಕೂಲವಾಗಿ ಸರ್ವರೂ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೆ ಆ ದಿವಸ ವ್ಯಕ್ತಪಡಿಸಿದ್ದಂಥ ಅಭಿಪ್ರಾಯಕ್ಕನುಸಾರವಾಗಿ ಈ ದಿವಸ ಅದನ್ನು ಕಾರ್ಯರೂಪಕ್ಕೆ ತರುವಂಥ ಒಂದು ಸುಸಮಯ ಒದಗಿದೆ. ಈ ಹಿಂದೆ ಆ ಬಳ್ಳಾರಿಯನ್ನು ನೀವು ನಮ್ಮ ಮೈಸೂರಿಗೇ ಸೇರಿಸಬೇಕು ಎಂದು ನಾವುಗಳು ಯಾರೂ ಅರ್ಜಿಹಾಕಿಕೊಂಡಿರಲಿಲ್ಲ. ಆಂಧ್ರಪ್ರಾಂತ್ಯ ನಿರ್ಮಾಣವಾದಂಥ ಕಾಲದಲ್ಲಿ ಅದು ತಾನೇ ತಾನಾಗಿ ನಮಗೆ ಬಂತು. ಆದರೆ ಈ ದಿವಸ ಈ ಗಡಿಗಳ ಪುನರ್ನಿರ್ಮಾಣ ಕಾರ್ಯದ ಬಗ್ಗೆ ಇಡೀ ಇಂಡಿಯಾ ದೇಶಕ್ಕೇ ಅನ್ವಯಿಸುವಂಥ ಒಂದು ಸಮಿತಿಯನ್ನು ಭಾರತ ಸರ್ಕಾರ ನೇಮಕಮಾಡಿದೆ. ಆ ಸಮಿತಿಯವರು ಎಲ್ಲಾ ಪ್ರಾಂತ್ಯಗಳಿಗೂ ಹೋಗಿ ಜನಾಭಿಪ್ರಾಯವನ್ನು ಶೇಖರಣೆ ಮಾಡಿಕೊಂಡಿರುತ್ತಾರೆ. ಈಗ ಅದೇ ಸಂದರ್ಭದಲ್ಲಿ ಅವರಿಗೆ ನಮ್ಮ ಒಂದು ಅಭಿಪ್ರಾಯವನ್ನು ಸೂಚಿಸುವ ಬಗ್ಗೆ ನಮಗೊಂದು ಸದವಕಾಶಸಿಕ್ಕಿದೆ. ಈ ಸಮಯದಲ್ಲಿ ಬಹುಭಾಗದ ಜನರಿಗೆ ನಮ್ಮ ನೆರೆಹೊರೆಯ ಪ್ರಾಂತ್ಯಗಳಲ್ಲಿರತಕ್ಕವರಿಗೆ, ಯಾರೋ ಈ ಕಾಂಗ್ರೆಸ್ ಸಂಸ್ಥೆಯು ಈ ವಿಷಯದಲ್ಲಿ ಒಂದು ಭಿನ್ನಾಭಿಪ್ರಾಯವಿಟ್ಟುಕೊಂಡಿದ್ದಹಾಗೆ ಒಂದು ತಪ್ಪು ತಿಳುವಳಿಕೆ ಹುಟ್ಟಿಸಿದ್ದಾರೆ. ಅದಕ್ಕಾಗಿ ನಾನೀಗ ನಮ್ಮ ಖಚಿತವಾದ ಅಭಿಪ್ರಾಯಗಳನ್ನು ಕೊಡತಕ್ಕದ್ದು ಅವಶ್ಯಕವಾಗಿದೆ. ಆದರೆ, ಹೀಗೆ ನಾವು ಒಂದು ಅಭಿಪ್ರಾಯವನ್ನು ಕೊಡತಕ್ಕ ಕಾಲದಲ್ಲಿ ನಮ್ಮ ದೇಶಕ್ಕೆ ಇದರಿಂದ ಯಾವ ರೀತಿ ಧಕ್ಕೆಯುಂಟಾಗಬಹುದು, ಹೀಗೆ ಧಕ್ಕೆಯುಂಟಾಗಲು ಅವಕಾಶವಿದೆಯೋ, ಅಥವಾ ಇದು ಹೀಗಾದರೆ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರುವುದಕ್ಕೆ ಅವಕಾಶಗಳಿರುತ್ತವೆಯೋ ಎಂಬುದನ್ನೆಲ್ಲಾ ಆಲೋಚಿಸಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದ್ದು ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸದಸ್ಯರುಗಳಾದ ನಮ್ಮೆಲ್ಲರ ಕರ್ತವ್ಯ. ಇದೇ ಅಭಿಪ್ರಾಯಕ್ಕೇ ಶ್ರೀ ಟಿ. ಎಚ್. ಮೂಡಲಗಿರಿಗೌಡರು, ಶ್ರೀಮಾನ್ ಮಹಾರಾಜನವರು

ಶ್ರೀ ಇಜಾರಿ ಸಿರಸಪ್ಪ.—ಆಂಧ್ರದಲ್ಲಿ ರಾಯಲು ಸೀಮೆಯವರ ಒಂದು ಗುಂಪಿತ್ತು. ಅವರೂ ಸರ್ಕಾರ್ ಪ್ರದೇಶಗಳವರೂ ಸೇರಿ ಶ್ರೀ ಬಾಗ್ ಒಪ್ಪಂದ ಮಾಡಿಕೊಂಡು ಕರ್ನೂಲಿನಲ್ಲಿ ರಾಜಧಾನಿ ಮಾಡಿಕೊಂಡದ್ದು ನಮ್ಮ ಜ್ಞಾಪಕದಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪ್ರಜಾಪ್ರಭುತ್ವದಲ್ಲಿ ಪ್ರಜಾವಾಣಿಗೆ ಬೆಲೆಯಿದೆಯೇ ಹೊರತು ವೈಯಕ್ತಿಕವಾಗಿ ಕೊಡತಕ್ಕ ಭರವಸೆಗಳನ್ನು ನಂಬುವುದು ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎ. ಭೀಮಪ್ಪನಾಯಕ್.—ಮಹಮದ್ ಬಿನ್ ತೊಗಲಕ್ ದೆಹಲಿಯನ್ನು ಬಿಟ್ಟು ದೇವಗಿರಿ ರಾಜಧಾನಿ ಯಾಗಬೇಕೆಂದು ಹೋಗಿದ್ದ ! (ನಗು !)

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ಹೊತ್ತು ಅಂಥಾದ್ದು ನಡೆಯಬಹುದು. ಇತಿಹಾಸ ಪುನರಾವೃತ್ತಿಯಾದರೂ ಆಗಬಹುದು; ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಚರಿತ್ರೆ ಎಲ್ಲಿ ಪುನರಾವೃತ್ತಿಯಾಗುತ್ತದೆಯೋ ಎನ್ನುವ ಭ್ರಮೆಯೇ ಈ ಹೊತ್ತು ನಮ್ಮಲ್ಲಿರುವುದು.

ಸ್ವಾಮಿ, ಕೋರ್ಟುಗಳ ವಿಷಯವನ್ನು ತೆಗೆದುಕೊಳ್ಳೋಣ. ಹೈಕೋರ್ಟಿರತಕ್ಕ ಒಂದು ಸ್ಥಳಕ್ಕೆ ಆ ದೇಶದ ಪ್ರಜೆ ಬರಬೇಕಾದರೆ, ಎಷ್ಟು ಖರ್ಚಾಗುತ್ತದೆ, ಇದಕ್ಕೆ ಅವನ ಸಾಧನ ಸಂಪತ್ತೆಷ್ಟಿದೆ ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ಮಾನ್ಯ ಮಿತ್ರರು ಸುಪ್ರೀಂ ಕೋರ್ಟಿನ ವಿಷಯ ಹೇಳಿದರು. . . .

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸುಪ್ರೀಂ ಕೋರ್ಟು ಡೆಲ್ಲಿಯಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಒಂದು ಲಕ್ಷದಲ್ಲಿ ಒಬ್ಬ ಪ್ರಜೆ ಸುಪ್ರೀಂ ಕೋರ್ಟಿಗೆ ಹೋಗುವುದಿಲ್ಲ, ಇನ್ನೂ ವಿರಳ. ನಾವು ಸಾಮಾನ್ಯ ಪ್ರಜೆಯ ವಿಚಾರ ಯೋಚನೆಮಾಡುತ್ತಿದ್ದೇವೆ. ಸಾಮಾನ್ಯ ಪ್ರಜೆ ಎಷ್ಟು ಕಷ್ಟ ನಷ್ಟಗಳಿಗೊಳಗಾಗುತ್ತಾನೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ.

ಮೈಸೂರಿನಲ್ಲಿ ನಮ್ಮ ರಾಜ್ಯಾಂಗ ಸಭೆ ನಡೆದ ಕಾಲದಲ್ಲಿ ಶ್ರೀಮಾನ್ ಇಮಾಂರವರು ಮೈಸೂರಿನ ವೈಶಿಷ್ಟ್ಯದ ವಿಷಯದಲ್ಲಿ ಗಂಟೆಗಟ್ಟಲೆ ಮಾತನಾಡಿ, ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕು, ಇದನ್ನು ಲವಲೇಶವಾದರೂ ಕಡಮೆ ಮಾಡಬಾರದು ಎಂದು ವಾದಿಸಿದ್ದಾರೆ. ಅದು ಪುಟಗಟ್ಟಲೆ ಇದೆ. ಅದನ್ನವರು ಮತ್ತೆ ಜ್ಞಾಪಿಸಿಕೊಳ್ಳಲಿ ಎಂದು ನಾನು ಅವರಿಗೆ ಹೇಳುತ್ತೇನೆ. ಒಟ್ಟಿನಲ್ಲಿ, ಆಡಳಿತದ ವಿಷಯವನ್ನು ಸಾಮಾನ್ಯ ಪ್ರಜೆಯ ದೃಷ್ಟಿಯಿಂದ ಬಹು ಮುಖ್ಯವಾಗಿ ಯೋಚಿಸಬೇಕಾಗಿದೆ. ಇಂಥ ಒಂದು ಸಮಸ್ಯೆಯನ್ನು ನಾವು ಅಷ್ಟು ಸುಲಭವಾಗಿ ಯೋಚಿಸತಕ್ಕುದಲ್ಲ. ಸ್ವಾಮಿ, ಹಿರಿಯರಾಡುವ ಒಂದು ನುಡಿ ಇದೆ. ಸಾಮಾನ್ಯವಾಗಿ ನಾವು ಒಂದು ಮನೆಯನ್ನು ಕಟ್ಟಬೇಕಾದರೆ, ನಾವು ಎಷ್ಟರಮಟ್ಟಿಗೆ ನೋಡಿಕೊಳ್ಳಬಹುದೋ, ಎಷ್ಟರಮಟ್ಟಿಗೆ ಅದರ ರಿಪೇರಿ ಮುಂತಾದ್ದನ್ನೆಲ್ಲಾ ನೋಡಿಕೊಳ್ಳಲು ನಮಗೆ ಶಕ್ತಿಯಿದೆಯೋ ಅದನ್ನು ನೋಡಿ ಅದಕ್ಕೆ ತಕ್ಕಂತೆ ಮನೆಯನ್ನು ಕಟ್ಟಬೇಕೆಂದು ಹೇಳುತ್ತಾರೆ. ಹೀಗೆ ನಾವು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗದ ದೊಡ್ಡ ಮನೆಯನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನೇಕರು ವಿಶಾಲವಾದ ಮನೆಗಳನ್ನು ಕಟ್ಟಿ ಅವುಗಳ ರಿಪೇರಿ ಇಲ್ಲದೆ ಹಾಳುಬಿದ್ದಿರುವುದನ್ನು ಅನೇಕ ಕಡೆ ನೋಡಿದ್ದೇವೆ. ಹೀಗೆ ಮನೆ ದೊಡ್ಡದಾದರೆ ಕಷ್ಟ. ಇದನ್ನರಿತೇ ನಮ್ಮ ಶ್ರೀಮಾನ್ ಚೆನ್ನಿಗರಾಮಯ್ಯನವರು ಅವರ ಮನೆಯನ್ನು ಅಡಕವಾಗಿ ಕಟ್ಟಿಕೊಂಡಿದ್ದಾರೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಹಾಗಾದರೆ ವಿಧಾನಸೌಧವನ್ನು ಬಿಟ್ಟುಬಿಡೋಣವೆ ?

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮನೆ ಬಹಳ ದೊಡ್ಡದಾದರೆ, ನಮ್ಮ ಶಕ್ತಿಯೆಲ್ಲಾ ರಿಪೇರಿ ಮಾಡುವುದರಲ್ಲೇ ಕುಂದಿಹೋಗುತ್ತದೆ. ಹೀಗೆ ರಾಜ್ಯವನ್ನು ವಿಶಾಲಮಾಡಿ, ಅದರಿಂದ ಜನರ ಸುಖಸಂಪತ್ತನ್ನೊದಗಿಸುವುದಕ್ಕೆ ಸಾಧ್ಯವಾಗದೆ ಪ್ರಜೆಗಳನ್ನು ಕಡಮೆ ದರ್ಜೆಗೆ ತರುವುದು ರಾಜನೀತಿಯಲ್ಲ. ಕೇಂದ್ರಕ್ಕೆ ನಮ್ಮ ಕೂಗು ಮುಟ್ಟುವುದಿಲ್ಲ, ಆ ಶಕ್ತಿ ನಮ್ಮಲ್ಲಿಲ್ಲ ; ಅದಕ್ಕಾಗಿ, ದೊಡ್ಡದು ಮಾಡಿಕೊಂಡು ಒಗ್ಗಟ್ಟಾಗಿ ಕೇಂದ್ರಕ್ಕೆ ನಮ್ಮ ಕೂಗನ್ನು ಮುಟ್ಟಿಸಿದರೆ, ನಮ್ಮ ಕೆಲಸ ಕಾರ್ಯಗಳು, ಕಾರ್ಯವಿಧಾನಗಳು ಚೆನ್ನಾಗಿ ಆಗುತ್ತವೆಂಬ ವಾದವನ್ನು ಕೆಲವರು ಮುಂದಿಡುತ್ತಾರೆ. ಈ ವಾದದಲ್ಲಿ ಲವಲೇಶವಾದರೂ ತಿರುಳಿಲ್ಲ. ಅಲ್ಲದೆ ಬಹುಸಂಖ್ಯೆಯವರ ಕೂಗಿಗೆ ಬೆಲೆಯಿರುತ್ತದೆ ಎಂದು ಹೇಳುವುದಾದರೆ, ನಮ್ಮ ದೇಶದಲ್ಲಿ ಮೆಜಾರಿಟಿ ಅಥವಾ ಬಹುಸಂಖ್ಯಾತ ಕೋಮುಗಳಿಗೇ ಎಲ್ಲಾ ಸೌಲಭ್ಯಗಳೂ ದೊರಕಬೇಕು, ಮೈನಾರಿಟಿ ಅಥವಾ ಅಲ್ಪಸಂಖ್ಯಾತರಿಗೆ ದೊರಕುವುದಿಲ್ಲ ಎಂಬ ವಾದವನ್ನು ಮುಂದಿಟ್ಟಹಾಗಾಗುತ್ತದೆ. ಆದುದರಿಂದ ಈಗ ಡೆಲ್ಲಿ ಸರ್ಕಾರದಲ್ಲಿ ನಮ್ಮ ಕೂಗು ಮುಟ್ಟುವುದಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ದುರ್ಯೋಧನನಿಗೆ ನೂರೊಂದು ಜನ ಮಕ್ಕಳಿದ್ದರು. . . .

ಒಬ್ಬ ಸದಸ್ಯರು.—ದುರ್ಯೋಧನನಿಗಲ್ಲ, ಧೃತರಾಷ್ಟ್ರನಿಗೆ. (ನಗು!)

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಧೃತರಾಷ್ಟ್ರನಿಗೆ ಕೌರವರು 101 ಜನ ಮಕ್ಕಳಿದ್ದರು; ಆದರೆ ಪಾಂಡವರು ಐದೇ ಮಂದಿ ಇದ್ದರು.

Mr. SPEAKER.—The House will now adjourn for lunch and meet again at 3-30.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸ್ವಾಮಿ, ಕೇಂದ್ರದಲ್ಲಿ ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆನ್ನುವ ವಾದ ಸಂಖ್ಯೆ ಮೇಲೆ ಪರಿಗಣಿತವಾಗಿಲ್ಲ; ಅದು ವ್ಯಕ್ತಿಯಮೇಲೆ ನಿಂತಿದೆ. ವ್ಯಕ್ತಿಗಳು ತಮ್ಮ ಪ್ರಾಬಲ್ಯ ಮತ್ತು ವಿಶೇಷವಾದ ಗುಣಗಳನ್ನೂ ವಿಶೇಷವಾದ ತಿಳಿವಳಿಕೆಯನ್ನೂ ಹೆಚ್ಚಿನ ಸಾಮರ್ಥ್ಯವನ್ನೂ ಪ್ರದರ್ಶಿಸಿ, ಕೇಂದ್ರದಲ್ಲಿ ಒಂದು ಸಾಮರ್ಥ್ಯವನ್ನು ಶಕ್ತಿಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಹೊರತು, ನಾನು ಆಗಲೇ ತಿಳಿಸಿದಹಾಗೆ, ಧೃತರಾಷ್ಟ್ರನ ಮಕ್ಕಳು 101 ಜನರಿದ್ದರು. ಪಾಂಡವರ ಮಕ್ಕಳು ಐದು ಜನರಿದ್ದರು. ಆದುದರಿಂದ ನಮ್ಮ ಚರಿತ್ರೆಯು ಯಾವುದರಮೇಲೆ ಅವಲಂಬಿಸಿದೆ, ಸಂಖ್ಯೆ ಮೇಲೆಯೋ ಅಥವಾ ಸತ್ಯ, ಧರ್ಮ ಪ್ರತಿಷ್ಠೆಗಳ ಮೇಲೆಯೋ ಎನ್ನತಕ್ಕಂಥಾದ್ದು ನಮಗೆ ಧರ್ಮ ಗ್ರಂಥಗಳಿಂದ ಗೊತ್ತಾಗಿದೆ. ಹೀಗಿದ್ದರೂ ಕೂಡ

ನಾವು ಸಂಖ್ಯಾಬಲದಿಂದ ಕೇಂದ್ರದಲ್ಲಿ ನಮ್ಮ ಆಗುಹೋಗುಗಳನ್ನು ರೂಪಿಸಿಕೊಳ್ಳುತ್ತೇವೆಂದು ಹೇಳಿದರೆ ಅದು ತಿರುಳಿಲ್ಲದ ವಾದ ಮತ್ತು ಭಾರತದ ಪ್ರತಿಷ್ಠೆಗೆ, ಭಾರತದ ಭದ್ರತೆಗೆ, ಭಾರತದ ಗೌರವಕ್ಕೆ ಅದು ಸಂಕುಚಿತ ಮನೋಭಾವದಿಂದ ಕೂಡಿದ ಒಂದು ವಾದ. ಆ ವಾದವನ್ನು ಪಾಶ್ಚಾತ್ಯರಾಷ್ಟ್ರದವರು ಯಾರಾದರೂ ಕೇಳಿದರೆ, ಭಾರತದ ಹೊರಗಡೆ ರಾಷ್ಟ್ರದವರು ಯಾರಾದರೂ ಕೇಳಿದರೆ ನಮಗೆ ಗೌರವ ಖಂಡಿತವಾಗಿ ಬರುವುದಿಲ್ಲ. ಆ ವಾದವನ್ನು ಬಿಡುವುದು ಉತ್ತಮವೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅದರಿಂದ ನಮಗೆ ಸಾಮರ್ಥ್ಯ ಬರುವುದಿಲ್ಲ. ದೇಶ ವಿಶಾಲವಾಗುವುದರಿಂದ ನಮ್ಮ ಆಗುಹೋಗುಗಳನ್ನು ಮತ್ತು ನಮ್ಮ ಪುರೋಭಿವೃದ್ಧಿಯನ್ನು ಹೆಚ್ಚುಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ವಾದದಲ್ಲಿಯೂ ಅಷ್ಟು ತಿರುಳಿಲ್ಲ. ಈಗ ನಾವು ಭಾರತದ ಹೊರಗಡೆಯ ಯಾವ ದೇಶವನ್ನು ತೆಗೆದುಕೊಂಡರೂ ಕೂಡ, ಪಾಶ್ಚಾತ್ಯ ರಾಷ್ಟ್ರಗಳನ್ನೂ ತೆಗೆದುಕೊಂಡರೂ ಕೂಡ ದೇಶ ವಿಶಾಲವಾಗಿದ್ದರೆ ಅದರಿಂದ ನಮ್ಮ ಸುಖ ಸಂಪತ್ತುಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದು ನಮಗೆ ಕಂಡುಬರುವುದಿಲ್ಲ. ಉದಾಹರಣೆಗೆ ಬೆಲ್ಜಿಯಂ ತೆಗೆದುಕೊಳ್ಳೋಣ. ಅದರ ವಿಸ್ತೀರ್ಣ 11,775 ಚದರ ಮೈಲಿಗಳು, ಜನಸಂಖ್ಯೆ 83,44,534; ಡೆನ್‌ಮಾರ್ಕ್ ವಿಸ್ತೀರ್ಣ-16,556 ಚದರ ಮೈಲಿಗಳು; ಜನಸಂಖ್ಯೆ—40,45,332; ಐರಿಷ್ ಫ್ರೀ ಸ್ಟೇಟ್—ವಿಸ್ತೀರ್ಣ—26,601 ಚದರ ಮೈಲಿಗಳು, ಪ್ರಜಾಸಂಖ್ಯೆ—29,53,432; ಕೈಗಾರಿಕೆಗಳಲ್ಲಿ ಅತ್ಯುತ್ತಮವಾದಂಥ ದೇಶವೆಂದು ಪ್ರಪಂಚದಲ್ಲಿ ಖ್ಯಾತಿಯನ್ನು ಪಡೆದಿರುವ ಸ್ವಿಟ್ಜರ್‌ಲೆಂಡ್ ತೆಗೆದುಕೊಳ್ಳೋಣ. ಅದರ ವಿಸ್ತೀರ್ಣ 15,949 ಚದರ ಮೈಲಿಗಳು, ಪ್ರಜಾಸಂಖ್ಯೆ—42,65,703: United States ತೆಗೆದುಕೊಂಡರೂ ಅವುಗಳಲ್ಲಿ ಯಾವ ಪ್ರಾಂತದಲ್ಲೂ ಕೂಡ 40 ಲಕ್ಷಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆ ಇಲ್ಲ. ಹಾಗೆಯೇ ನಮ್ಮ ಭಾರತದಲ್ಲಿ ಹೊಸದಾಗಿ ಆಗಿರತಕ್ಕಂಥ ಸ್ಟೇಟ್‌ಗಳನ್ನು ತೆಗೆದುಕೊಳ್ಳೋಣ ಅಥವಾ ಕೆಲವು ಹಳೆಯ ಪ್ರಾಂತ್ಯಗಳನ್ನು ತೆಗೆದುಕೊಳ್ಳೋಣ. ಉದಾಹರಣೆಗೆ:—ಸಿಂಧೂ ದೇಶ ವಿಸ್ತೀರ್ಣ 48,139 ಚದರ ಮೈಲಿಗಳು, ಪ್ರಜಾಸಂಖ್ಯೆ 45,35,000; ಅಸ್ಸಾಂ ವಿಸ್ತೀರ್ಣ 54,921 ಚದರ ಮೈಲಿಗಳು, ಜನಸಂಖ್ಯೆ 1,02,04,733; ಒರಿಸ್ಸಾ—32,198 ಚದರ ಮೈಲಿಗಳು, ಜನಸಂಖ್ಯೆ—87,27,544; ವಿಂಧ್ಯ ಪ್ರದೇಶ—ವಿಸ್ತೀರ್ಣ-24,600 ಚದರ ಮೈಲಿಗಳು, ಪ್ರಜಾಸಂಖ್ಯೆ—35,59,000; ರಾಜಾಸ್ಥಾನ-29,797 ಚದರ ಮೈಲಿಗಳು, ಪ್ರಜಾಸಂಖ್ಯೆ, 42,61,000, ಹೀಗಿದೆ. ಹೀಗೆ ನಾವು ಭಾರತದ ಅನೇಕ ಭಾಗಗಳನ್ನು ನೋಡಿಕೊಂಡು ಹೋದರೂ ಕೂಡ, ಭಾರತದ ಹೊರಗಿನ ಯಾವ ಪಾಶ್ಚಾತ್ಯ ರಾಷ್ಟ್ರಗಳನ್ನು ನೋಡಿದರೂ ಕೂಡ ಆಡಳಿತದ ಒಂದು ಚೌಕಟ್ಟನ್ನು ಒಂದು ಕೋಟಿಯೊಳಗೆ ಏರ್ಪಾಡು ಮಾಡಿಕೊಂಡಿದ್ದಾರೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ಇಟ್ಟುಕೊಂಡಿಲ್ಲ.

A MEMBER.—What about United Provinces ?

ಶ್ರೀ ಟಿ. ಎನ್. ಮುಡಲಗಿರಿಗೌಡ.—United Provinces ಒಂದರಿಂದಲೇ ಎಲ್ಲಾ ಉದಾಹರಣೆಗಳನ್ನು ತೆಗೆದುಕೊಳ್ಳುವ ಹಾಗಿಲ್ಲ.

ಹೀಗೆ ಆಡಳಿತ ಸುಗಮವಾಗಿ ಜನಗಳು ಸುಖಸಾಧನೆಗಳನ್ನು ಸಾಧಿಸತಕ್ಕಂಥ ಮಾರ್ಗದಲ್ಲಿ ಇರಬೇಕಾದರೆ ಒಂದು ನಿಗದಿಯಾದಂಥ, ನಿರ್ದಿಷ್ಟವಾದಂಥ ಚೌಕಟ್ಟು ಇದ್ದರೆ ಮಾತ್ರವೇ ಜನಗಳ ಸುಖಸಂಪತ್ತುಗಳನ್ನು ಸಾಧಿಸುವುದಕ್ಕೆ ಸಾಧ್ಯವಿದೆಯೇ ಹೊರತು unwieldy ಆಗಿದ್ದರೆ ವಿಪರೀತವಾದ ದೇಶವನ್ನು ಏರ್ಪಾಡುಮಾಡಿಕೊಂಡರೆ ಜನಗಳ ಸುಖಸಂಪತ್ತುಗಳ ಸಾಧನೆಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ. ಅದರಿಂದ ನಾವು ಏನು ಸಾಧಿಸುತ್ತೇವೆ ಎಂದು—ಹೇಳುತ್ತೇವೋ—ಅದು ಕನಸಾಗುತ್ತದೆ; ಇದರಲ್ಲಿ ಅರ್ಥವಿಲ್ಲ, ತಿರುಳಿಲ್ಲ ಎಂದು ಹೇಳಬೇಕಾಗಿದೆ. ಒಂದು ಸ್ಟೇಟ್‌ಗೆ ಸಂಬಂಧಪಟ್ಟಂತೆ ಬೊಂಬಾಯಿ ಪ್ರಾಂತದಲ್ಲಾಗಲಿ ಅಥವಾ ಮದ್ರಾಸ್ ಪ್ರಾಂತದಲ್ಲಾಗಲಿ ಇರತಕ್ಕಂಥಹ ಸ್ಟೇಟ್ ಆಫೀಸರ್ರು ಅಥವಾ ಜಿಲ್ಲಾಧಿಕಾರಿಗಳು ಅಥವಾ ಕಲೆಕ್ಟರಿಗೂ ಮತ್ತೆ ಜನಗಳಿಗೂ ನಿಕಟ ಸಂಪರ್ಕವಿರುವುದಿಲ್ಲ. ನಾನು ಇರತಕ್ಕ ಜಿಲ್ಲೆ ಮತ್ತು ಮದರಾಸ್‌ಜಿಲ್ಲೆಯು ಹತ್ತಿರ ಹತ್ತಿರ. ಯಾವುದೋ ಒಂದು ಸಂದರ್ಭದಲ್ಲಿ ನಾನು ಮದ್ರಾಸ್ ಜಿಲ್ಲೆಯ ಒಂದು ಹಳ್ಳಿಗೆ ಹೋಗಿ ವಿಚಾರಿಸಿದಾಗ ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಎಂದು ನಾವು ಇಲ್ಲಿ ಏನು ಹೇಳುತ್ತೇವೋ. ಅವರು ಇಲ್ಲಿನ ಜಿಲ್ಲಾಧಿಕಾರಿಗೆ ಸಮಾನ ಎಂಬುದು ಗೊತ್ತಾಯಿತು. ಆ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೋಡಿದರೆ ಹಳ್ಳಿಯವರು ಜಿಲ್ಲಾಧಿಕಾರಿಗಳಿಗೆ ಎಷ್ಟು ಗೌರವವನ್ನು ಸಲ್ಲಿಸಬೇಕೋ ಎಷ್ಟು ಭಯ ಭ್ರಾಂತಿಗಳನ್ನು ಇಟ್ಟುಕೊಂಡಿರಬೇಕೋ ಅಷ್ಟೊಂದು ವಿಧವಾದಂಥ ಗೌರವವನ್ನು ಕೂಡ ಅವರು ಇಟ್ಟುಕೊಂಡಿದ್ದಾರೆ ಎಂದರೆ ಆ ಕಲೆಕ್ಟರುಗಳು ಯಾರು, ಅವರಿಂದ ಏನು ಕಾರ್ಯಸಾಧನೆಯಾಗುತ್ತದೆ, ಏನು ಸುಖಸಂಪತ್ತು ದೊರೆಯುತ್ತದೆ ಎಂಬುದು ಅವರಿಗೆ ಅರಿವೇ ಇರುವುದಿಲ್ಲ, ಗೊತ್ತೇ ಇರುವುದಿಲ್ಲ. ಆದರೆ ನಮ್ಮ ಸ್ಟೇಟ್‌ನಲ್ಲಿ ಒಬ್ಬ ಮಂತ್ರಿಯನ್ನೋ, ಒಬ್ಬ ಜಿಲ್ಲಾಧಿಕಾರಿಯನ್ನೋ, ಅಥವಾ ಒಬ್ಬ State officerನ್ನೋ ಮೈಸೂರು ಸಂಸ್ಥಾನದ ಯಾವ ಪ್ರಜೆ ಆಗಲಿ ಎಷ್ಟು ಸುಲಭವಾಗಿ approach ಮಾಡಬಹುದು, ಎಷ್ಟು ಸುಲಭವಾಗಿ ತನ್ನ ಕೆಲಸ ಕಾರ್ಯಗಳನ್ನು ನೆರವೇರಿಸಿ ಕೊಳ್ಳುವುದಕ್ಕೆ ಸಾಧ್ಯವಿದೆ, ಎಷ್ಟು ಸುಲಭವಾಗಿ ತಾನು ತನ್ನ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾವು ಬೆಳಗ್ಗೆ ಎದ್ದರೆ ನಮ್ಮ ಜನಗಳಿಂದ ನೋಡುತ್ತಿದ್ದೇವೆ. ಹಾಗೆ ನಮ್ಮ ಜನಗಳಿಗೆ ಹೆಚ್ಚಿನ ಒಂದು ಸೌಲಭ್ಯ ದೊರೆಯಬಾರದು, ನಮ್ಮ ಜನಗಳು ಸರ್ಕಾರದಿಂದ ದೂರ ಇರಬೇಕು, ಅವರಿಗೆ ಅದರ ಸಂಪರ್ಕ ಸ್ವಲ್ಪ ದೂರವಿರಬೇಕು, ಸರ್ಕಾರದ ಸಂಪರ್ಕ ಹತ್ತಿರ ಆಗುವುದರಲ್ಲಿ ರೈತರ ಗೊಂದಲ ಜಾಸ್ತಿಯಾಗುತ್ತದೆ ಎಂಬುದು ನಮ್ಮಲ್ಲಿ ಮೂಡುವುದಾದರೆ ಆಗ ದೊಡ್ಡದೊಡ್ಡ ಜಿಲ್ಲೆಗಳನ್ನು ಮಾಡಿ ದೊಡ್ಡದೊಡ್ಡ ಪ್ರಾಂತವನ್ನು ಮಾಡಿ ಜನರಿಂದ ಸರ್ಕಾರ ದೂರ ಇರುವುದಕ್ಕೆ ಮಾತ್ರ ಸಾಧ್ಯವಿದೆ. ಆಗ ಅಧಿಕಾರಿಗಳ ಸಂಪರ್ಕ, ಸರ್ಕಾರದ ಸಂಪರ್ಕ ಹೆಚ್ಚಾಗಿರುವುದಿಲ್ಲ. ಅವರು ಕಾಡು ಜನಗಳ ಹಾಗೆ ಜೀವಿಸಬೇಕಾದಂಥ ಪರಿಸ್ಥಿತಿ ಬಂದರೂ ಬರಬಹುದು. ನಾಗರಿಕತೆ ಮತ್ತು ತನ್ನ ಮೇಲ್ಮೆಯನ್ನು ರೂಢಿಸಿಕೊಳ್ಳತಕ್ಕಂಥ ಅವಕಾಶಗಳು ಹೆಚ್ಚುಹೆಚ್ಚಾಗಿ ಬೆಳೆಯುವುದು ದೂರವಾಗಿ ನಮ್ಮ ಜನಗಳಿಗೆ ಒಂದು ಕಷ್ಟ ಕಾರ್ಪಣ್ಯಗಳು ಒದಗಬಹುದು ಎಂದು ನನಗೆ ಭಾಸವಾಗುತ್ತದೆ. ಆದುದರಿಂದಲೇ ನಮ್ಮ ದೇಶದ ಆಡಳಿತವನ್ನು ನಡೆಸಿದ ಯಾವ ಪ್ರಮುಖರೂ ಕೂಡ ದೇಶ ದೊಡ್ಡದಾಗುವುದಕ್ಕೆ ಅಥವಾ ವಿಪರೀತವಾಗಿ ಒಂದು ವಿಸ್ತಾರವಾದ

(ಟಿ. ಎಚ್. ಮೂಡಲಗಿರಿಗೌಡ.)

ದೇಶವನ್ನಾಗಿ ಮಾಡುವುದಕ್ಕೆ ಇಷ್ಟಪಡುತ್ತಾ ಇಲ್ಲ. ದೇಶ ದೊಡ್ಡದಾದರೆ ನಮ್ಮ ಜನಗಳಿಗೆ ಹೆಚ್ಚು ತೊಂದರೆ ಒದಗುತ್ತದೆ ಎಂಬುದು ಗೊತ್ತಾದಂಥ ವಿಷಯ. ಮೈಸೂರಿನಲ್ಲಿ ·9 ಮತ್ತು ಹೈದರಾಬಾದ್, ಬೊಂಬಾಯಿ ಕರ್ಣಾಟಕಗಳಲ್ಲಿ 2·0 ಭೂಮಿ ಇದೆ. ನಾವು ಬೆಳಗ್ಗೆ ಎದ್ದರೆ ಸಂಜೆಯವರೆಗೂ ನಮ್ಮ ಸರ್ಕಾರದವರಲ್ಲಿ ಭೂಮಿಯನ್ನು ಕೊಡಿ, ಕೊಡಿ ಎಂದು ಕೇಳಿದರೆ, ಭೂಮಿ ಕೊಡುವುದಿಲ್ಲ ಭೂಮಿ ಇಲ್ಲವೆಂದು ಹೇಳುತ್ತಾರೆ. ನಮ್ಮಲ್ಲಿಯೂ ಸಹ ವಿಶೇಷ ಭೂಮಿ ಇದೆ. ಭೂ ಸಂಪತ್ತು ಬೇಕಾದಷ್ಟು ದೊರೆಯುತ್ತದೆ. ಭೂಮಿ ಇರುವಕಡೆ ಹೋಗುವ ಸ್ವಭಾವ ನಮ್ಮಲ್ಲಿ ಮೊದಲಿನಿಂದಲೂ, ಬೆಳೆದು ಬಂದಿಲ್ಲ. ನಮ್ಮ ಭಾರತದಲ್ಲಿ ಬೊಂಬಾಯಿ ಕರ್ಣಾಟಕದಲ್ಲಾಗಲಿ ಹೈದರಾಬಾದು ಕರ್ಣಾಟಕದಲ್ಲಾಗಲಿ ಭೂ ಸಂಪತ್ತು ಬೇಕಾದಷ್ಟು ಹೆಚ್ಚಾಗಿದ್ದರೆ, ಇಂದು ಅಲ್ಲಿಗೆ ಹೋಗಿ ವ್ಯವಸಾಯ ಮಾಡುವುದಕ್ಕೆ ಯಾವ ಪ್ರಜೆಗಾದರೂ ಹಕ್ಕಿಲ್ಲವೆಂದು ಯಾರು ತಾನೆ ಹೇಳಿದ್ದಾರೆ? ಆದರೆ ನಮ್ಮ ಜನರಲ್ಲಿ ಒಂದು ವಿಶೇಷವಿದೆ. ಪಕ್ಕದ ತಾಲ್ಲೂಕಿನಲ್ಲಿ ಬೇಕಾದಷ್ಟು ಜಮೀನಿದೆ, ಹೋಗಿ, ಬೇಕಾದಷ್ಟು ಜಮೀನು ಕೊಡುತ್ತೇವೆಂದು ಹೇಳಿದರೂ ಹೋಗತಕ್ಕ ಸ್ವಭಾವ ನಮ್ಮ ಜನರಿಗೆ ಬಂದಿಲ್ಲ. ಅವರು adventurous ಅಲ್ಲವೆಂದಾದರೂ ತಿಳಿದು ಕೊಳ್ಳಬಹುದು. ಅಂತೂ ಅದು ನಮ್ಮಲ್ಲಿ ಬೆಳೆದು ಬಂದಿರತಕ್ಕ ಸಂಪ್ರದಾಯ. ಪಕ್ಕದ ಮನೆಯಲ್ಲಿರುವವರಾಗಲಿ, ನೂರಾರು ವರ್ಷಗಳಿಂದ ಬೆಳೆದು ಬಂದಿರತಕ್ಕ ಸಂಬಂಧವನ್ನು ಬಿಟ್ಟುಹೋಗುವುದಕ್ಕೆ, ಬೇರೆ ಕಡೆ ನೆಲೆಸುವುದಕ್ಕೆ ಇಷ್ಟವಿಲ್ಲ. ಇಲ್ಲಿಯೇ ಎಷ್ಟೇ ಕಾರ್ಪಣ್ಯಗಳಿಂದ ತೊಳಲುತ್ತಿದ್ದರೂ. . . .

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಕೂಪ ಮಂಡೂಕ !

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಾನು ಬೇಕಾದರೆ ಶ್ರೀಮಾನ್ ಚಿಕ್ಕಲಿಂಗಯ್ಯನವರಿಗೆ ಸರಿಯಾಗಿ ಉತ್ತರಕೊಡಬಲ್ಲೆ. ನಮ್ಮ ಊರಿನ ಪಕ್ಕದಲ್ಲೇ 2,000 ಎಕರೆ ಜಮೀನುಗಳನ್ನು release ಮಾಡಿ ನಮ್ಮ ನಿಮ್ಮ ಪಂಗಡದವರಿಗೆ 1,000 ಎಕರೆಗಳನ್ನು ಕೊಟ್ಟಿರುತ್ತಾರೆ. ಮುನ್ನೂರು ನಾನ್ನೂರು ಸಂಸಾರಗಳವರಿಗೆ, ಅಲ್ಲಿಯೇ ನೆಲೆಸುತ್ತೇವೆಂದವರಿಗೆ, ಬರೆಸಿಕೊಂಡು ಜಮೀನು ಕೊಟ್ಟರು. ಬಹಳ ಕಷ್ಟಪಟ್ಟಿದ್ದರ ಮೇಲೆ 70 ಮನೆಗಳವರು ಸಂಸಾರ ಕಟ್ಟಿಕೊಂಡು ಬಂದರು. ಆದರೆ ಈ ಹೊತ್ತು ನೋಡಿದರೆ ಏಳು ಮನೆಗಳು ಕೂಡ ಅಲ್ಲಿಲ್ಲ. ಇದರಿಂದೇನು ತೋರುತ್ತದೆ? ನಮ್ಮಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ಬೇಕಾದಷ್ಟು ಜಮೀನಿದೆ, ಬನ್ನಿ ಬನ್ನಿ, 10 ಎಕರೆಯಲ್ಲ 20 ಎಕರೆಯಾದರೂ ಉದಾರವಾಗಿ ಕೊಡುತ್ತೇವೆ ಎಂದು ಮಾನ್ಯ ಶ್ರೀಮಾನ್ ಮಂಜಪ್ಪನವರು ಕರೆಯುತ್ತಿದ್ದಾರೆ. ಇಷ್ಟಾದರೂ ಮೈಸೂರು ಸಂಸ್ಥಾನದಲ್ಲಿ ಭೂಮಿ ಸಿಕ್ಕುತ್ತದೆಂದು ಹೇಳಿ ಒಬ್ಬರಾದರೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆಹೋಗಿದ್ದಾರೆಯೇ? ಇದು ನಮ್ಮ ಸಂಪ್ರದಾಯ. ನೀವು ಹೇಳುವ ಸ್ವಭಾವ ನಮ್ಮ ಜನರಿಗಿದ್ದರೆ, ಇಂದು ನಮ್ಮ ದೇಶದ ಟೀ ತೋಟಗಳಿಗೆ, ಕಾಫಿ ತೋಟಗಳಿಗೆ ಹೊರದೇಶಗಳಿಂದ ಯೂರೋಪಿಯನ್ನರು ಬಂದು ಆಕ್ರಮಿಸಿಕೊಳ್ಳುತ್ತಿದ್ದರೇ? ಆದ್ದರಿಂದ ಏನಿದ್ದರೂ, ಹೆಚ್ಚು ಹಣವಿರುವವರು ಹೋಗಿ ನೆಲಸಬಹುದೇ ಹೊರತು ಸಾಮಾನ್ಯಜನಕೆ ವಲಸೆ ಹೋಗುವ ನಿದರ್ಶನಗಳು ಕಂಡುಬಂದಿಲ್ಲ. ಆದ್ದರಿಂದ ವಿಶೇಷವಾಗಿ ಭೂಮಿ ಇದೆಯೆಂದರೂ ಬಹಳ ಶೀಘ್ರಫಲ ಬರುತ್ತದೆಯೇ, ಪ್ರಯೋಜನವಾಗುತ್ತದೆಯೇ, ಯೋಚಿಸಿ ನೋಡಬೇಕು. ಕನ್ನಡ ಮಾತನಾಡತಕ್ಕಂಥ ನಮ್ಮ ಸಹೋದರರ, ನಮ್ಮ ಸ್ವಬಂಧುಗಳ, ನಮ್ಮ ಮನೆತನಕ್ಕೆ ಸೇರಿದವರ ವಿಷಯದಲ್ಲಿ ನಮಗೆ ಸಂಪೂರ್ಣವಾದ ಕನಿಕರವಿದೆ. ಅವರ ಕಷ್ಟಸುಖಗಳಿಗೆ ಇತರರು ಎಷ್ಟು ಬಾಧ್ಯರೋ ಅದಕ್ಕಿಂತ ಹೆಚ್ಚು ಬಾಧ್ಯರು ನಾವು. ಆದರೂ, ನಾನು ಒಂದುವೇಳೆ ಅವರ ಕಷ್ಟ ಕಾರ್ಪಣ್ಯಗಳಿಗೆ ಒಪ್ಪುವುದಾದರೂ ನಮ್ಮ ಹೆಂಡತಿ ಮಕ್ಕಳು ಒಪ್ಪುತ್ತಾರೆಂದು ಹೇಗೆ ಭಾವಿಸೋಣ? ನಾವು ಒಪ್ಪಬಹುದು. ಆದರೆ, ಇದರ ಜವಾಬ್ದಾರಿಯನ್ನು, ಇದರ ಕಷ್ಟಸುಖಗಳನ್ನು ಮುಂದೆ ಹೊರಬೇಕಾದ ಅವರು ಒಪ್ಪಬೇಕು. ನಮ್ಮ ಸ್ವಭಾವ, ಸಂಪ್ರದಾಯ ಹೀಗಿರುವಾಗ ಅಷ್ಟು ಸುಲಭವಾಗಿ ಈ ಸಂಪ್ರದಾಯ ಮನೋಭಾವನೆಗಳನ್ನು ಬದಲಾಯಿಸುವುದಕ್ಕೆ ಸಾಧ್ಯವೆ? ಅಲ್ಲಿ ಖನಿಜ ಸಂಪತ್ತು ವಿಶೇಷವಾಗಿದೆಯೆಂದು ಹೇಳಿದ್ದಾರೆ. ಎಷ್ಟೇ ಖನಿಜ ಸಂಪತ್ತಿದ್ದರೂ ನಮಗೆಷ್ಟು ಬರುತ್ತದೆಯೋ ಅಷ್ಟೇ ಬರುತ್ತದೆ. ಅದಕ್ಕಿಂತ ಹೆಚ್ಚಿಗೆ ಬರುವುದೆಲ್ಲಾ ಇಂಡಿಯಾ ಸರ್ಕಾರದವರಿಗೆ ಹೋಗುತ್ತದೆ.

ಒಬ್ಬ ಸದಸ್ಯರು.—ಅದೂ ನಮ್ಮ ಸರ್ಕಾರ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಿದ್ದರೆ, ವಿಶಾಲ ಕರ್ಣಾಟಕವನ್ನು ಮಾಡಿದರೆ ಮಾತ್ರ ಬರುತ್ತದೆ, ಇಲ್ಲದಿದ್ದರೆ ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಎಷ್ಟು ಸಂಪತ್ತು ದೊರೆಯುತ್ತದೆಂದು ಹೇಳುತ್ತೇವೆಯೋ ಅದಕ್ಕೆ ಸರಿಯಾಗಿ ಖರ್ಚು ಮಾಡುವ ಜವಾಬ್ದಾರಿಯನ್ನೂ ಹೊರಬೇಕಾಗುತ್ತದೆ.

ಆದ್ದರಿಂದ ಇವೆಲ್ಲಾ ಮುಖ್ಯವಲ್ಲ. ನಾನು ಮೊದಲೇ ಹೇಳಿದಹಾಗೆ, ಆಸ್ಪತ್ರೆಗಳ ಸಂಖ್ಯೆ ರಸ್ತೆಗಳ ಸಂಖ್ಯೆ, ಪಾಠಶಾಲೆಗಳ ಸಂಖ್ಯೆ ಇವು ಮುಖ್ಯವಲ್ಲ. ಒಂದು ತಾಲ್ಲೂಕಿನಲ್ಲಿ ಕಡಮೆಯಿರಬಹುದು, ಇನ್ನೊಂದು ತಾಲ್ಲೂಕಿನಲ್ಲಿ ಹೆಚ್ಚಿಗೆಯಿರಬಹುದು. ಏನಿದ್ದರೂ ನಾವು ಇಲ್ಲಿ 155ನೆಯ ಪುಟದಲ್ಲಿ ಕೊಟ್ಟಿರುವ ಲೇಣಿ ದೇಣಿಗಳ ಕಡೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಯೋಚಿಸಬೇಕಾಗಿದೆ.

ಹೀಗೆ ಈ ವಿಷಯವನ್ನು ಯೋಚಿಸುವಾಗ, ಭಾರತ ಸರ್ಕಾರದವರು, ಈ ರೀತಿ ಮೈಸೂರಿನವರು ಮೈಸೂರು ಮೈಸೂರಿನ ಹಾಗೆಯೇ ಇರಬೇಕೆಂದು ಹೇಳದರೆ, ಕೊಡಗಿನವರು, ಕೊಡಗಿನ ಹಾಗೆಯೇ ಇರಬೇಕೆಂದು ಹೇಳಿದರೆ, ಆಡಳಿತ ದೃಷ್ಟಿಯಿಂದ ಅವರು ಯಾವ ಯೋಜನೆಯನ್ನು ಮಾಡುತ್ತಾರೆಂಬುದನ್ನು ನೋಡಬೇಕಾಗಿದೆ. ಕೊಡಗು ಕೊಡಗಿನ ಹಾಗೆಯೇ ಉಳಿದು ಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಹೇಳಿದರೆ, ಮೈಸೂರು ಮೈಸೂರಿನ ಹಾಗೆಯೇ ಉಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಅವರು ಸೇರುವುದಿಲ್ಲವೆಂದು ಹೇಳಿದರೂ ಕೂಡ ಸೇರಿಸಬೇಕಾದಂಥ ಸಂದರ್ಭ ಒದಗುತ್ತದೆ. ಹೀಗೆ ಹೇಳುವಾಗ ಮೈಸೂರಿನವರಾದ ನಮಗೆ ಬರೀ ಕನ್ನಡ ಮಾತನಾಡತಕ್ಕಂಥವರೆಂದು, ಭಾಷೆಯ ಮೇಲೆ ಪ್ರಾಂತ್ಯ ವಿಂಗಡಣೆ ಮಾಡತಕ್ಕದ್ದು ಸರಿಯೇ ಎಂದು ಯೋಚನೆ ಮಾಡಬೇಕು. ಏಕೆಂದರೆ, ಮೊದಲಿನಿಂದಲೂ ನಮಗೆ ಭಾಷೆಯ ವಿಷಯದಲ್ಲಿ ಗೌರವವಿದ್ದರೂ ಕೂಡ, ಮೈಸೂರಿನಲ್ಲಿರತಕ್ಕ ಎಲ್ಲ ಪ್ರಜೆಗಳ ಯೋಗಕ್ಷೇಮವನ್ನೂ ಕೂಡ ನೋಡುತ್ತಿದ್ದೇವೆಯೇ ಹೊರತು, ಅವನು ತೆಲುಗನ್ನು ಮಾತನಾಡತಕ್ಕವನು ಎಂದು ಆತನ ಸೌಲಭ್ಯವನ್ನು ಕಡಮೆಮಾಡಿ, ಇವನು ತಮಿಳು ಮಾತನಾಡತಕ್ಕವನು ಎಂದು ಇವನ ಸೌಲಭ್ಯಗಳನ್ನು ಕಡಮೆ ಮಾಡಿ ಎಂದು ಹೇಳಿ ಸಂಕುಚಿತ ಭಾವನೆಯನ್ನು ಎಂದೂ ತೋರ್ಪಡಿಸಿಲ್ಲ. ಆದ್ದರಿಂದ ಭಾಷೆಯ

ಭ್ರಾಂತಿಯಿಂದ ನಾವು ಪ್ರಾಂತ್ಯ ವಿಂಗಡಣೆಗೆ ಹೋಗತಕ್ಕದ್ದು ಸರಿಯಲ್ಲ. ಆಂಧ್ರರೇ ಆಗಲಿ, ತಮಿಳರೇ ಆಗಲಿ ಎಲ್ಲರೂ ಭಾರತೀಯರೇ. ಭಾರತದ ಗೌರವ ಪ್ರತಿಷ್ಠೆಗಳ ಕಡೆ ನಮ್ಮೆಲ್ಲರ ದೃಷ್ಟಿಯಿರಬೇಕೇ ಹೊರತು ಬರೀ ಭಾಷೆಯ ಕಡೆ ನಮ್ಮ ದೃಷ್ಟಿ ಹರಿಸಕೂಡದು. ಆದ್ದರಿಂದ ಪುನರ್ವಿಂಗಡಣಾ ಸಮಿತಿ ಯಾವ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದಕ್ಕಿಂತಲೂ, ಎಷ್ಟು ಪ್ರದೇಶವನ್ನು ಸೇರಿಸಬೇಕು, ಎಷ್ಟು ಪ್ರಮಾಣದ ಪ್ರಾಂತ್ಯವನ್ನು ವಿಂಗಡಣೆ ಮಾಡಿದರೆ ಆಡಳಿತ ಸುಗಮವಾಗಿ ಆಗಬಲ್ಲದು ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ಅಭಿಪ್ರಾಯವೂ ಕೂಡ ಅದೇ ರೀತಿ ಇರಬೇಕು. ಅದು ಬಿಟ್ಟು ಭಾಷೆಗೆ ಸೋಗೊಟ್ಟು ಸಂಕುಚಿತ ಭಾವನೆಯವರು ಮೈಸೂರಿನವರು ಎಂಬ ಅಪಕೀರ್ತಿಯನ್ನು ನಾವು ಹೊರಬಾರದು. ನಮ್ಮ ಮುಖ್ಯಮಂತ್ರಿಗಳಾದರೋ ಇಡೀ ಭಾರತದಲ್ಲಿ ಅವರಿಗೆ ವಿಶೇಷವಾದ ಗೌರವವಿದೆ. ಅವರ ಅಭಿಪ್ರಾಯಗಳೂ ಕೂಡ ಭಾರತದ ಭದ್ರತೆಗೆ, ಭಾರತದ ಪ್ರತಿಷ್ಠೆಗಳಿಗೆ ಅನುಗುಣವಾಗಿರಬೇಕೇ ಹೊರತು ಸಂಕುಚಿತವಾಗಿರಬಾರದು ಎಂಬ ವಿಷಯವನ್ನೂ ಕೂಡ ನಾನು ಅವರಿಗೆ ಸೂಚನೆ ಕೊಟ್ಟು, ಪ್ರಾಂತ್ಯ ನಿರ್ಮಾಣ ಮಾಡುವಾಗ ಅತಿ ವಿಶಾಲವಾಗಿ, ಅಗಾಧವಾಗಿ, ಆಡಳಿತಕ್ಕೆ ಮೀರಿದಂತಹ ಒಂದು ಪ್ರಾಂತವನ್ನು ನಿರ್ಮಾಣ ಮಾಡುವುದಕ್ಕಿಂತಲೂ, ಆಡಳಿತಕ್ಕೆ ಸುಗಮವಾದ, ಕ್ಷೇಮಕರವಾದ ಪ್ರಾಂತ್ಯ ನಿರ್ಮಾಣವನ್ನು ಮಾಡಿ ಮೈಸೂರಿನ ಪ್ರತಿಷ್ಠೆ ಮತ್ತು ಗೌರವಗಳನ್ನು ಉಳಿಸಿಕೊಂಡು ಬರಬೇಕೇ ಹೊರತು, ಅದನ್ನು ಅಳಿಸುವ ಪ್ರಾಂತ್ಯ ನಿರ್ಮಾಣವಾಗಬಾರದು ಎಂದು ಒತ್ತಿ ಒತ್ತಿ ಹೇಳಿ, ಮಾನ್ಯ ಸಭೆಯವರೆಲ್ಲರೂ ಕೂಡ, ನಮ್ಮ ಹಿರಿಯರು ಮೈಸೂರಿಗಾಗಿ ದುಡಿದು ಗೌರವವನ್ನು ತೋರಿಸಿ ಇಡೀ ಭಾರತದಲ್ಲಿ ಇಡೀ ಪ್ರಪಂಚದಲ್ಲಿ ಇಂದಿನವರೆಗೆ ಮೈಸೂರನ್ನು ಹೇಗೆ ಗೌರವ ಪ್ರತಿಷ್ಠೆಗಳಿಂದ ಬೆಳಗಿಸಿದ್ದಾರೋ ಆ ಬೆಳಕನ್ನು ತಾವು ಉಳಿಸಿಕೊಂಡು ಬರಬೇಕು, ಆ ಗೌರವವನು ಉಳಿಸಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಜೈ ಹಿಂದ್.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಈ ಸಮಸ್ಯೆ ಬಹಳ ಪ್ರಾಮುಖ್ಯವಾದದ್ದು. ಈ ವಿಚಾರದಲ್ಲಿ ನಮ್ಮ ಸ್ನೇಹಿತರು ಕೆಲವು ಅಂಕಿ ಅಂಶಗಳೊಡನೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈಗತಾನೆ ಭಾಷಣ ಮಾಡಿದ ಶ್ರೀಮಾನ್ ಮೂಡಲಗಿರಿಗೌಡರು ತಮ್ಮ ಅಭಿಪ್ರಾಯವನ್ನು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ.

ಅಂತೂ, ಇದು ಬಹಳ ಮುಖ್ಯವಾದ ಪ್ರಶ್ನೆ. ಯಾರೇ ಆದರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ಮತ್ತೊಬ್ಬರು ಅದನ್ನು ಟೀಕೆ ಮಾಡುವುದು ಸೂಕ್ತವಲ್ಲ. ಪ್ರತಿಯೊಬ್ಬ ಸದಸ್ಯರೂ ತಮ್ಮ ಜವಾಬ್ದಾರಿಯನ್ನರಿತು ತಮ್ಮ ಅಭಿಪ್ರಾಯವನ್ನು ಪರವಾಗಿಯಾಗಲಿ ವಿರೋಧವಾಗಿಯಾಗಲಿ ಹೇಳುತ್ತಾರೆ. ಶ್ರೀಮಾನ್ ನರಸಿಂಹರೆಡ್ಡಿಯವರು ಹೇಳಿರುವ ರೀತಿಯಲ್ಲಿ, ಯಾರಾದರೂ ತಪ್ಪು ಹೇಳಿದರೆ ಸರಿಮಾಡತಕ್ಕದ್ದು ನಮ್ಮ ಕರ್ತವ್ಯ. ಅಷ್ಟನ್ನು ಯಾರೂ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ಪರವಾಗಿಯೇ ಮಾತನಾಡಲಿ ಅಥವಾ ವ್ಯತಿರಿಕ್ತವಾಗಿಯೇ ಮಾತನಾಡಲಿ, ಎಲ್ಲರೂ ದೇಶಭಕ್ತರೇ; ಎಲ್ಲರಲ್ಲೂ ದೇಶಾಭಿಮಾನವಿದೆ. ಮೈಸೂರು ದೇಶದ ವೈಶಿಷ್ಟ್ಯವನ್ನು ಎತ್ತಿ ಹಿಡಿಯಬೇಕೆಂದು ಏನೋ ಶ್ರೀಮಾನ್ ಮೂಡಲಗಿರಿಗೌಡರು ಹೇಳಿದರು. ಆದರೆ ಅವರು ಸರಿಯಾಗಿ ಆ ವೈಶಿಷ್ಟ್ಯವೇನೆಂಬುದನ್ನು ತಿಳಿಸಿಲ್ಲ. ಆದರೂ ದೇಶದ ಮಾನ್ಯತೆಯನ್ನು, ಗೌರವವನ್ನು ಉಳಿಸಿಕೊಳ್ಳಬೇಕು, ಅದನ್ನು ಹೆಚ್ಚಿಸಬೇಕು ಎಂಬ ದೇಶಾಭಿಮಾನ ಎಲ್ಲರಿಗೂ ಇದೆ. ಪರವಾಗಿಯೇ ಮಾತನಾಡಲಿ, ವ್ಯತಿರಿಕ್ತವಾಗಿಯೇ ಮಾತನಾಡಲಿ ನಮ್ಮ ನಮ್ಮಲ್ಲಿ ಅಭಿಪ್ರಾಯ ವ್ಯತ್ಯಾಸವಿರಬಹುದು ಅಷ್ಟೆ. ಆದ್ದರಿಂದ ವ್ಯತಿರಿಕ್ತವಾಗಿ ಮಾತನಾಡಿದ್ದರಿಂದಲೇ ದೇಶದ್ರೋಹ ಮಾಡುತ್ತಿದ್ದಾರೆಂದು ಹೇಳಕೂಡದು. ನಮ್ಮ ನಮ್ಮ ದೃಷ್ಟಿಕೋಣದಿಂದ ಹೇಳುವಾಗ ಯಾರೂ ತಪ್ಪು ಭಾವನೆಯನ್ನು ಸೂಚಿಸಬಾರದು.

ಈಗ ನಮ್ಮ ಮೈಸೂರು ದೇಶದ ಪ್ರಜೆಗಳೇ ಆಗಲಿ, ಸದಸ್ಯರುಗಳೇ ಆಗಲಿ ನಮ್ಮ ದೇಶವನ್ನು ವಿಸ್ತರೀಕರಣ ಮಾಡಬೇಕು, ಅಕ್ಕಪಕ್ಕದ ಪ್ರದೇಶಗಳನ್ನು ಸೇರಿಸಿಕೊಡಬೇಕು ಎಂದು ಯಾರನ್ನೂ ಕೇಳಿಕೊಂಡಿಲ್ಲ.

4 P. M.

ಈಗ ಅಂಥ ಒಂದು ಸನ್ನಿವೇಶ ಬಂದಿದೆ. ಈ ಹಿಂದೆ ಆಗಲೇ ಈ ಸಂಬಂಧವಾಗಿ ನಮ್ಮ ಕಾಂಗ್ರೆಸ್ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ಸೇರಿಸಿ—ಆ ಸಮ್ಮೇಳನ ಕಾಲದಲ್ಲಿ ನಿಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರು ನಿಮ್ಮ ದೇಶಕ್ಕೆ ನಾವೂ ಬಂದು ಸೇರಿಕೊಳ್ಳುತ್ತೇವೆ ಎಂದು ಕೇಳುವ ಪಕ್ಷಕ್ಕೆ ಆಗ ನೀವೇನು ಅಭಿಪ್ರಾಯಪಡುತ್ತೀರಿ? ಇದಕ್ಕೆ ನಿಮ್ಮ ವ್ಯತಿರಿಕ್ತವಾದ ಭಾವನೆಯೇನಾದರೂ ಇದೆಯೇ ಎಂದು ಕೇಳಿದ್ದಾರೆ. ಆಗ ಅದಕ್ಕೆ ನಮ್ಮದಾರದೂ ಅಭ್ಯಂತರವಿಲ್ಲ ಅನುಕೂಲವಾಗಿ ಸರ್ವರೂ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೆ ಆ ದಿವಸ ವ್ಯಕ್ತಪಡಿಸಿದ್ದಂಥ ಅಭಿಪ್ರಾಯಕ್ಕನುಸಾರವಾಗಿ ಈ ದಿವಸ ಅದನ್ನು ಕಾರ್ಯರೂಪಕ್ಕೆ ತರುವಂಥ ಒಂದು ಸುಸಮಯ ಒದಗಿದೆ. ಈ ಹಿಂದೆ ಆ ಬಳ್ಳಾರಿಯನ್ನು ನೀವು ನಮ್ಮ ಮೈಸೂರಿಗೇ ಸೇರಿಸಬೇಕು ಎಂದು ನಾವುಗಳು ಯಾರೂ ಅರ್ಜಿ ಹಾಕಿಕೊಂಡಿರಲಿಲ್ಲ. ಆಂಧ್ರಪ್ರಾಂತ್ಯ ನಿರ್ಮಾಣವಾದಂಥ ಕಾಲದಲ್ಲಿ ಅದು ತಾನೇ ತಾನಾಗಿ ನಮಗೆ ಬಂತು. ಆದರೆ ಈ ದಿವಸ ಈ ಗಡಿಗಳ ಪುನರ್ನಿರ್ಮಾಣ ಕಾರ್ಯದ ಬಗ್ಗೆ ಇಡೀ ಇಂಡಿಯಾ ದೇಶಕ್ಕೇ ಅನ್ವಯಿಸುವಂಥ ಒಂದು ಸಮಿತಿಯನ್ನು ಭಾರತ ಸರ್ಕಾರ ನೇಮಕಮಾಡಿದೆ. ಆ ಸಮಿತಿಯವರು ಎಲ್ಲಾ ಪ್ರಾಂತ್ಯಗಳಿಗೂ ಹೋಗಿ ಜನಾಭಿಪ್ರಾಯವನ್ನು ಶೇಖರಣೆ ಮಾಡಿಕೊಂಡಿರುತ್ತಾರೆ. ಈಗ ಅದೇ ಸಂದರ್ಭದಲ್ಲಿ ಅವರಿಗೆ ನಮ್ಮ ಒಂದು ಅಭಿಪ್ರಾಯವನ್ನು ಸೂಚಿಸುವ ಬಗ್ಗೆ ನಮಗೊಂದು ಸದವಕಾಶಸಿಕ್ಕಿದೆ. ಈ ಸಮಯದಲ್ಲಿ ಬಹುಭಾಗದ ಜನರಿಗೆ ನಮ್ಮ ನೆರೆಹೊರೆಯ ಪ್ರಾಂತ್ಯಗಳಲ್ಲಿರತಕ್ಕವರಿಗೆ, ಯಾರೋ ಈ ಕಾಂಗ್ರೆಸ್ ಸಂಸ್ಥೆಯು ಈ ವಿಷಯದಲ್ಲಿ ಒಂದು ಭಿನ್ನಾಭಿಪ್ರಾಯವಿಟ್ಟುಕೊಂಡಿದ್ದ ಹಾಗೆ ಒಂದು ತಪ್ಪು ತಿಳಿವಳಿಕೆ ಹುಟ್ಟಿಸಿದ್ದಾರೆ. ಅದಕ್ಕಾಗಿ ನಾನೀಗ ನಮ್ಮ ಖಚಿತವಾದ ಅಭಿಪ್ರಾಯಗಳನ್ನು ಕೊಡತಕ್ಕದ್ದು ಅವಶ್ಯಕವಾಗಿದೆ. ಆದರೆ, ಹೀಗೆ ನಾವು ಒಂದು ಅಭಿಪ್ರಾಯವನ್ನು ಕೊಡತಕ್ಕ ಕಾಲದಲ್ಲಿ ನಮ್ಮ ದೇಶಕ್ಕೆ ಇದರಿಂದ ಯಾವ ರೀತಿ ಧಕ್ಕೆಯುಂಟಾಗಬಹುದು, ಹೀಗೆ ಧಕ್ಕೆಯುಂಟಾಗಲು ಅವಕಾಶವಿದೆಯೇ, ಅಥವಾ ಇದು ಹೀಗಾದರೆ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರುವುದಕ್ಕೆ ಅವಕಾಶಗಳಿರುತ್ತವೆಯೇ ಎಂಬುದನ್ನೆಲ್ಲಾ ಆಲೋಚಿಸಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದ್ದು ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸದಸ್ಯರುಗಳಾದ ನಮ್ಮೆಲ್ಲರ ಕರ್ತವ್ಯ. ಇದೇ ಅಭಿಪ್ರಾಯಕ್ಕೇ ಶ್ರೀ ಟಿ. ಎಸ್. ಮೂಡಲಗಿರಿಗೌಡರು, ಶ್ರೀಮಾನ್ ಮಹಾರಾಜರವರು

(ಶ್ರೀ ಆರ್. ಚನ್ನಿಗರಾಮಯ್ಯ.)

ತಮ್ಮ ಭಾಷಣದಲ್ಲಿ ಆ ರೀತಿ ಅಪ್ಪಣೆ ಕೊಡಿಸಿದ್ದಾರೆ ಎಂದು ಹೇಳಿ ನಾವು ಅದನ್ನು ಪೂರ್ಣವಾಗಿ ವಿಮರ್ಶೆ ಮಾಡಿ ನೋಡತಕ್ಕದ್ದು ಆವಶ್ಯಕ ಎಂದು ಹೇಳಿದ್ದಾರೆ. ನಾನೂ ಸಹ ಈಗ ಅದನ್ನೇ ಹೇಳುತ್ತೇನೆ, ನಾವು ಅದೇ ರೀತಿ ಈಗ ಆಲೋಚನೆ ಮಾಡಬೇಕಾಗಿದೆ. ಆದರೆ ಈ ಸಂಬಂಧವಾಗಿ ನಮ್ಮ ಮೈಸೂರು ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಅವರು ಅಂಕಿ ಅಂಶಗಳನ್ನು ಸಂಗ್ರಹಮಾಡತಕ್ಕದ್ದು ಸಂಪೂರ್ಣವಾಗಿಲ್ಲದಿದ್ದರೂ, ಅದನ್ನು ಅವರು ಒಂದು ವರದಿಯೆಂದು ಹೇಳಿ ತಯಾರುಮಾಡಿದ್ದಾರೆ. ಬೊಂಬಾಯಿ ಪ್ರಾಂತದಲ್ಲಿರತಕ್ಕ ಕನ್ನಡ ಪ್ರಾಂತ್ಯ ಮತ್ತು ಇತರ ಪ್ರಾಂತಗಳಲ್ಲಿ ಇರಬಹುದಾದ ಕನ್ನಡ ಪ್ರದೇಶದ ಬಗ್ಗೆ ಆ ಸಮಿತಿಯವರು ಕೆಲವು ಅಂಕಿ ಅಂಶಗಳನ್ನು ಶೇಖರಣೆ ಮಾಡಿದ್ದಾರೆ. ಅನೇಕರು ಇತರ ಮಾರ್ಗಗಳಿಂದಲೂ ಈ ಬಗ್ಗೆ ಸಾಕಷ್ಟು ಅಂಕಿ ಅಂಶಗಳನ್ನು ಶೇಖರಣೆ ಮಾಡಿಕೊಂಡಿದ್ದಾರೆ. ಅಲ್ಲದೆ ದೇಶದಲ್ಲಿರತಕ್ಕ ಥ ಕೆಲವರು ಪ್ರವೀಣರುಗಳು (experts) ಈ ಸಂಬಂಧವಾಗಿ ಅನೇಕ ರೀತಿಯಲ್ಲಿ ಅಂಕಿ ಅಂಶಗಳನ್ನು ಒದಗಿಸಿಕೊಟ್ಟಿದ್ದಾರೆ. ಉದಾಹರಣೆಗೆ ಶ್ರೀ ಆರ್. ವಿ. ಕೆ. ರಾವ್ ಅವರು ಈ ವಿಷಯದಲ್ಲಿ ಬೇಕಾದಷ್ಟು ಅಂಕಿ ಅಂಶಗಳನ್ನು ಶೇಖರಣೆ ಮಾಡಿಕೊಟ್ಟಿದ್ದಾರೆ. ಆದರೆ ನಾವೀ ದಿವಸ ಈ ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ನಮ್ಮ ಶ್ರೀಮನ್ ಮಹಾರಾಜರವರು ಏನೊಂದು ಸೂಚನೆಯನ್ನು ಕೊಟ್ಟಿರುತ್ತಾರೋ ಅದಕ್ಕನುಗುಣವಾಗಿ ನಾವು ನಮ್ಮ ಅಭಿಪ್ರಾಯಗಳನ್ನು ಕೊಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

ಆದರೆ ಈಗಾಗಲೇ ನನ್ನ ಅನೇಕ ಮಾನ್ಯ ಸ್ನೇಹಿತರುಗಳು ಈ ಅಂಕಿ ಅಂಶಗಳ ಶೇಖರಣೆಯ ಬಗ್ಗೆ ಬಹಳ ಹೆಚ್ಚಾಗಿ ಹೇಳಿದ್ದಾರೆ. ಆದುದರಿಂದ ನಾನು ಈ ವಿಷಯದಲ್ಲಿ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಂಥ ಒಂದು ದೊಡ್ಡ ದೇಶವನ್ನು ಕಟ್ಟುವಾಗ ನಾವು ವಿಶಾಲ ಹೃದಯದಿಂದ ಈ ಪ್ರಶ್ನೆಯನ್ನು ನೋಡಬೇಕಾಗಿದೆ; ಬಹಳ ಉದಾರ ಭಾವನೆಯಿಂದ ವರ್ತಿಸಬೇಕಾಗಿದೆ. ಈ ಪ್ರಶ್ನೆಯನ್ನು ದೂರದೃಷ್ಟಿಯಿಂದ ಆಲೋಚಿಸಿ ನೋಡಬೇಕಾಗಿದೆ. ಆದರೆ ಈ ಸಂಬಂಧವಾಗಿ ಮಾತನಾಡಿದ ಶ್ರೀ ಟಿ. ಎನ್. ಮೂಡಲಗಿರಿಗೌಡರು ಒಂದು ಚಿಕ್ಕ ಉದಾಹರಣೆಯನ್ನು ಕೊಡುತ್ತ, ಒಂದು ಸಂಸಾರ ಒಡೆದು ಬೇರೆ ಬೇರೆ ಹೋಗಿಬಿಟ್ಟಮೇಲೆ ಅದು ಮತ್ತೆ ಒಂದು ದೊಡ್ಡ ಸಂಸಾರವಾಗಲು ಸಾಧ್ಯವೇ ಇಲ್ಲ ಎಂಬೊಂದು ಮಾತನ್ನು ಹೇಳಿದರು. ಹೀಗೆ ಅವರು ಹೇಳಿರತಕ್ಕದ್ದು ಸಮಂಜಸವಾದುದಲ್ಲ ಅನ್ನುವುದಕ್ಕೆ ನಾನೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈ ದಿವಸ ನಾವು ಒಂದು ಸಂಸಾರದ ಮಾತೇಕೆ, ಇಡೀ ಪ್ರಪಂಚವನ್ನೇ ತೆಗೆದುಕೊಂಡು ನೋಡಿದರೂ ಒಂದು ಚಿಕ್ಕ ದೇಶವನ್ನು ದೊಡ್ಡದಾಗಿ ಮಾಡಬೇಕೆಂಬ ಒಂದು ಘನೋದ್ದೇಶವಿರತಕ್ಕದ್ದು ಎಲ್ಲೆಲ್ಲಿಯೂ ಕಂಡು ಬರುತ್ತಿದೆ. ಇದರಲ್ಲಿ ಯಾರಿಗೂ ಅನುಮಾನವಿಲ್ಲ. ಪ್ರಪಂಚದ ಯಾವ ಮೂಲೆಯಲ್ಲಿ ನೋಡಿದರೂ ಯಾವ ರಾಜ್ಯವಾಗಲಿ ತನಗೆ ಸೇರಿರತಕ್ಕಂಥ ಭಾಗಗಳನ್ನು ಇತರ ದೇಶಕ್ಕೆ ಸೇರಿಸಲು ಬಿಟ್ಟುಕೊಡುತ್ತಿಲ್ಲ. ಹಾಗೆ ಅಲ್ಲದೆ ಅವರು ತಮ್ಮ ತಮ್ಮ ದೇಶಗಳನ್ನು ದೊಡ್ಡದನ್ನಾಗಿ ಮಾಡಬೇಕೆಂಬ ಉದ್ದೇಶಕ್ಕಾಗಿಯೇ ಯುದ್ಧಗಳನ್ನೂ ಕೂಡ ಹೂಡಿ ರಾಜ್ಯಗಳನ್ನು ವಿಸ್ತಾರಮಾಡಿಕೊಳ್ಳುತ್ತಿರುವ ಅಂಶ ಆ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವುದು ಎಲ್ಲರಿಗೂ ತಿಳಿದಿರತಕ್ಕಂಥ ವಿಷಯವೇ ಆಗಿದೆ. ಆದರೆ ಈಗ ನಮ್ಮ ಸ್ನೇಹಿತರು ಹೇಳಿದ ಹಾಗೆ ಬರತಕ್ಕಂಥ ದೇಶವನ್ನು ನಮಗೆ ಬೇಡ ಎಂದು ಹೇಳಿ ಬಿಟ್ಟುಕೊಡತಕ್ಕಂಥವರು ಅಲ್ಲಿ ಯಾರೂ ಇದ್ದಹಾಗೆ ಕಂಡುಬರುತ್ತಿಲ್ಲ. ಹಾಗೆ ಅವರು ಯುದ್ಧಗಳನ್ನು ಮಾಡಿ ರಾಜ್ಯಗಳನ್ನು ದೊಡ್ಡದಾಗಿ ಕಟ್ಟಬೇಕೆಂದು ಪ್ರಯತ್ನ ಮಾಡತಕ್ಕವರಿಗೆ ಇನ್ನು ರಾಜ್ಯಗಳನ್ನು ಹಾಗೆಯೇ ಬಿಟ್ಟುಕೊಡುತ್ತೇವೆ ನೀವು ತೆಗೆದುಕೊಳ್ಳಿ ಎಂದು ಹೇಳಿದಾಗ ಬೇಡ ಎಂದು ಹೇಳಿರತಕ್ಕದ್ದನ್ನು ನಾನೆಲ್ಲಿಯೂ ಚರಿತ್ರೆಯಲ್ಲೇ ನೋಡಿಲ್ಲ. ಎಲ್ಲೆಲ್ಲಿ ನೋಡಿದರೂ ನಮ್ಮ ರಾಜ್ಯಗಳನ್ನು ವಿಸ್ತರಿಸಬೇಕು, ಹಾಗೆ ಅದು ಸಾಧ್ಯವಾಗದಿದ್ದಲ್ಲಿ ಇರತಕ್ಕದ್ದನ್ನಾದರೂ ಭದ್ರಪಡಿಸಿಕೊಳ್ಳೋಣ ಎಂದು ಹೇಳುತ್ತಾರೆಯೇ ವಿನಾ ಇರುವುದನ್ನು ಕಳೆದುಕೊಳ್ಳೋಣ, ರಾಜ್ಯವನ್ನು ಚಿಕ್ಕದಾಗಿ ಮಾಡಿಕೊಳ್ಳೋಣ ಎಂದು ಯಾರೂ ಹೇಳಿಲ್ಲ. ಇದೇ ರೀತಿ ಆ ಆಂಧ್ರ ಪ್ರಾಂತ್ಯ ನಿರ್ಮಾಣವಾದನಂತರ ಅವರು "ನಮಗೆ ಮೈಸೂರಿನಲ್ಲಿ ಇಷ್ಟು ಪ್ರದೇಶ, ಹೈದರಾಬಾದಿನಲ್ಲಿಷ್ಟು ಪ್ರದೇಶ, ಹೀಗೆ ಎಲ್ಲೆಲ್ಲಿ ತೆಲುಗು ಮಾತನಾಡತಕ್ಕ ಜನರಿದ್ದಾರೋ ಆ ಪ್ರದೇಶವೆಲ್ಲ ಆಂಧ್ರ ನಾಡಿಗೇ ಸೇರಬೇಕು" ಎಂದು ಅವರು ಈ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು ಕೇಳಿದ್ದಾರೆ. ಹೀಗೆ ಆ ಆಂಧ್ರದವರೊಂದು ನಿರ್ಬಂಧ ಹಾಕುತ್ತಿದ್ದಾರೆ. ನಾವಾದರೋ ಈ ದಿವಸ ಅಂಥ ನಿರ್ಬಂಧ ಹಾಕಿ ಜನನನ್ನು ಕರೆಯುತ್ತಿಲ್ಲ. ಹಾಗೆ ಮಾಡಬಾರದೆಂಬುದು ನಮ್ಮ ಧ್ಯೇಯ. ಆದರೆ ಅವರಾಗಿ ಅವರೇ ಯಾರ ನಿರ್ಬಂಧವೂ ಇಲ್ಲದೆ ತಾವಾಗಿಯೇ ಬರುತ್ತೇವೆಂದರೆ ಅದಕ್ಕೆ ನಾವು ಆಗಬಾರದೆಂದು ಹೇಳುವುದು ಉಚಿತವಲ್ಲ. ಈ ಭಾಷಾವಾರು ಪ್ರಾಂತ್ಯಗಳ ತತ್ವಕ್ಕೆ ನಾವೆಲ್ಲರೂ ಒಪ್ಪಿಗೆ ಕೊಟ್ಟಿದ್ದೇವೆ. ಆ ಆಧಾರದ ಮೇಲೆ ಈಗ ಆಂಧ್ರ ಪ್ರಾಂತ್ಯ ನಿರ್ಮಾಣವಾಗಿದೆ. ಆದರೆ ನಾನು ಆಲೋಚನೆ ಮಾಡಿ ನೋಡಿದ್ದರಲ್ಲಿ ಈ ಭಾಷಾವಾರು ಪ್ರಾಂತ್ಯ ಅನತಕ್ಕಂಥ ಪದವನ್ನು ಈ ಸಂದರ್ಭದಲ್ಲಿ ಪ್ರಯೋಗ ಮಾಡಿದ್ದರಿಂದ ಕೆಲವರಲ್ಲಿ ಇದು ಇಷ್ಟೊಂದು ಭಯ ಭೀತಿಗಳಿಗೆ ಕಾರಣವುಂಟಾಗಿರಬಹುದೆಂದು ನನಗೆ ಕಾಣುತ್ತಿದೆ. ಶ್ರೀ ಕೆ. ಲಕ್ಕಪ್ಪನವರು ಮಾತನಾಡುತ್ತ : ಈ ಭಾಷಾವಾರು ಪ್ರಾಂತ್ಯಗಳಾಗುವುದು ಬೇಡ. ಆಡಳಿತ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಅಕ್ಕಪಕ್ಕದಲ್ಲಿರುವ ಚಿಕ್ಕ ಪುಟ್ಟ ರಾಜ್ಯಗಳನ್ನು ಸೇರಿಸಿಕೊಳ್ಳಬಹುದು ಎಂದು ಹೇಳುತ್ತ ಆ ಕೊಡಗು ಪ್ರಾಂತ್ಯ ಬೇಕಾಗಿದ್ದರೆ ನಮ್ಮ ಮೈಸೂರಿಗೆ ಸೇರಲಿ—ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ ಅನ್ನುವುದಾಗಿ ಹೇಳಿದ್ದಾರೆ. ಹಾಗೆ ಅವರು ಹೇಳಿರುವುದರಿಂದ ಪ್ರಾಯಶಃ ಈ ಭಾಷಾವಾರು ಪ್ರಾಂತ್ಯ ಅನ್ನತಕ್ಕ ಪದಗಳು ಅನೇಕರಿಗೆ ಒಂದು ಭಯವನ್ನುಂಟು ಮಾಡಿವೆಯೆಂದು ಗೊತ್ತಾಗುತ್ತದೆ. ಆದರೆ ಇಂಡಿಯಾ ಸರ್ಕಾರ ನಿರ್ಮಿಸಿರತಕ್ಕಂಥ ಆ ಫಸಲಾಲಿ ಕಮಿಷನ್ನಿನವರಿಗೆ ಅನೇಕರು ಈ ಭಾಷೆಯ ಆಧಾರದಮೇಲೆ ರಾಜ್ಯವನ್ನು ಪುನರ್ವಿಂಗಡಣೆ ಮಾಡಬೇಕೆಂಬುದಾಗಿ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಆದರೆ ಹಾಗೆ ಅವರು ಭಾಷಾಧಾರಗಳ ಮೇಲೆ ಪುನರ್ವಿಂಗಡಣೆ ಮಾಡಬೇಕೆಂದು ತಿಳಿಸಿದ್ದಾಗ್ಯೂ ಅವರು ಈ ಅಡಿಮಿನಿಸ್ಟ್ರೇಟಿವ್-ಅನುಕೂಲತೆಯೆಂಬುದೊಂದು ಏನಿದೆಯೋ ಅದನ್ನೂ ಸಹ ತಮ್ಮ ದೃಷ್ಟಿಯಲ್ಲಿಟ್ಟುಕೊಂಡೇ ಹಾಗೆ ಹೇಳಿದ್ದಾರೆ. ಈ ಎರಡು ಅಭಿಪ್ರಾಯಗಳನ್ನೂ ತಮ್ಮ ದೃಷ್ಟಿಯಲ್ಲಿಟ್ಟುಕೊಂಡೇ ಅವರು ಈ ರಾಜ್ಯಗಳ ಪುನರ್ವಿಂಗಡಣೆ ಮಾಡುವುದು. ಈ ತೀರ್ಮಾನಕ್ಕೆ ಬಂದನಂತರವೇ

ಅವರು ಮುಂದಿನ ಪ್ರಯತ್ನಗಳಿಗೆ ಕೈಹಾಕುತ್ತಾರೆ. ಹೀಗೆ ಈ ಪ್ರಶ್ನೆಯನ್ನು ಒಂದು ಮುಖವಾಗಿ ನೋಡದೆ ನಾನಾ ಮುಖಗಳಿಂದಲೂ ನೋಡಿ ಒಂದು ಸುಗಮವಾದ ತೀರ್ಮಾನಕ್ಕೆ ಬರತಕ್ಕದ್ದೇ ಒಂದು ದೊಡ್ಡ ರಾಜಕೀಯ ಜಾಣ್ಮೆ ಮತ್ತು ಇದರಲ್ಲಿತಕ್ಕಂಥ ಒಂದು ನೈಪುಣ್ಯತೆ. ಹೀಗೆ ಮಾಡದೆ ಏಕಾಏಕಿ ಪ್ರತಿಯೊಂದು ಮೂಲೆ ಮೂಲೆಯಲ್ಲಿರತಕ್ಕವರನ್ನೂ ಸೇರಿಸಿ ಒಂದು ಯೂನಿಟ್ಟಾಗಿ ಮಾಡಬೇಕು ಎಂದು ಯಾರೂ ಕೇಳಲಾರರು. ಹಾಗೆ ಕೇಳಿಯೂ ಇಲ್ಲ. ಒಟ್ಟಿನಲ್ಲಿ ಈ ಭಾಷೆಯ ಅಗತ್ಯವೂ ಇರಬೇಕು—ಅಡ್ಮಿನಿಸ್ಟ್ರೇಟೀವ್ ಕನ್ವೀನಿಯನ್ಸೂ ಸಹ ಇರಬೇಕು. ಈ ಎರಡು ಅಂಶಗಳನ್ನೂ ಒಂದು ಲಿಮಿಟ್ಟಿನಲ್ಲಿ ಇಟ್ಟುಕೊಂಡು ಈ ಎರಡರ ಕಾಂಬಿನೇಷನ್‌ಗಳ ಮೇಲೆ ದೇಶಗಳನ್ನು ಪುನರ್ವಿಂಗಡಣೆ ಮಾಡುವುದು ಒಳ್ಳೆಯದು. ನಾನು ಹೀಗೆ ಹೇಳುವಾಗ ಈ ಸಂದರ್ಭದಲ್ಲಿ ಕೆಲವು ಅಂಕಿಅಂಶಗಳನ್ನು ವಿಮರ್ಶೆಮಾಡುವುದು ಸೂಕ್ತವೆಂದು ಭಾವಿಸುತ್ತೇನೆ—ಹಾಗೆ ಮಾಡುವುದು ಇಲ್ಲಿ ಯುಕ್ತವಾದ ವಿಷಯವಾಗಿರುತ್ತದೆ.

"ನಮ್ಮ ರಾಜ್ಯ ಚಿಕ್ಕದಾಗಿದ್ದಷ್ಟೂ ಇದರ ಆಡಳಿತವನ್ನು ನಾವು ಚೆನ್ನಾಗಿ ನಡೆಸಿಕೊಂಡು ಹೋಗಬಹುದು" ಎಂದು ಶ್ರೀ ಟಿ. ಎನ್. ಮುದಲಗಿರಿಗೌಡರು ಹೇಳಿದ್ದಾರೆ. ಅವರ ಅಭಿಪ್ರಾಯ ಅಷ್ಟು ಸಾಧುವಾದದ್ದೇ ಎಂಬುದಕ್ಕೆ ನಾನೊಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಚಿಕ್ಕದಾಗಿರತಕ್ಕಂಥ ಹಳ್ಳಿಯ ಗ್ರಾಮಪಂಚಾಯಿತಿಯನ್ನೂ ತಗೆದುಕೊಳ್ಳೋಣ—ಅದರ ಜೊತೆಗೆ ನಮ್ಮ ಈ ಬೆಂಗಳೂರು ಕಾರ್ಪೊರೇಷನ್ನಿನ ವಿಚಾರವನ್ನೂ ತೆಗೆದುಕೊಳ್ಳೋಣ. ಕಾರ್ಪೊರೇಷನ್ ಆಡಳಿತ ದೊಡ್ಡದಾಗಿದೆ. ಗ್ರಾಮ ಪಂಚಾಯಿತಿಯ ಆಡಳಿತ ಚಿಕ್ಕದಾಗಿದೆ. ಈ ಎರಡಕ್ಕೂ ಹೋಲಿಕೆ ಹಾಕಿನೋಡಿದರೆ—ಚಿಕ್ಕ ಗ್ರಾಮಪಂಚಾಯಿತಿಯ ಆಡಳಿತವೂ ಚಿಕ್ಕದೇ, ಅಲ್ಲಿನ ಅಭಿವೃದ್ಧಿಯೂ ಅಷ್ಟೆ. ಆ ಗ್ರಾಮ ಪಂಚಾಯಿತಿಗೆ ನಾಲ್ಕು ಜನ ಸ್ವೀಪರ್‌ಗಳನ್ನು ಇಟ್ಟುಕೊಳ್ಳಬೇಕಾದರೆ ಅವರಿಗೆ ದುಡ್ಡಿಲ್ಲ. ಗ್ರಾಮಬಡಾವಣೆ, ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಅವರಿಗೆ ಹಣವಿರುವುದಿಲ್ಲ; ಹೀಗೆ ದೊಡ್ಡ ದೊಡ್ಡ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಅವರಿಗೆ ಧೈರ್ಯವೇ ಇರುವುದಿಲ್ಲ. ಹೀಗಿದ್ದರೂ ಚಿಂತೆಯಿಲ್ಲ, ನಾವು ಆ ಚಿಕ್ಕಹಳ್ಳಿಯಲ್ಲೇ ಇರೋಣ; ಅದು ದೊಡ್ಡದಾಗುವುದು ಬೇಡ; ಆ ಚಿಕ್ಕ ಹಾಸಿಗೆಯಲ್ಲೇ ಇರೋಣ, ನಾವು ಕಾಲುಚಾಚುವುದೇ ಬೇಡ ಎಂದೆನ್ನುವುದಾದರೆ—ನಮಗೆ ಬಡತನ ಎಂದೆಂದಿಗೂ ತಪ್ಪುವುದಿಲ್ಲ. ಅವುಗಳು ಸರ್ಕಾರವನ್ನು ಪದೇ ಪದೇ ದುಡ್ಡು ಕೇಳುವುದೂ ತಪ್ಪುವುದಿಲ್ಲ. ಹಾಗಾಗುವುದಕ್ಕೆ ಬದಲು ಗ್ರಾಮಗಳು ಬಡಾವಣೆಯಾಗಿ ಅವು ದೊಡ್ಡದಾಗಿ ಬೆಳೆದರೆ ಆಗ ಅಲ್ಲಿ ಕೈಗಾರಿಕೆ, ವಿದ್ಯಾಭ್ಯಾಸ ಇವುಗಳೆಲ್ಲಾ ಮುಂದುವರಿದು ನಮ್ಮ ದೇಶ ತನ್ಮೂಲಕ ಅಭಿವೃದ್ಧಿಗೆ ಸರ್ವತೋಮುಖವಾಗಿ ಬರಲು ಸಾಧ್ಯವಾಗುತ್ತದೆ. ಹೀಗಾದರೇನೇ ನಮ್ಮ ದೇಶ ಮುಂದುವರಿಯುವುದು. ದೇಶ ಯಾವಾಗಲೂ ಹೆಚ್ಚು ಹೆಚ್ಚು ಅಭಿವೃದ್ಧಿ ಹೊಂದಲು ಹೆಚ್ಚು ಹೆಚ್ಚು ಅವಕಾಶಗಳಿರಬೇಕು ಎನ್ನತಕ್ಕಂಥ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ನಾವೀ ಪ್ರಶ್ನೆಯನ್ನು ಪರ್ಯಾಲೋಚಿಸಬೇಕಾದದ್ದು ನ್ಯಾಯವಾದ ರೀತಿಯೆಂದು ನಾನು ಭಾವಿಸುತ್ತೇನೆ. ನಾನು ಈ ಮೊದಲೇ ಹೇಳಿದ ಹಾಗೆ ಎಲ್ಲೆಲ್ಲಿಯೂ ಯುದ್ಧಗಳನ್ನು ಮಾಡಿ ರಾಜ್ಯಗಳನ್ನು ಬೆಳೆಸುತ್ತಿರುವಾಗ—"ನಾವು ನಿಮ್ಮೊಡನೆ ಒಂದು ಸೇರಿಕೊಳ್ಳುತ್ತೇವೆ" ಎಂದು ಅವರು ಕೇಳುತ್ತಿರುವಾಗ ನಾವು ಬೇಡ ಅನ್ನುವುದು ಅದೊಂದು ಜಾಣ್ಮೆಯಲ್ಲ ಮತ್ತು ಬುದ್ಧಿವಂತಿಕೆಯೂ ಅಲ್ಲ.

ಇನ್ನು ಈ ಅಂಕಿ ಅಂಶಗಳ ಬಗ್ಗೆ ಒಂದೆರಡು ಮಾತುಗಳನ್ನಾಡಬೇಕಾಗಿದೆ. ಈಗಾಗಲೇ ಹಲವು ಮಾನ್ಯ ಸದಸ್ಯರು ಈ ಸಂಬಂಧದಲ್ಲಿ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ—ನಾನೂ ಸಹ ಈ ವರದಿಯನ್ನು ನೋಡಿದ್ದರಲ್ಲಿ ಈ ಅಂಕಿಅಂಶಗಳು ಅಷ್ಟು ಖಚಿತವಾದುವುಗಳೆಂದು ನಾನು ಹೇಳಲಾರೆ. ಸಮಿತಿಯ ವರದಿಯ ಬಗ್ಗೆ ಕೆಲವು ಸದಸ್ಯರು ಕೆಲವು ಅಂಕಿಅಂಶಗಳನ್ನು ಕೊಡುತ್ತ ಈ ಭಾಗವನ್ನು ಒಟ್ಟುಗೂಡಿಸುವುದರಿಂದ ದೇಶಾಭಿವೃದ್ಧಿಗೆ ಅವಕಾಶವಾಗಲಾರದೆಂದು ಒಂದು ಮಾತನ್ನು ಹೇಳಿದ್ದಾರೆ. ಆ ಅಂಕಿಅಂಶಗಳ ಸಮಿತಿಯವರು ಹೈದ್ರಾಬಾದ್ ಸರ್ಕಾರದ ಅತ್ಯಂತ ಲೋಯಸ್ಟ್ ಸರ್‌ಪ್ಲಸ್ ಇದ್ದಂಥ 1952-53 ರ ಒಂದು ಸಾಲಿನ ಅಂಕಿಅಂಶಗಳನ್ನೂ ಬೊಂಬಾಯಿ ಸರ್ಕಾರದ ಹೈಯೆಸ್ಟ್ ಡಿಫಿಸಿಟ್ ಬಜೆಟ್ ಇದ್ದಂಥ 1952-53 ವರ್ಷದ ಲೆಕ್ಕವನ್ನೂ ತೆಗೆದುಕೊಂಡು ಆ ಪ್ರಾಂತ್ಯಗಳೆಲ್ಲಾ ಡಿಫಿಸಿಟ್ ಜಾಸ್ತಿ ಇರತಕ್ಕಂಥ ಭಾಗಗಳು ಎಂದು ಹೇಳಿದ್ದಾರೆ. ಸರ್‌ಪ್ಲಸ್ ಜಾಸ್ತಿಯಿರುವಂಥ ಹೈದ್ರಾಬಾದ್ ಬಜೆಟ್ಟಿನಲ್ಲಿ ಕೇವಲ ಕಡಮೆ ಸರ್‌ಪ್ಲಸ್ ಇರುವಂಥ ವರ್ಷಗಳ ಅಂಕಿಅಂಶಗಳನ್ನೇ ಇವರು ಆರಿಸಿಕೊಂಡಿದ್ದಾರೆ. ಆದರೆ ಇವುಗಳೆಲ್ಲದರ ಸರಾಸರಿ ತೆಗೆದುಕೊಂಡಿದ್ದರೆ ಅಥವಾ ಈ ಎರಡು ಸರ್ಕಾರಗಳೂ ಈ ಪ್ರದೇಶಗಳ ಬಗ್ಗೆ ಕೊಟ್ಟಿರತಕ್ಕಂಥ ಅಂಕಿಅಂಶಗಳ ಬಗ್ಗೆ ಮಿನಿಮಂ ಡಿಫಿಸಿಟ್ ಮತ್ತು ಮ್ಯಾಗ್ಜಿಮಂ ಸರ್‌ಪ್ಲಸ್ ತೆಗೆದುಕೊಂಡು ಲೆಕ್ಕಹಾಕಿದ್ದರೆ, ಇಷ್ಟೊಂದು ಹೆಚ್ಚಿನ ಡಿಫಿಸಿಟ್ ಏರಿಯಾ ಆಗುತ್ತಿರಲಿಲ್ಲವೆಂದು ತೋರುತ್ತದೆ. ಆದರೆ ಈ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಕೈಬಿಡಲಾಗಿದೆಯೆಂದು ಈಗಾಗಲೆ ಶ್ರೀ ಇಮಾಂರವರು ತಿಳಿಸಿದ್ದಾರೆ. ಕೇಂದ್ರಸರ್ಕಾರದಿಂದ ಬರತಕ್ಕಂಥ ವರಮಾನದ ಬಾಬುಗಳನ್ನು ಸಹ ಇವರು ಗಣನೆಗೆ ತೆಗೆದುಕೊಂಡಿದ್ದಿದ್ದರೆ ಈ ಖೋತಾ ಇಷ್ಟು ಅಧಿಕವಾಗುತ್ತಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇಷ್ಟೇ ಅಲ್ಲದೆ ಮತ್ತೊಂದು ವಿಶೇಷವಾದ ಅಂಶ ಈ ಸಂದರ್ಭದಲ್ಲಿ ಯಾರೂ ಮರೆಯಲಾಗದಂಥಾದ್ದು ಏನೆಂದರೆ: ದೇಶದಲ್ಲಿರತಕ್ಕಂಥ ಅನೇಕ ಎಕ್ಸ್‌ಪರ್ಟುಗಳು ಈ ಕನ್ನಡ ಪ್ರಾಂತ್ಯವಾಗಬೇಕೆಂದು ಹೇಳುತ್ತಿರುವ ಪ್ರದೇಶದಲ್ಲಿ ಇರತಕ್ಕಂಥ ಲೋಹಗಳ ವಿಚಾರದಲ್ಲಿ "The Karnatak area is the second richest mineral area in the whole of India" ಎಂದು ಅವರು ಹೇಳಿದ್ದಾರೆ. ಹಾಗೆ ನಾವು ಆ ಪ್ರದೇಶಗಳನ್ನೆಲ್ಲಾ ಸರಿಯಾಗಿ ಅಭಿವೃದ್ಧಿಪಡಿಸಿದರೆ ಆ ಪ್ರದೇಶಗಳಿಂದ ನಮಗೆ ಹೆಚ್ಚು ಆದಾಯ ಬರುತ್ತದೆ. ನಮಗೆ ಇಲ್ಲಿಯವರೆಗೂ ವ್ಯಾಪಾರಾಭಿವೃದ್ಧಿಗಾಗಿ ಒಂದುಬಂದರು ಇರಲಿಲ್ಲ, ಈಗ ದೇವರು ಒಂದು ಬಂದರು ನಮಗೆ ಸಿಕ್ಕುವಂಥ ಅವಕಾಶ ಮಾಡಿಕೊಟ್ಟಿರುವಾಗ ನಾವು ದೇಶವನ್ನು ಎರಡು ಮುಖವಾಗಿಯೂ ಅಭಿವೃದ್ಧಿ ತರಬಹುದು. ಇದರಿಂದ ನಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆಯೇ ಹೊರತು ಅದೆಂದಿಗೂ ಕೆಡಲಾರದು. ಆ ಭಾಗಗಳೆಲ್ಲಾ ನಮಗೆ ಸೇರುವುದರಿಂದ ನಮ್ಮ ದೇಶದ ವ್ಯಾಪಾರ ಮತ್ತು ಕೈಗಾರಿಕೆಗಳು ಇನ್ನೂ ಹೆಚ್ಚು ಅಭಿವೃದ್ಧಿಗೆ ಬರುತ್ತವೆ. ಈ ಅಂಶಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಈ ಪ್ರಶ್ನೆಯನ್ನು ಎಲ್ಲಾ

(ಶ್ರೀ ಆರ್. ಚನ್ನಿಗರಾಮಯ್ಯ.)

ದೃಷ್ಟಿಗಳಿಂದಲೂ ಆಲೋಚನೆ ಮಾಡಿ ನೋಡಿದ್ದೇನೆ. ಈ ಪ್ರಾಂತ್ಯಗಳ ಏಕೀಕರಣದಿಂದ ದೇಶ ಅಭಿವೃದ್ಧಿಗೆ ಬರುತ್ತಿಲ್ಲವೆಂದು ನನಗೆ ಕಂಡುಬಂದಿದ್ದರೆ ಆಗ ನಾನು ಇದಕ್ಕೆ ನನ್ನ ಬೆಂಬಲವನ್ನು ಎಂದಿಗೂ ನೀಡುತ್ತಿರಲಿಲ್ಲ. ಇದರಿಂದ ಮುಂದಕ್ಕೆ ದೇಶ ಇನ್ನೂ ಹೆಚ್ಚು ಅಭಿವೃದ್ಧಿಗೆ ಬರುವ ಸೂಚನೆಗಳಿರುತ್ತವೆಂಬುದನ್ನು ನಾನ ಮನಗಂಡಿದ್ದೇನೆ. ಈ ಬಗ್ಗೆ ನಾನು ಒಂದು ಉದಾಹರಣೆ ಕೊಡಬೇಕಾಗಿದೆ. ಈ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರು ಆ ಭದ್ರಾವತಿಯಲ್ಲಿ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದಂಥ ಕಾಲದಲ್ಲಿ ನಾವೆಲ್ಲರೂ 'ಇದಕ್ಕೇಕೆ ಇಷ್ಟು ಹಣ ಖರ್ಚುಮಾಡಿದರು-ಇದರಿಂದ ನಮ್ಮ ದೇಶಕ್ಕೆ ತುಂಬ ನಷ್ಟ ಉಂಟಾಯಿತು' ಎಂದು ಹೇಳುತ್ತಿದ್ದೆವು. ಆದರೆ ಈ ದಿವಸ ಹತ್ತಾರು ವರ್ಷಗಳಾದ ನಂತರ ಅದೇನಾಗಿದೆ ! ಅದರಿಂದ ಒಂದು ಅಪಾರ ಆದಾಯವನ್ನು ಪಡೆಯುತ್ತಿದ್ದೇವೆ. ಇದೇ ರೀತಿ ಆ ಕೃಷ್ಣರಾಜ ಸಾಗರದ ವಿಷಯ ಕೂಡ. ಆ ದಿವಸ ಆ ಕೆರೆಯನ್ನು ಕಟ್ಟಿದ್ದರಿಂದ ನಮ್ಮ ದೇಶದ ದುಡ್ಡೆಲ್ಲಾ ಹೋಯಿತು ಎಂದೆನ್ನುತ್ತಿದ್ದೆವು. ಹಾಗೆ ಆ ದಿವಸ ಅವರು ಆ ಕೆರೆಯನ್ನು ನಿರ್ಮಾಣಮಾಡದೆ ಇದ್ದಿದ್ದಲ್ಲಿ ಈ ದಿವಸ ಈ ಮಂಡ್ಯ ಜಿಲ್ಲೆ—ಮಳವಳ್ಳಿ—ಮದ್ದೂರು ಈ ಪ್ರಾಂತ್ಯಗಳ ಗತಿಯೇನಾಗುತ್ತಿತ್ತು ? ಅವರ ಕಷ್ಟವನ್ನು ಈ ದಿವಸ ನಾವು ಬಗೆ ಹರಿಸಲು ಆಗುತ್ತಿರಲಿಲ್ಲ. ಈಗಲೂ ಸಹ ನಾವು ಅದೇ ರೀತಿ ಆ ಕನ್ನಡ ಪ್ರಾಂತ್ಯಗಳಲ್ಲಿರುವಂಥ ಅರಣ್ಯ ಸಂಪತ್ತು, ಖನಿಜ ಸಂಪತ್ತು ಇವುಗಳೆಲ್ಲವನ್ನೂ ರೂಢಿಸಿಕೊಂಡರೆ ನಮ್ಮ ದೇಶ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರುವುದಕ್ಕೆ ವಿಶೇಷ ಅವಕಾಶಗಳಿವೆ. ಹೀಗೆ ಇಷ್ಟೆಲ್ಲಾ ಒಂದು ಶುಭಕರವಾದಂಥ, ಲಾಭಕರವಾಗುವಂಥ ಸನ್ನಿವೇಶಗಳು ಇರುವಾಗ ಆ ಭಾಗಗಳು ಸೇರಲಿ ಎಂದು ಹೇಳಬೇಕೋ ಅಥವಾ ಸೇರಬಾರದು ಎಂದು ಹೇಳಬೇಕೋ ? ಹೀಗೆಲ್ಲಾ ಅನುಕೂಲಗಳಿರುವುದನ್ನು ಆಮೂಲಾಗ್ರವಾಗಿ ಯೋಚಿಸಿ ನೀವು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗಿದೆಯೆಂಬುದಕ್ಕಾಗಿ ಶ್ರೀಮನ್ ಮಹಾರಾಜರವರು ತಮ್ಮ ಭಾಷಣದಲ್ಲಿ ಹಾಗೆ ಹೇಳಿದ್ದಾರೆ. ಮಾತೆತ್ತಿದರೆ 'ನಾವು ನಮ್ಮ ಮೈಸೂರಿನ ವೈಶಿಷ್ಟ್ಯತೆಯನ್ನು ಉಳಿಸಬೇಕು' ಎಂದು ಕೆಲವರು ಹೇಳುತ್ತಾರೆ. ಆದರೆ ಹಾಗೆ ನಮ್ಮ ಮೈಸೂರಿನ ವೈಶಿಷ್ಟ್ಯತೆಯನ್ನು ಕಳೆಯುವಂಥ ಅಥವಾ ಅದಕ್ಕೆ ಒಂದು ಧಕ್ಕೆಯನ್ನು ತರುವಂಥ ಕೆಲಸವನ್ನು ಯಾರು ಮಾಡಿದ್ದಾರೆ ? ಅಂಥ ಅನುಮಾನಕ್ಕಾದರೂ ಅವಕಾಶವೆಲ್ಲಿದೆ ? ಈ ಹಿಂದೆ ನಮ್ಮ ಇಂಡಿಯಾ ದೇಶದಲ್ಲಿದ್ದ ಅನೇಕ ಚಿಕ್ಕ ಪುಟ್ಟ ಸ್ಟೇಟುಗಳನ್ನೆಲ್ಲಾ ಒಟ್ಟಾಗಿ ಕೂಡಿಸಬೇಕೆಂಬ ವಿಚಾರ ಬಂದಾಗ ಇಂಡಿಯಾ ಸರ್ಕಾರದವರು ಈ ರಾಜ ಮಹಾರಾಜರುಗಳನ್ನು ಕೇಳಿದಕ್ಕೆ—ಆಗ ಅವರೆಲ್ಲರೂ ಹಾಗೆ ಒಟ್ಟು ಕೂಡಿಸುವುದಕ್ಕೆ ಸಾಧ್ಯವಿಲ್ಲ ; ಹಾಗೆ ಮಾಡಿದರೆ ಆಡಳಿತ ದೃಷ್ಟಿಯಿಂದ ಬಹಳ ಅಪಾಯ ಉಂಟಾಗುತ್ತದೆ ; ಅವು ಹಾಗೆ ಚಿಕ್ಕ ಚಿಕ್ಕ ಸ್ಟೇಟುಗಳಾಗಿದ್ದರೆ ಅವುಗಳ ಆಡಳಿತ ಚೆನ್ನಾಗಿದ್ದು ಅವು ಅಭಿವೃದ್ಧಿಗೆ ಅವಕಾಶವಾಗುತ್ತದೆ ಎಂದು ಹೇಳಿದ್ದರು. ಇದೇ ಒಂದು ಮಾತನ್ನು ತೆಗೆದುಕೊಂಡು ನಾವೀಗ ಆ ಬಳ್ಳಾರಿ ಜಿಲ್ಲೆಗೆ ಸೇರಿರತಕ್ಕಂಥ ಆ ಸಂಡೂರು ಸ್ಟೇಟಿನ ವಿಚಾರವನ್ನು ಪ್ರಸ್ತಾಪಮಾಡೋಣ. ಈ ಹಿಂದೆ ಇದೊಂದು ಚಿಕ್ಕ ರಾಜ್ಯವಾಗಿದ್ದಾಗ ಅವರು ಇದನ್ನು ಎಷ್ಟರಮಟ್ಟಿಗೆ ಅಭಿವೃದ್ಧಿ ಸ್ಥಿತಿಯಲ್ಲಿಟ್ಟುಕೊಂಡಿದ್ದರು ? ಅದೇನು ಒಂದು ಮುಂದುವರಿದ ಸ್ಟೇಟಾಗಿದೆಯೇ ? ಎಂದು ನೋಡಿದರೆ ಈ ದಿವಸ ಆ ಸಂಡೂರಿನವರ ಕಷ್ಟ ಹೇಳುವುದಕ್ಕೆ ಸಾಧ್ಯವಿಲ್ಲ. ಈ ದಿವಸವಾದರೋ ಅವರಿಗೆ ಸ್ವಾತಂತ್ರ್ಯ ಬಂದಿದೆ. ಈಗ ಅದನ್ನು ಬಳ್ಳಾರಿಗೆ ಸೇರಿಸಿದ್ದರಿಂದ ಅವರಿಗೇನೂ ತೊಂದರೆಯಾಗಿಲ್ಲ. ಇನ್ನೂ ಅನುಕೂಲವಾಗಿದೆ. ಇದೇ ರೀತಿ ಅನೇಕ ಸಣ್ಣ ಪುಟ್ಟ ರಾಜ್ಯಗಳನ್ನು ಸರ್ದಾರ್ ಪಟೇಲರು ಒಗ್ಗಟ್ಟಾಗಿ ಸೇರಿಸಿದ್ದರಿಂದ ಆ ದೇಶಗಳ ಜನರಿಗೆ ಅನೇಕ ರೀತಿಯಲ್ಲಿ ಅನುಕೂಲವಾಗಿದೆ. ಸ್ವಾತಂತ್ರ್ಯ ದೇಶಕ್ಕೆ ಬಂದಿದೆ, ಅವರಿಗೆ ಇಂಡಿಯಾ ಸರ್ಕಾರದಿಂದ ಅನೇಕ ಗ್ರ್ಯಾಂಟುಗಳು ಸಿಕ್ಕಿವೆ. ಕೆಲವರು, ನಮ್ಮ ದೇಶದ ವೈಶಿಷ್ಟ್ಯವನ್ನು ಕಳೆದುಕೊಳ್ಳಬಾರದೆಂದು ಹೇಳುತ್ತಿದ್ದಾರೆ. ನಮ್ಮ ದೇಶದ ವೈಶಿಷ್ಟ್ಯವನ್ನೇನೂ ಕಳೆದುಕೊಳ್ಳಬೇಕಾಗಿಲ್ಲ. ನಮ್ಮ ದೇಶದ ಬಾವುಟವಿತ್ತು, ಅದು ಹೋಯಿತು ; ಮಹಾರಾಜರಿಗೆ ಎಷ್ಟೋ ಅಧಿಕಾರವಿತ್ತು, ಇದೂ ಹೋಯಿತು. ನಾವೇ ಬಿಟ್ಟು ಕೊಡುತ್ತಿದ್ದೇವೆ. ನಮಗೆ ನಾನಾ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆಂದು ನಂಬಿಕೆಯಿರುವುದರಿಂದ ಪುನರ್ವಿಂಗಡಣೆಯ ವಿಚಾರದಲ್ಲಿ ನನ್ನ ಬೆಂಬಲವನ್ನು ಕೊಡುತ್ತೇನೆ. ನಮ್ಮ ಸರ್ಕಾರದವರು ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ತಮ್ಮ ಅಭಿಪ್ರಾಯವನ್ನು ಕೊಡಬೇಕೆಂಬ ಉದ್ದೇಶದಿಂದ ಈ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ನನಗಾದರೂ ಅನಿಸುತ್ತದೆ, ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ಸರ್ಕಾರದವರು ಅಭಿಪ್ರಾಯಕೊಡಬೇಕಾದುದು ಅವಶ್ಯವಲ್ಲ. ನಮ್ಮಷ್ಟೇ ಅವರೂ ಜವಾಬ್ದಾರರು. ನಮ್ಮ ದೇಶದ ಹಿತ ಮತ್ತು ಅಭಿವೃದ್ಧಿಯ ವಿಚಾರದಲ್ಲಿ ನಮಗೆಷ್ಟು ಆಸಕ್ತಿಯಿದೆಯೋ, ಜವಾಬ್ದಾರಿಯಿದೆಯೋ ಅವರಿಗೂ ಅಷ್ಟೇ ಇದೆ. ನಮ್ಮ ಪಕ್ಕದ ಬೊಂಬಾಯಿ ಪ್ರಾಂತ್ಯದವರು ಅವರ ಅಭಿಪ್ರಾಯವನ್ನು ಕ್ಯಾಬಿನೆಟ್ ತೀರ್ಮಾನದಿಂದ ಕೊಟ್ಟಿಲ್ಲ. ಅವರಿಗೆ ಪುನರ್ವಿಂಗಡಣೆ ಆಗಬೇಕೆ ಅಥವಾ ಬೇಡವೆ ಎನ್ನುವುದು ಬೇಕಾಗಿಲ್ಲ. ಅಲ್ಲಿಗೆ ಕಮಿಷನ್ ಬಂದಾಗ ಮಂತ್ರಿಗಳೇ ಬೇರೆ ಬೇರೆ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಹೀಗಿರುವಾಗ ನಮ್ಮವರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಕೊಡುವುದಕ್ಕೆ ಅಧಿಕಾರವಿದೆ. ಬೇರೆ ದೇಶಗಳಲ್ಲಿ ಹೇಗೆ ಅಭಿಪ್ರಾಯಗಳನ್ನು ಕೇಳುತ್ತಾರೋ ಹಾಗೆಯೇ ಇಂಡಿಯಾ ಸರ್ಕಾರದವರು ಕೇಳಬೇಕೆಂದು ಶ್ರೀ ತಿಮ್ಮಪ್ಪಗೌಡರು ಹೇಳಿದರು. ಇಂಡಿಯಾ ಸರ್ಕಾರದವರು ಕ್ಯಾಬಿನೆಟ್ ತೀರ್ಮಾನವನ್ನು ಕೇಳಿದ್ದರೆ ಕೊಡಬಹುದು ಇಲ್ಲದಿದ್ದರೆ ಕೊಡಬೇಕಾಗಿಲ್ಲ. ಕೆಲವರಿಗೆ ಇದು ಬೇಕಾಗಬಹುದು ಮತ್ತೆ ಕೆಲವರಿಗೆ ಬೇಡವಾಗಬಹುದು. ಆದುದರಿಂದ ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು for or against ಎಂದು ಇದರ ಮೇಲೆ ಹೇಳುವುದು ಬಹಳ ಕಷ್ಟ. ಇದಕ್ಕೆ ಬದಲು ವೈಯಕ್ತಿಕವಾಗಿ ಅಭಿಪ್ರಾಯ ಕೊಡುವುದು ಸೂಕ್ತ. ಅವರು ತಮ್ಮ ಜವಾಬ್ದಾರಿಯನ್ನರಿತು ಕೊಡಲು ಅವರಿಗೆ ಶಕ್ತಿಯಿದೆ. ಬೇರೆ ಪ್ರದೇಶಗಳು ಸೇರುವುದರಿಂದ ನಮ್ಮ ದೇಶಕ್ಕೆ ಯಾವ ರೀತಿಯಲ್ಲಿಯೂ ಧಕ್ಕೆ ಬರುವುದಿಲ್ಲ, ನಮ್ಮ ಈ ಅಭಿವೃದ್ಧಿ ಕಾರ್ಯಗಳಿಗೆ ಯಾವ ರೀತಿಯಲ್ಲೂ ಧಕ್ಕೆ ಬರುವುದಿಲ್ಲ. ನಮ್ಮ ವೈಶಿಷ್ಟ್ಯ ಅಥವಾ ವ್ಯಕ್ತಿತ್ವ ಯಾವ ರೀತಿಯಲ್ಲಿಯೂ ಕಡಮೆಯಾಗುವುದಿಲ್ಲ, ಇನ್ನೂ ಹೆಚ್ಚಾಗುತ್ತದೆ. ನಮ್ಮ ಮೈಸೂರು ದೇಶದಲ್ಲಿ ಒಳ್ಳೆಯ ವೈಶಿಷ್ಟ್ಯವಿದ್ದರೆ, ಅದನ್ನ ನಮ್ಮ ಅಕ್ಕಪಕ್ಕದ ದೇಶಗಳಲ್ಲಿ ಬೆಳಗುವುದು ಉದಾರ ನೀತಿ. ನಮ್ಮ

ವೈಶಿಷ್ಟ್ಯ ಒಳ್ಳೆಯದಾಗಿದ್ದರೆ ಇತರರಿಗೆ ಏಕೆ ಕೊಡಬಾರದು? ನಮ್ಮಲ್ಲಿ ವಿಶಾಲದೃಷ್ಟಿ ಇರಬೇಕು. ನಮ್ಮ ಇಡೀ ಇಂಡಿಯಾ ದೇಶದ ಜನರು ನಮ್ಮವರು, ನಮಗೆ ಸುಖವಿದ್ದರೆ ಅವರಿಗೂ ಏಕೆ ದೊರಕಿಸಿ ಕೊಡಬಾರದು? ಇದನ್ನು ವಿರೋಧಿಸುವವರಿಗೂ ಸಾಕಷ್ಟು ಕಾರಣವಿರಬಹುದು. ಅವರ ಅಭಿಪ್ರಾಯ ಸರಿಯಲ್ಲವೆಂದು ಹೇಳಲು ನನಗೆ ಶಕ್ತಿಯಿಲ್ಲ. ಆದರೂ ಈ ವಿಷಯವನ್ನು ಬಹಳ ನಿಧಾನವಾಗಿ ಶಾಂತಮನಸ್ಸಿನಿಂದ ಯೋಚನೆ ಮಾಡಬೇಕು. ಆಗ ಇದರಿಂದ ಅನುಕೂಲವೆ ಅಥವ ಪ್ರತಿಕೂಲವೆ ಎನ್ನುವುದು ಗೊತ್ತಾಗುತ್ತದೆ.

ಆಡಳಿತ ದೃಷ್ಟಿಯಿಂದ ನೋಡೋಣ. ಒಂದು ಚಿಕ್ಕ ಪ್ರದೇಶದಲ್ಲಿ, ಒಂದು ಗ್ರಾಮ ಪಂಚಾಯಿತಿಯ ಚುನಾವಣೆಯಾಗುವಾಗ ಎಷ್ಟೋ ತೊಂದರೆಯಾಗುತ್ತದೆ. ಅದೇ ಒಂದು ವಿಶಾಲವಾದ ಪ್ರದೇಶ ಅಥವಾ ದೇಶವಾದರೆ, ಇಷ್ಟೊಂದು ಸಣ್ಣ ಪುಟ್ಟ ವಿಷಯಗಳಲ್ಲಿ ವ್ಯತ್ಯಾಸ ಅಥವಾ ಭಿನ್ನಾಭಿಪ್ರಾಯಗಳು ಬರುವುದಕ್ಕವಕಾಶವಾಗುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮುನಿಸಿಪಾಲಿಟಿಗಳಲ್ಲಿದ್ದವರೂ ಅದನ್ನು ಬಿಟ್ಟು ಬೇರೆ ಬೇರೆ ಗ್ರಾಮ ಪಂಚಾಯಿತಿಗಳನ್ನು ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಗಳ ಉದಾಹರಣೆಯನ್ನು ಶ್ರೀ ತಿಮ್ಮಪ್ಪಗೌಡರು ಕೊಡುತ್ತಾರೆ. ಅವುಗಳ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ದೊಡ್ಡ ದೊಡ್ಡ ಮುನಿಸಿಪಾಲಿಟಿಗಳಲ್ಲಿ ಕೆಲಸ ಎಷ್ಟೋ ಸುಲಲಿತವಾಗಿ ನಡೆಯುತ್ತದೆ. ದೊಡ್ಡ ಕಾರ್ಪೊರೇಷನ್ನಲ್ಲಿ ಸುಲಲಿತವಾಗಿ ನಡೆಯುತ್ತದೆ. ನಿಜವಾಗಿಯೂ ಅವರು ಯೋಚನೆ ಮಾಡಿಲ್ಲ. ಶ್ರೀಮಾನ್ ಅನಂತರಾಮರವರು ಮೊದಲು ಬೆಂಗಳೂರು ಕಾರ್ಪೊರೇಷನ್ ಮೇಯರ್ ಆಗಿದ್ದರು; ಅವರಿಗೆ ಗೊತ್ತಿದೆ. ಸಣ್ಣಸಣ್ಣ ಮುನಿಸಿಪಾಲಿಟಿಗಳಲ್ಲಿ ಎಷ್ಟು ಕಷ್ಟ ಎನ್ನುವುದೂ ಗೊತ್ತಿದೆ. ಅಲ್ಲಿ ಸ್ವಲ್ಪ ಜನರಿದ್ದರೂ ಕಷ್ಟ. ಆದೇ ದೊಡ್ಡ ಕಾರ್ಪೊರೇಷನ್ನವರು ದೊಡ್ಡ ದೊಡ್ಡ ಅಭಿವೃದ್ಧಿ ಕಾರ್ಯಗಳನ್ನು ಸುಲಭವಾಗಿ ಮಾಡುತ್ತಾರೆ. ಹೀಗೆಯೇ ದೊಡ್ಡದಾದ, ವಿಶಾಲವಾದ ದೇಶವಿದ್ದರೆ ಭದ್ರತೆಯೂ ಇರುತ್ತದೆ, ಕೆಲಸ ಕಾರ್ಯಗಳು ಚೆನ್ನಾಗಿಯೂ ನಡೆಯುತ್ತವೆ. ಆಡಳಿತ ದೃಷ್ಟಿಯಿಂದ ಅಮೇರಿಕಾ ದೇಶದಲ್ಲಿ ಒಂದೊಂದು ಸಂಸ್ಥಾನದಲ್ಲಿ 40 ಲಕ್ಷ ಪ್ರಜಾಸಂಖ್ಯೆಯು ಮೇಲಿಲ್ಲವೆಂದು ಹೇಳಿದರು; ಆದರೆ ಆ ದೇಶದ ವಾತಾವರಣ ಹೇಗಿದೆಯೆಂಬುದು ಪೂರ್ಣವಾಗಿ ನಮಗೆ ಗೊತ್ತಿದ್ದಿದ್ದರೆ ಮಾತನಾಡಬಹುದಾಗಿತ್ತು. ನಮ್ಮ ದೇಶದಲ್ಲಿ ಒಂದೊಂದು ಪ್ರಾಂತ್ಯದಲ್ಲಿ ಮೂರು ಕೋಟಿ, ನಾಲ್ಕು ಕೋಟಿ, ಆರು ಕೋಟಿ ಪ್ರಜಾಸಂಖ್ಯೆಯಿರುವುದಿದೆ. ಮದ್ರಾಸ್ ಪ್ರಾಂತ್ಯ ಆಂಧ್ರ ಪ್ರಾಂತ್ಯವಾಗುವುದಕ್ಕೆ ಮುಂಚೆ ಬಹಳ ದೊಡ್ಡದಾಗಿತ್ತು. ಆಗ ಏನು ಕುಂದಕವಿತ್ತು? ಹೀಗೆಯೇ ದೊಡ್ಡದೊಡ್ಡ ಪ್ರಾಂತ್ಯಗಳು ಅಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಿರುವ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಇಂಡಿಯಾ ದೇಶದಲ್ಲಿ ಎಲ್ಲಾ ಪ್ರಾಂತ್ಯಗಳಲ್ಲಿಯೂ ಒಂದೇ ರೀತಿ ಪ್ರಜಾ ಸಂಖ್ಯೆ ಇರಬೇಕು. ಒಂದು ಪ್ರಾಂತ್ಯದಲ್ಲಿ ಆರು ಕೋಟಿ, ಇನ್ನೊಂದರಲ್ಲಿ ಕೆಲವೇ ಲಕ್ಷ; ಕೊಡಗೂ ಕೂಡ ಒಂದು ಸಣ್ಣ ಪ್ರಾಂತ್ಯ. ಹೀಗೆ 50 ಲಕ್ಷ, 20 ಲಕ್ಷ, ಮೂರು ಲಕ್ಷ, ಒಂದು ಲಕ್ಷ ಹೀಗಿರಬಾರದು. ಇದರಿಂದ ಆಡಳಿತದ ಖರ್ಚು ಕೂಡ ಜಾಸ್ತಿಯಾಗುತ್ತದೆ. ಆರು ಕೋಟಿ ಪ್ರಜಾಸಂಖ್ಯೆಯಿರುವ ಪ್ರಾಂತ್ಯಕ್ಕೂ ಒಂದು ಶಾಸನ ಸಭೆ, ಹೈಕೋರ್ಟ್; ಒಂದೆರಡು ಲಕ್ಷ ಪ್ರಜಾಸಂಖ್ಯೆ ಇರುವುದಕ್ಕೂ ಇದೇ ರೀತಿ ಇದ್ದರೆ ಎಷ್ಟು ಖರ್ಚಾಗುತ್ತದೆಂಬುದನ್ನು ಯೋಚನೆಮಾಡಬೇಕು. ಆಡಳಿತದ ಅನುಕೂಲ ದೃಷ್ಟಿಯಿಂದ ದೊಡ್ಡ ದೇಶವನ್ನು ಚಿಕ್ಕದು ಮಾಡುವುದೂ, ಚಿಕ್ಕದನ್ನು ದೊಡ್ಡದು ಮಾಡುವುದೂ ಇದೇ ದೃಷ್ಟಿಯಿಂದ. ಈ ವಿಚಾರವನ್ನು ಪುನರ್ವಿಂಗಡಣಾ ಕಮಿಷನ್ನವರೂ ಇಂಡಿಯಾ ಸರ್ಕಾರದವರೂ ಯೋಚನೆಮಾಡಬೇಕು. ಇಂಡಿಯಾ ದೇಶದಲ್ಲಿ ಆಡಳಿತ ದೃಷ್ಟಿಯಿಂದಲೂ ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಎಲ್ಲಾ ಪ್ರಾಂತ್ಯಗಳೂ ಒಂದೇ ಸಮನಾಗಿರಬೇಕೆಂದು ಹೇಳಿದರೆ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ನಾವು ಬೇಡ ಎನ್ನುವುದು, ಅವರು ಬೇಕು ಎನ್ನುವುದು ಇದರಿಂದ ತೊಂದರೆಯಾಗುತ್ತದೆ. ಈ ಕಾರಣಗಳಿಂದ ನಾನು ಸಭೆಯಲ್ಲಿ ಅರಿಕೆಮಾಡುವುದೇನೆಂದರೆ, ನಾವು ಎಲ್ಲ ದೃಷ್ಟಿಯಿಂದಲೂ ಇದನ್ನು ಯೋಚನೆಮಾಡಬೇಕು.

ಅಂಕಿಅಂಶಗಳ ಪರಿಶೀಲನಾ ಸಮಿತಿಯವರು ದೂರದಿಂದ ಜನರು ರೆವಿನ್ಯೂ ಕಮಿಷನರ ಹತ್ತಿರ ಬರಬೇಕಾದರೆ ಕಷ್ಟವಾಗುತ್ತದೆ, ಅದಕ್ಕೆ ಈ ರೀತಿ ಏರ್ಪಾಡುಮಾಡಬೇಕು ಎಂದು ಹೇಳುತ್ತಾರೆ. ಇದನ್ನು ಏಕೀಕರಣವಾಗಬೇಕೆಂಬ ದೃಷ್ಟಿಯಿಂದಲೇ ಹೇಳಿದ್ದಾರೆ. ಇದು ಕೊನೆಯಲ್ಲಿ ನೋಡಿದರೆ ಗೊತ್ತಾಗುತ್ತದೆ. ಏಕೀಕರಣವಾಗಬಹುದೆಂದು ಅವರ ಮನಸ್ಸಿನಲ್ಲಿ ನಾಟಿದೆ. ಅವರು ಇದು ಬೇಕಾಗಿಲ್ಲವೆಂದು ಎಲ್ಲಿಯೂ ಹೇಳಿಲ್ಲ. ಆಗಿಯೇ ಆಗುತ್ತದೆಂದು ಮನಸ್ಸಿನಲ್ಲಿಟ್ಟುಕೊಂಡು, ರೆವಿನ್ಯೂ ಕಮಿಷನರು ಪ್ರವಾಸಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಹೀಗೆಯೇ ಹೈಕೋರ್ಟೂ ದೂರವಾಗುತ್ತದೆ, ಇದಕ್ಕೆ ಯಾವ ಯಾವ ಏರ್ಪಾಡು ಮಾಡಬೇಕು ಏಕೀಕರಣವಾದ ಮೇಲೆ ಎಂಬ ವಿಷಯದಲ್ಲೆಲ್ಲಾ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಎಂ. ಸೀನಪ್ಪ (ಕಬ್ಬನ್‌ಪೇಟೆ).—ಆಗಬೇಕೆಂದು ಅವರು ಹೇಳಿಲ್ಲ, ಆದರೆ ಅನಾನುಕೂಲವೇನು ಎಂಬುದನ್ನು ಹೇಳಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ವರದಿ ನನಗೆ ಅರ್ಥವಾಗಿರುವ ಹಾಗೆ ನಾನು ಹೇಳುವುದಕ್ಕೆ ಧಕ್ಕೆ ಬಂದರೆ ಹೇಗೆ? ಅವರಿಗೆ ಅರ್ಥವಾಗುವ ರೀತಿ ಅವರು ಹೇಳುತ್ತಾರೆ, ನನಗೆ ಅರ್ಥವಾಗಿರುವ ರೀತಿಯಲ್ಲಿ ನಾನು ಹೇಳುತ್ತೇನೆ. ಇದರಲ್ಲಿ ತಪ್ಪೇನೂ ಇಲ್ಲ. ಈ ವರದಿಯಲ್ಲಿ

> "We notice that the present districts are very extensive in point of area. For efficient administration, we think that it would be necessary to reduce the area of the districts and regroup into units of manageable size"

ಎಂದು ಹೇಳುತ್ತಾರೆ. ಇದನ್ನು ಯಾವಾಗ ಮಾಡಬೇಕೆಂದು ಹೇಳುತ್ತಾರೆ? Unification ಆದ ಮೇಲೆ, ತಾನೆ? ಆ ಮೇಲೆ,

> "To facilitate the hearing of Revenue Appeals, the Revenue Commissioner will have to periodically visit the areas to dispose of appeals on the spot."

(ಶ್ರೀ ಆರ್. ಚನ್ನಿಗರಾಮಯ್ಯ.)

ಅದಕ್ಕೇ ಅವರು ಈ ಸಲಹೆಯನ್ನು ಕೊಟ್ಟಿದ್ದಾರೆ. ತಮಗೆ ತೃಪ್ತಿಕರವಾದ ಅಂಶಗಳನ್ನು ತೆಗೆದುಕೊಂಡು ವಾದ ಮಾಡುವುದಕ್ಕೆ ಬದಲು, ಯಾವ ರೀತಿ ಅಪೀಲು ತೀರ್ಮಾನವಾಡಬೇಕು, ಯಾವ ರೀತಿ ಪ್ರವಾಸ ಮಾಡಬೇಕು ಎಂದು ಏಕೆ ಹೇಳಿದರು ? ಅವರ ಮನಸ್ಸಿನಲ್ಲಿ ಇದು ಆಗಿಯೇ ಆಗುತ್ತದೆ ಎಂಬ ಅಭಿಪ್ರಾಯ ಮೂಡಿ ಹೀಗೆ ಹೇಳಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ರೀತಿ ಮಾಡುವುದರಿಂದ ಇಂಥ ತೊಂದರೆಯಾಗುತ್ತದೆಂದು ಹೇಳಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ರೀತಿ ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಆದರೆ ಆ ರೀತಿ ಹೇಳಿಲ್ಲ. ರೆವೆನ್ಯೂ ಅಪೀಲುಗಳನ್ನು ತೀರ್ಮಾನ ಮಾಡಬೇಕಾದರೆ ಯಾವ ರೀತಿ ಮಾಡಬೇಕೆಂದು ಹೇಳಿದ್ದಾರೆ. ಹುಬ್ಬಳ್ಳಿ, ಧಾರ್ವಾಡ ಇಂಥ ಕಡೆಯಿಂದ ಜನ ಬರಬೇಕಾದರೆ ಹೆಚ್ಚು ಖರ್ಚಾಗುತ್ತದೆ; ಆದುದರಿಂದ ಯಾವ ರೀತಿ ಮಾಡಬೇಕೆಂಬುದನ್ನು ಹೇಳಿದ್ದಾರೆ. Unification ಆಗುತ್ತದೆಂದು ಭಾವಿಸಿ ಹೀಗೆ ಹೇಳಿದ್ದಾರೆ.

> ' When the Board of Revenue comes into existence, it will become necessary for the members to periodically itinerate in these areas to dispose of Revenue Appeals"

ಎಂದು ಹೇಳಿದ್ದಾರೆ, ಆಮೇಲೆ

> "We have already indicate the necessity of increasing the strength of the judges of the High Court. To obviate the necessity of litigants coming to Bangalore from these distant places to the High Court. We think that the question of establishing a Bench of the High Court in a Central place in these areas will have to be seriously considered."

ಶ್ರೀಮಾನ್ ಮೂಡಲಗಿರಿಗೌಡರು ಹೇಳಿದ ಕಷ್ಟಕ್ಕೆ ನಿವಾರಣೆಯನ್ನು ಸೂಚಿಸಿದ್ದಾರೆ.

Sri H. C. LINGA REDDY (Malur).—May I draw the notice of the Hon'ble Member to the last para on page 19 ?

ಶ್ರೀ ಆರ್. ಚೆನ್ನಿಗರಾಮಯ್ಯ.—ನಾನು ಕೊನೆಯ ಭಾಗ ಹೇಳುತ್ತಿದ್ದೇನೆ, ತಾವು ಮೊದಲಿನಿಂದಲೂ ಷುರು ಮಾಡಬೇಕೆಂದು ಹೇಳುತ್ತೀರಿ. ತಳಹದಿ ಎಲ್ಲಾ ಆಗಿ ಕಟ್ಟಡ ಕಟ್ಟಿದ ಮೇಲೆ ಏನು ಮಾಡುವುದೆಂದು ಅವರು ಅಭಿಪ್ರಾಯ ಕೊಟ್ಟಿದ್ದಾರೆ. ಆದ ಮೇಲೆ ರೆವಿನ್ಯೂ ಕಮಿಷನರು ಏನು ಮಾಡಬೇಕು, ಹೈಕೋರ್ಟು ಅಪೀಲಿಗೆ ಏನು ಮಾಡಬೇಕು, ಮುಂತಾದುವನ್ನು ಹೇಳಿದ್ದಾರೆ, . . .

ಶ್ರೀ ಎ. ವಿ ನರಸಿಂಹರೆಡ್ಡಿ.—ಇಷ್ಟೊಂದು ಕನ್ನಡ ಪ್ರದೇಶಗಳನ್ನು ಒಟ್ಟು ಗೂಡಿಸಿದರೆ ಎಷ್ಟು ಕಷ್ಟವಿರುತ್ತದೆ ಎಂಬುದನ್ನು ಹೇಳಿದ್ದಾರೆ. ಮಾಡಿದ ಮೇಲೆ ಹೀಗಾಗುತ್ತದೆ ಎಂಬುದಲ್ಲ, ಮಾಡಿದರೆ ಹೀಗಾಗುತ್ತದೆಂದು ಹೇಳಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ತರಹ ಇಲ್ಲಿ ಇಲ್ಲ. ಈ ರೀತಿ ಆದ ಮೇಲೆ ಈ ಏರ್ಪಾಡುಗಳನ್ನು ಮಾಡಿ ಎಂದು ಹೇಳಿದ್ದಾರೆ. ನಾನು ಅರ್ಥಮಾಡಿಕೊಂಡಿರುವ ಹಾಗೆ, ಏಕೀಕರಣ ಆಗಿಯೇ ಆಗುತ್ತದೆ, ಅಂಥ ಸಂದರ್ಭದಲ್ಲಿ ಇಂಥ ಏರ್ಪಾಡುಗಳನ್ನು ಮಾಡಿ ಎಂದು ಹೇಳಿದ್ದಾರೆ. ದೊಡ್ಡ ದೊಡ್ಡ ಸಮಸ್ಯೆಗಳನ್ನು ಶ್ರೀಮಾನ್ ಮೂಡಲಗಿರಿಗೌಡರು ಹೇಳಿದರು; ಅವನ್ನು ಪರಿಹಾರಮಾಡುವುದನ್ನು ಸಮಿತಿಯವರೇ ಹೇಳಿದ್ದಾರೆ. ಅವರು mislead ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಅವರ ವರದಿ ಅಪೂರ್ಣವಾಗಿದೆ, ಎಲ್ಲಾ ಅಂಕಿ ಅಂಶಗಳೂ ಎಲ್ಲಾ ವಿಷಯಗಳಲ್ಲಿಯೂ ಅವರಿಗೆ ಸಿಕ್ಕಿಲ್ಲ. ಅಂಧ್ರವನ್ನು ಪ್ರತ್ಯೇಕಮಾಡಿದಾಗ ಕನ್ನಡಪ್ರಾಂತ್ಯಗಳ ಡಿಸ್ಟ್ರಿಕ್ಟು ವಾರು ಅಂಕಿ ಅಂಶಗಳು ಸಿಕ್ಕಿಲ್ಲ. ಸಾಮಾನ್ಯವಾಗಿ ಒಂದು ಬಡ್ಜೆಟ್ ಮಾಡಬೇಕಾದರೂ ಸಹ 3 ವರ್ಷಗಳ ಆದಾಯವನ್ನೂ ವೆಚ್ಚವನ್ನೂ ನೋಡಿ ಅದರ ಒಂದು ಅಂದಾಜಿನ ಮೇಲೆ budget ತಯಾರುಮಾಡುತ್ತಾರೆ. ಅಂಕಿ ಅಂಶಗಳನ್ನು ತಯಾರುಮಾಡುವಾಗ ಮೂರು ವರ್ಷದ ಅಂಕಿ ಅಂಶಗಳು ಸಿಕ್ಕಲಿಲ್ಲ. ಒಂದು ವರುಷದ ಅಂಕಿ ಅಂಶಗಳ ಆಧಾರದ ಮೇಲೆ ಈ ವರದಿಯನ್ನು ತಯಾರುಮಾಡಿದ್ದಾರೆ ಎಂದು ಹೇಳುತ್ತಾರೆ. ಹಾಗಾದರೆ ಇವು ನಿಜವಾದ ಅಂಕಿ ಅಂಶಗಳೇ, ಇಂತಹ ಅಂಕಿ ಅಂಶಗಳ ಆಧಾರದ ಮೇಲೆ ನಮ್ಮ ಅಭಿಪ್ರಾಯವನ್ನು ಕೊಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಎಲ್ಲ ಅಂಕಿ ಅಂಶಗಳೂ ಸಿಕ್ಕಿದ ಮೇಲೆ ಅವುಗಳನ್ನು ಚರ್ಚೆಮಾಡಿ ಅದರಿಂದ ನಮಗೆ ಅನುಕೂಲವೇ ಅಥವಾ ಅನಾನುಕೂಲವೇ ಎಂಬುದನ್ನು ನೋಡಿಕೊಂಡು ನಮ್ಮ ಅಭಿಪ್ರಾಯವನ್ನು ಕೊಡಬಹುದು. ಈ ರಿಪೋರ್ಟನ್ನು ನೋಡಿ ನಾವು ಮನಸ್ಸಿನಲ್ಲಿ ಅಷ್ಟು ಭೀತಿಪಡಬೇಕಾಗಿಲ್ಲ. ಈ ವಿಚಾರದಲ್ಲಿ ಕೆಲವು ದೊಡ್ಡ ದೊಡ್ಡ ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. 1945ನೇ ಇಸವಿ ಲಾಗಾಯತು ಅನೇಕ ದೊಡ್ಡ ದೊಡ್ಡ ಮಹನೀಯರು ಅಂಕಿ ಅಂಶಗಳ ಮೂಲಕ ಅಭಿಪ್ರಾಯ ಕೊಟ್ಟಿದ್ದಾರೆ. ಜವಹರ್‌ಲಾಲ್ ನೆಹರೂ ಅವರ ಅಭಿಪ್ರಾಯ, ಸರದಾರ್ ಪಟೇಲರ ಅಭಿಪ್ರಾಯಗಳನ್ನು memorandum ನಲ್ಲಿ ಪ್ರಿಂಟ್ ಮಾಡಿರುವುದು ಸರಿಯಲ್ಲ. ಅವು ತಪ್ಪು ಎಂದು ಹೇಳಿದರೆ ನಾನು ಜವಾಬ್ದಾರನಲ್ಲ. ಇದನ್ನು ಜವಾಬ್ದಾರರಾಗಿರತಕ್ಕಂಥ ದೊಡ್ಡ ದೊಡ್ಡ ವ್ಯಕ್ತಿಗಳು ಪ್ರಿಂಟ್ ಮಾಡಿಸಿದ್ದಾರೆ. Chief Minister ಸಹ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇವೊತ್ತಿನ ದಿವಸ ಅವರು ತಮ್ಮ ಅಭಿಪ್ರಾಯಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಅವರು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೋದರೆ ನಾವು ಜವಾಬ್ದಾರರಲ್ಲ.

ಶ್ರೀ ಎನ್. ಸಿದ್ದಪ್ಪ (ಚನ್ನಗಿರಿ).—ವಾಪಸ್ಸು ತೆಗೆದುಕೊಳ್ಳುವುದಾದರೆ ಮೈಸೂರಿನ ಕೀರ್ತಿಗೆ ಧಕ್ಕೆ ಬರುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಬ್ಬರು ಆ ರೀತಿ ಮಾಡಿದರೆ ಧಕ್ಕೆ ಬರುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ವ್ಯಕ್ತಿತ್ವ ಮತ್ತು, ವೈಶಿಷ್ಟ್ಯ ಇದನು ಅವಲಂಬಿಸಿದೆ. ವೈಶಿಷ್ಟ್ಯವಿಲ್ಲದೆ ಇದ್ದರೂ ವ್ಯಕ್ತಿತ್ವಕ್ಕಾದರೂ ಇದರಿಂದ ಧಕ್ಕೆ ಬರುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಧಿಕೃತವಾಗಿ Chief Ministerರವರು ಹೋದಸಾರಿ budget ಭಾಷಣದಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಕರ್ನಾಟಕದ ಇತರ ಭಾಗಗಳಿಗೆ ಹೋಗಿ ಅಲ್ಲಿ ಸ್ಥಳದಲ್ಲೇ ಈ ವಿಚಾರದಲ್ಲಿ Chief Minister ಭಾಷಣ ಮಾಡಿದ್ದಾರೆ. ಆ ಸಂದರ್ಭದಲ್ಲಿ Chief Minister ಹೇಳಿರುವುದು ಗೊತ್ತಿದೆ. ಅವರು ಅಭಿಪ್ರಾಯವನ್ನು ಬದಲಾಯಿಸುತ್ತಾರೋ ಇಲ್ಲವೋ ಎಂಬುದನ್ನು ನಾನಂತೂ ಹೇಳಲಾರೆ. ಅವರು ಒಂದುವೇಳೆ ಹಾಗೆ ಬದಲಾಯಿಸಿದರೂ ನಮ್ಮ ಸರ್ಕಾರಕ್ಕೆ ನಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಏನು ತೊಂದರೆ? ವೈಯುಕ್ತಿಕವಾಗಿ ಚೀಫ್ ಮಿನಿಸ್ಟರ್ ಅಭಿಪ್ರಾಯವಲ್ಲ, ಮಂತ್ರಿಗಳ ಅಭಿಪ್ರಾಯವಲ್ಲ, ಒಬ್ಬ ಸದಸ್ಯರ ಅಭಿಪ್ರಾಯವಲ್ಲ. ಇಡೀ ದೇಶದ ಪರವಾಗಿ ಈ ಸಭೆ ಇದೆ. ಈ ಸಭೆಯವರು ಅಂಕಿ ಅಂಶಗಳನ್ನು ಮತ್ತು ಪ್ರತಿಯೊಂದು ವಿಚಾರವನ್ನೂ ಪರಿಶೀಲನೆಮಾಡಿ ತಮ್ಮ ಅಭಿಪ್ರಾಯವನ್ನು ಯಾವರೀತಿ ಕೊಡುತ್ತಾರೋ ಅದರಮೇಲೆ ಹೋಗುತ್ತದೆ. ಒಬ್ಬ ವ್ಯಕ್ತಿಯ ಮೇಲೆ ಹೋಗುವುದಿಲ್ಲ. ಈ ಕಾರಣದಿಂದ ಅನೇಕ ದೊಡ್ಡ ದೊಡ್ಡ ನಾಯಕರು ಈ ವಿಚಾರದಲ್ಲಿ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದೂ ಪ್ರಿಂಟ್ ಆಗಿದೆ. ಅವರ ಅಭಿಪ್ರಾಯ ಸಾಮಾನ್ಯವಾಗಿ ನೋಡಿದ ಪಕ್ಷದಲ್ಲಿ Unification ಆಗಬೇಕೆಂದು ಹೇಳುತ್ತಿದ್ದಾರೆ. ಕರ್ನಾಟಕ Unification ಮಾಡುವುದಕ್ಕೆ ಬದಲಾಗಿ Reorganisation of States ಮಾಡಿದರೆ ಬಹಳ ಮಟ್ಟಿಗೆ ಅನೇಕರಿಗೆ ಸಮಾಧಾನವಾಗಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ದೊಡ್ಡ ದೊಡ್ಡವರು ನಿಧಾನವಾಗಿ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—1940ನೇ ಇಸವಿಯಿಂದಲೂ ಹೇಳುತ್ತಿದ್ದೇವೆ. ಹತ್ತು ವರ್ಷ ಕಳೆದು ಹೋಗಿದೆ. ಅದರಿಂದ ನಿಧಾನವಾದಂತೆ ಆಗಲಿಲ್ಲವೇ? ಈಗ ಸ್ವಲ್ಪ ತೀರ್ಮಾನಮಾಡತಕ್ಕಂಥ ಕಾಲ ಬಂದಿದೆ. ಫಸಲಾಲಿ ಕಮಿಷನ್ನನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದಮೇಲೆ ಇಡೀ ದೇಶವನ್ನು ಅವರು ಸುತ್ತಿ ಅಲ್ಲಿನ ಅಭಿಪ್ರಾಯಗಳನ್ನು ತೆಗೆದುಕೊಂಡು ಅಂಕಿ ಅಂಶಗಳನ್ನು ಶೇಖರಣೆ ಮಾಡಿ ತೀರ್ಮಾನ ಕೊಡತಕ್ಕಂಥ ಕಾಲದಲ್ಲಿ, ನಿಧಾನವಾಗಿ ಹೀಗೆ ತೀರ್ಮಾನ ಮಾಡಿದಮೇಲೆ, ಇನ್ನೂ ನಿಧಾನಮಾಡಿ ಎಂದು ಹೇಳಿದರೆ ಅದರಿಂದ ಏನು ಪ್ರಯೋಜನ?

Sri M. PALANIYAPPAN (Ulsoor).—Will the Government of Hyderabad agree to split their State into three parts?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೈದರಾಬಾದ್ ಸರ್ಕಾರದವರು ಒಪ್ಪುತ್ತಾರೆ. ಸರ್ಕಾರದಲ್ಲಿರತಕ್ಕಂಥ ಮಂತ್ರಿಗಳೂ ಜನಗಳ ಪ್ರತಿನಿಧಿಗಳೂ ಜನರ ಇಷ್ಟಾನುಸಾರವಾಗಿ ತೀರ್ಮಾನ ಮಾಡದಿದ್ದರೆ ಅವರ ತೀರ್ಮಾನಕ್ಕೆ ಬಿಡತಕ್ಕಂಥ ಪ್ರಮೇಯವಿಲ್ಲ. ಪ್ರಜೆಗಳು ಮಾಡತಕ್ಕಂಥದ್ದನ್ನು ನಮ್ಮ ಸರ್ಕಾರ ಒಪ್ಪಬೇಕಾಗಿದೆ. ಪ್ರಜೆಗಳ ಅಭಿಪ್ರಾಯಕ್ಕೆ ತಕ್ಕಂತೆ ಮಂತ್ರಿಗಳು ಹೋಗಬೇಕಾಗಿದೆ. ಹಾಗೆ ಒಂದುವೇಳೆ ಅವರು ಪ್ರಜಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಹೋದರೆ ಅವರೇ ಆ ಜಾಗವನ್ನು ಬಿಡಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸಿಗೌಡ (ಹುಲಿಯೂರುದುರ್ಗ).—ಮೈಸೂರು ದೇಶಕ್ಕೆ ಅದು ಅನ್ವಯಿಸುವುದಿಲ್ಲವೇ? ಮಂತ್ರಿಮಂಡಲದವರು ಈ ಸಭೆಗೆ ವ್ಯತಿರಿಕ್ತವಾಗಿ ನಡೆದರೆ ಆಗ ಜಾಗ ಬಿಟ್ಟು ಹೋಗುತ್ತಾರೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದ ರೀತಿಯಲ್ಲಿ ನಾನು ಹೇಳಿದುದು ಮೈಸೂರಿಗೂ ಅನ್ವಯಿಸುತ್ತದೆ. ಇದು ಮೈಸೂರಿಗೆ ಸಂಬಂಧಪಟ್ಟಿದ್ದಲ್ಲ. ಅದು Cabinet ಕೊಡತಕ್ಕ ಅಭಿಪ್ರಾಯವಲ್ಲ. ಸರಕಾರದಲ್ಲಿರತಕ್ಕಂಥ ಮಂತ್ರಿಗಳು ನಮ್ಮ ಹಾಗೆ ಜವಾಬ್ದಾರಿಯಿಂದ ಅಭಿಪ್ರಾಯ ಪಡೆಯಬಹುದು. ಒಂದುವೇಳೆ ಕೇಂದ್ರ ಸರ್ಕಾರದ Home Ministerರವರು ಮೈಸೂರಿನ ಅಭಿಪ್ರಾಯ ಏನು ಎಂದು ಕೇಳಿದರೆ ಆಗ ನಾವು ಕೊಡಬಹುದು. I can understand the Government then taking the Cabinet decision. Neither the Reorganisation Commission nor the Central Government Home Ministry have asked this Government or the Hyderabad Government to give their opinion. The Ministers are free to give their opinion irrespective of their capacity and irrespective of party affiliations ಅವರಿಗೆ ಧೈರ್ಯವಿಲ್ಲದೆ ಹೋದರೆ ನಮ್ಮ ಅಭಿಪ್ರಾಯಗಳನ್ನು ಉಪಯೋಗಿಸಿಕೊಂಡು ಅವರ ಅಭಿಪ್ರಾಯಗಳನ್ನು ಕೊಡಲಿ. ಅದಕ್ಕೂ ಬೇಡವೆಂದು ಹೇಳುವುದಿಲ್ಲ. ಈ ಕಾರಣಗಳಿಂದ ಎಲ್ಲಾ ದೃಷ್ಟಿಯಿಂದಲೂ ನೋಡಿದರೆ ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಬೆಂಬಲ ಕೊಡತಕ್ಕದ್ದು ಸರಿಯಾಗಿದೆ. ಇದನ್ನು ಮಾಡುವುದರಿಂದ ಆಗಬಾರದ ಅನಾಹುತಗಳು ಆಗುತ್ತವೆ, ಅಭಿವೃದ್ಧಿ ಕಾರ್ಯಗಳು ನಿಂತುಹೋಗುತ್ತವೆ, ಮತ್ತು ಬಹಳ ತೊಂದರೆಯಾಗುತ್ತದೆ ಎಂದು ಸದಸ್ಯರು ಯಾರಾದರೂ ಸಾಕಾದಷ್ಟು ಕಾರಣಗಳನ್ನು ಕೊಟ್ಟರೆ ಆಗ ನಾನು ನನ್ನ ಅಭಿಪ್ರಾಯವನ್ನು ಮಾರ್ಪಾಡು ಮಾಡಲು ಸಿದ್ಧನಾಗಿದ್ದೇನೆ. ಇದುವರೆಗೂ ಮಾತನಾಡಿರತಕ್ಕಂಥ ಸ್ನೇಹಿತರ ವಾದಗಳನ್ನು ಕೇಳಿದೆ. ಆದರೆ ಅಂತಹ ಪ್ರಬಲವಾದ ವ್ಯತಿರಿಕ್ತವಾದಂಥ ಯಾವ ಕಾರಣಗಳೂ ಕಂಡುಬರಲಿಲ್ಲ. ಶ್ರೀಮಾನ್ ಟಿ. ಎನ್. ಮುಡಲಗಿರಿಗೌಡರು ಮತ್ತು ಇನ್ನು ಕೆಲವು ಸ್ನೇಹಿತರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಅವರು ಮಾತನಾಡಿರುವುದು ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆ. ಈ ಕಾರಣಗಳಿಂದ ನಮ್ಮ ಸ್ನೇಹಿತರು ಕರ್ನಾಟಕ ಪ್ರಾಂತರಚನೆಗೆ ಬೆಂಬಲ ಕೊಡಬೇಕೆಂದು ವಿನಯದಿಂದ ಹೇಳುತ್ತೇನೆ.

Sri K. PUTTASWAMY (Sreerangapatna).—I just want to point out a mistake of fact which the Hon'ble Member who spoke last has committed. The figures of revenue receipts quoted above include a share of the income-tax, Central Excise duties out of the divisible pool; 80 per cent of the share of the State Government of income-tax has been distributed among the Districts on the basis of the population and the remaining on the basis of collection. The Central Excise and Tobacco duties have been distributed on population basis. But Sri R. Chennigaramiah sought to make out that the Seshadri Committee had not taken these revenues into consideration.

(SRI K. PUTTASWAMY.)

while arriving at their conclusion, and that therefore the figures relating to Bombay Kannada Districts showed a deficit.

Sri R. CHENNIGARAMIAH.—The common earnings or interest earnings, contribution from Railways, lending of police, and receipts in respect of superannuation, receipts in respect of stationery and printing, receipts from Road Transport, receipts from the Government of India on account of community development projects, receipts in respect of Grow More Food scheme and other agricultural schemes and so on have not been taken into consideration.

Sri K. PUTTASWAMY.—All those things amount to grant and not revenue.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇಡೀ ಕರ್ಣಾಟಕದ ಎರಡು ಕೋಟಿ ಪ್ರಜಾಸಂಖ್ಯೆ ಇರುವ ಜನಗಳ ಮೇಲೆ ಪ್ರಭಾವಯುತವಾದ ವಾತಾವರಣವನ್ನು ಬೀರತಕ್ಕ ಪ್ರಶ್ನೆ. ಬಹಳ ಜವಾಬ್ದಾರಿಯನ್ನು ಅರಿತು ಮಾತನಾಡತಕ್ಕ ಪ್ರಶ್ನೆಯೆಂದು ತಿಳಿದುಕೊಂಡಿದ್ದೇನೆ. ನಾನು ಅಂಕಿ ಅಂಶಗಳಿಗೆ ಹೋಗುವುದಿಲ್ಲ. ಅನೇಕ ಮಹನೀಯರು ಮಾತನಾಡಿದ್ದಾರೆ. ಶೇಷಾದ್ರಿ ಕಮಿಟಿಯ ವರದಿಯನ್ನು ನಾನು ನಂಬುವುದಕ್ಕೆ ಆಗುವುದಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಬೊಂಬಾಯಿ ದೇಶದ Vice-Chairman ಆಗಿರತಕ್ಕಂಥ ಎಸ್. ಆರ್. ಕಂಠಿಯವರು ಅಂಕಿಅಂಶಗಳಿಂದ ಸಮರ್ಥಿಸಿದ್ದಾರೆ. ಅವರು ಜವಾಬ್ದಾರಿ ಇರತಕ್ಕಂಥ ಒಬ್ಬ ಮಹನೀಯರು. ಇಡೀ ಒಂದು ದೊಡ್ಡ ಬೊಂಬಾಯಿ ಪ್ರಾಂತ್ಯದಲ್ಲಿ ರಾಜ್ಯಭಾರ ಮಾಡತಕ್ಕಂಥ ಮಹನೀಯರೊಬ್ಬರ ಹೇಳಿಕೆಯನ್ನು ನಂಬೋಣವೇ ಅಥವಾ ಮೈಸೂರು ಸರ್ಕಾರದವರು ನೇಮಿಸಿರತಕ್ಕಂಥ ಸಮಿತಿಯವರ ಅಂಕಿಅಂಶಗಳನ್ನು ನಂಬೋಣವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಶೇಷಾದ್ರಿ ಕಮಿಟಿಯವರು ಅನೇಕ ಅಂಶಗಳ ವಿವರಗಳನ್ನು ಪೂರ್ತಿಯಾಗಿ ಕೊಟ್ಟಿಲ್ಲವೆಂದು ಅನೇಕ ಮಹನೀಯರು ಹೇಳಿದ್ದಾರೆ. ಅದಕ್ಕೇನೂ ಅನುಮಾನವಿಲ್ಲ. ಒಂದು ವರುಷದ ಅಂಕಿಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಕೆಲವು ಭಾಗದ ಅಂಕಿಅಂಶಗಳನ್ನು ಕೊಟ್ಟಿಲ್ಲ. ನಮ್ಮ ಕಾಂಗ್ರೆಸ್ಸಿನವರು ಜವಾಬಾರೀ ಸರ್ಕಾರ ಬರುವುದಕ್ಕೆ ಮುಂಚೆ ಏನು ವಚನ ಕೊಟ್ಟಿದ್ದರೋ ಈಗ ಅದನ್ನು ಪರಿಪಾಲಿಸದೆ ಹೋದರೆ ವಚನಭ್ರಷ್ಟರಾಗಬೇಕಾದ ಸಂದರ್ಭಬಂದಿದೆ. M.P.C C. ಬೇಲೂರು ಅಧಿವೇಶನದಲ್ಲಿ ಸೇರಿದ್ದಾಗ ಅಲ್ಲಿನ ಅನೇಕ ದೊಡ್ಡ ಕಾಂಗ್ರೆಸ್ ಮುಖಂಡರುಗಳೂ, M.P.C.C. ಮೆಂಬರುಗಳೂ ಮತ್ತು Working Committee ಸದಸ್ಯರುಗಳೂ ಅಖಂಡ ಕರ್ಣಾಟಕವಾಗಬೇಕು, ಮೈಸೂರು ಪ್ರದೇಶಕ್ಕೆ ಎಲ್ಲಾ ಹೊರಪ್ರಾಂತಗಳೂ ಬಂದು ಸೇರಬೇಕೆಂದು ತೀರ್ಮಾನ ಮಾಡಿದ್ದರು. ಅದು ನಮ್ಮ ತಾಲ್ಲೋಕಿನಲ್ಲಿ ಆದ ಪ್ರಶ್ನೆ. ನಮ್ಮ ಅನುಭವದ ಮಾತು. ಈ ದಿವಸ ನಮಗೆ ಮೈಸೂರು ದೇಶದ ಜನಗಳಲ್ಲಿ ಈ ತರಹ ಒಂದು ಒಡಕು ಬಂದುದು ನೋಡಿದರೆ ನನಗಂತೂ ಆಶ್ಚರ್ಯಕರ ಮತ್ತು ಬಹಳ ವಿಷಾದಕರ. ಅಂತಹ ಒಡಕು ಬರಬಾರದಾಗಿತ್ತು. ನಿನ್ನೆ ಅನೇಕ ಜನ ಸ್ನೇಹಿತರು ಮಾತನಾಡುವಾಗ ಅನೇಕವಿಧವಾಗಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನಾನೂ ಕೂಡ ಕೆಲವು ಅಭಿಪ್ರಾಯಗಳನ್ನು ಕೊಡಲು ಇಚ್ಛಿಸುತ್ತೇನೆ. ಮೊನ್ನೆ ದಿವಸ ಶ್ರೀ ಕೆ. ಲಕ್ಕಪ್ಪನವರು ಮಾತನಾಡುವಾಗ ಅಖಂಡ ಕರ್ಣಾಟಕವಾದರೆ ಎರಡು ಕೋಟಿ ಜನಸಂಖ್ಯೆ ಸೇರಬೇಕಾಗುತ್ತದೆ ಎಂದು ಹೇಳಿದರು. ಈಗ ಇಲ್ಲಿ ಸೇರಿರತಕ್ಕಂಥ ಅನೇಕ ಸದಸ್ಯರು ಅಖಂಡ ಕರ್ಣಾಟಕದಲ್ಲಿ ಸ್ನೇಹ ಮಾಡಿದ್ದಾರೆ. ಮತ್ತು ಹೆಣ್ಣೂ ಗಂಡೂ ಕೊಟ್ಟು ಸಂಬಂಧವನ್ನೂ ಬೆಳೆಸಿದ್ದಾರೆ. ಇದರ ಸಂಬಂಧ ಹೇಗಿದೆಯೆಂದರೆ ಹೆಣ್ಣಿನ ಮನೆಗೆ ಗಂಡು ಹೋಗಬೇಕು, ಗಂಡಿನ ಮನೆಗೆ ಹೆಣ್ಣು ಹೋಗಬೇಕು ಎಂಬುದಾಗಿದೆ. ಹೀಗಿರುವಾಗ ಹೆಣ್ಣು ಗಂಡಿನ ಮನೆಗೆ ಹೋಗಬೇಡವೇ? ಗಂಡು ಹೆಣ್ಣಿನ ಮನೆಗೆ ಹೋಗಬೇಡವೇ? ಅಖಂಡ ಕರ್ಣಾಟಕವಾಗದೆ, ಹುಬ್ಬಳ್ಳಿ, ಧಾರವಾಡ, ಕೊಡಗು ಪ್ರಾಂತ್ಯಗಳಲ್ಲಿ ನಾವು ಬೆಳೆಸಿರತಕ್ಕಂಥ ಸಂಬಂಧ ಏನಾಗಬೇಕು? ಮೈಸೂರು ಇಷ್ಟೇ ಇರಲಿ, ಹೊರಗಿನ ಪ್ರಾಂತಕ್ಕೆ ಹೋಗುವುದಿಲ್ಲವೆಂದು ಹೇಳುವುದಾದರೆ ಇದರಿಂದ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಯೋಚನೆಮಾಡಿ. ಈ ವಿಚಾರದಲ್ಲಿ ಶ್ರೀಮಾನ್ ಆರ್. ಚೆನ್ನಿಗರಾಮಯ್ಯನವರು ಸೊಗಸಾಗಿ ಹೇಳಿದರು. ಸಣ್ಣ ಪಂಚಾಯಿತಿ ಯಾವ ರೀತಿ ಕಾರುಬಾರು ಮಾಡುತ್ತಾರೋ ಮುನಿಸಿಪಾಲಿಟಿ ಯಾವರೀತಿ ಕಾರುಬಾರು ಮಾಡುತ್ತಾರೋ ಅದೇ ರೀತಿ ನಾವು ಮೈಸೂರು ದೇಶವನ್ನು ಈಗಿರುವ ರೀತಿ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದರು. ಮೈಸೂರು ಮುನಿಸಿಪಾಲಿಟಿಗೆ ಶ್ರೀ ಪುಟ್ಟಸ್ವಾಮಿಯವರು ಅಧ್ಯಕ್ಷರು. ಅವರಿಗೆ ಆ ಮುನಿಸಿಪಾಲಿಟಿಯಿಂದ ಕೇವಲ 12 ರೂಪಾಯಿ ವರಮಾನ ಬಂದರೆ ಅವರು ಆ ಸ್ಥಳಕ್ಕೆ ಏನು ಅನುಕೂಲಗಳನ್ನು ತಾನೇ ಮಾಡಿಕೊಟ್ಟಾರು?

ಶ್ರೀ ಕೆ. ಪುಟ್ಟಸ್ವಾಮಿ.—ಸಾವಿರ ರೂಪಾಯಿ ವರಮಾನ ಬರುವವರ ಹತ್ತಿರ 12 ರೂಪಾಯಿ ವರಮಾನ ಬರುವವರನ್ನು ತೆಗೆದುಕೊಂಡು ಬರುವ ಪ್ರಶ್ನೆ ಇದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಂತಹ ಸಂಕುಚಿತ ಭಾವನೆ ಇಟ್ಟುಕೊಂಡು ಕೆಲವರು ನಮ್ಮ ಮೈಸೂರು ದೇಶ ಇಷ್ಟೇ ಇರಲಿ ಹೊರಗಡೆ ಹೋಗಬಾರದು ಎಂದು ಹೇಳಿದರು. ಕೆಲವು ಸ್ನೇಹಿತರು ಕೊಡಗು ದೇಶ ಬೇಕಾದರೆ ಬರಲಿ ಎಂದು ಹೇಳಿದರು. ಇನ್ನು ಕೆಲವರು ಒಂದು ಅಂಗುಲವೂ ಕೂಡ ನಮಗೆ ಸೇರಬಾರದೆಂದು ಹೇಳಿದ್ದಾರೆ. ಇಂಡಿಯಾ ಸರ್ಕಾರದವರು ಫಸಲಾಲಿ ಸಮಿತಿಯನ್ನು ಮಾಡಿದಾಗ ಯಾರನ್ನೂ ಕೂಡ ಕೇಳಿ ಮಾಡಲಿಲ್ಲ. ಆ ಸಮಿತಿಯವರು ತಮ್ಮ ಕಾರುಬಾರನ್ನು ಮಾಡಿಯೇ ಮಾಡುತ್ತಾರೆ. ಕರ್ಣಾಟಕ ಪ್ರಾಂತ್ಯ ಆಗಿಯೇ ಆಗುತ್ತದೆ. ಯಾರೂ ಕರ್ಣಾಟಕ ಪ್ರಾಂತ್ಯ ಆಗುವುದು ಬೇಡವೆಂದು ಹೇಳಿದರೂ ಕೂಡ ಅದು ಆಗಿಯೇ ಆಗುತ್ತದೆ. ಬಳ್ಳಾರಿಯನ್ನು ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಸುವಾಗ ಈ ಸಭೆಯ ಮಾನ್ಯ ಸದಸ್ಯರನ್ನು ಯಾರೂ ಕೇಳಲಿಲ್ಲ. ಬಳ್ಳಾರಿಯನ್ನು ಸೇರಿಸಿಕೊಳ್ಳಿ ಎಂದು ಕೇಂದ್ರ ಸರ್ಕಾರದವರು ಹೇಳಿ

ದಾಗ ನಾವು ಅದಕ್ಕೆ ಒಪ್ಪಿಗೆ ಸಂಪೂರ್ಣವಾಗಿ
ಕೊಡಬೇಕಾಯಿತು. ಅದೇ ರೀತಿ ಫಸಲಾಲಿ ಸಮಿತಿ
ಯವರು ಅವರ ಕೆಲಸವನ್ನು ಅವರು ಮಾಡಿಯೇ
ಮಾಡುತ್ತಾರೆ. ಕರ್ಣಾಟಕ ಏಕೀಕರಣವಾಗಿಯೇ
ಆಗುತ್ತದೆ. ಇದರಲ್ಲಿ ಏನೂ ಅನುಮಾನವೇ ಇಲ್ಲ.

ಅನೇಕ ಸ್ನೇಹಿತರು ಕರ್ಣಾಟಕದಲ್ಲಿ ಪಾಠಶಾಲೆ
ಗಳು ಅಷ್ಟಿಲ್ಲವೆಂದು ಹೇಳಿದರು, ಕೆಲವರು ಏನೂ ಇಲ್ಲ
ವೆಂದೇಹೇಳಿದರು. ಬೊಂಬಾಯಿ ಪ್ರಾಂತ್ಯದಲ್ಲಿ ನೋಡು
ವುದಾದರೆ ಶೇಕಡ 22.2 ರಷ್ಟು ಅಕ್ಷರಸ್ಥರಿದ್ದಾರೆ.
ಮೈಸೂರಿನಲ್ಲಾದರೋ ಇರುವುದು ಶೇಕಡ 20. ನಾನು
ಇಡೀ ಕರ್ಣಾಟಕವನ್ನೆಲ್ಲಾ ಪ್ರವಾಸಮಾಡಿ ನೋಡಿ
ದ್ದೇನೆ. ಅಲ್ಲಿನ ಸಾರ್ವಜನಿಕರು ಸುಮಾರು ಎರಡು
ಲಕ್ಷ, ಮೂರು ಲಕ್ಷ ಹಾಕಿ ಒಂದೊಂದು ಕಾಲೇಜನ್ನು
ಕಟ್ಟಿದ್ದಾರೆ. ನಮ್ಮ ದೇಶದಲ್ಲಿ ಒಂದು ಸ್ಕೂಲು
ಕೊಡಬೇಕು ಎಂದರೆ ಸರ್ಕಾರವೇ ಸಹಾಯಮಾಡ
ಬೇಕು, ನಾವೆಲ್ಲಾ ಬಡಜನರು ಎನ್ನುವ ಸ್ಥಿತಿಯಲ್ಲಿ
ದ್ದೇವೆ; ಕರ್ಣಾಟಕದಲ್ಲಿರುವ ಒಂದೊಂದು ಕಾಲೇ
ಜಿನ ಬೆಲೆ ನಮ್ಮ ಹೈಸ್ಕೂಲು ಮಿಡ್ಲ್‌ಸ್ಕೂಲುಗಳೆಲ್ಲ
ವನ್ನೂ ಸೇರಿಸಿದರೂ ಬರುವುದಿಲ್ಲ. ಈಹೊತ್ತು ಇಲ್ಲಿ
ವಾದಮಾಡುತ್ತಿರುವ ಜನ, ಅಲ್ಲಿ ಸಾರ್ವಜನಿಕರು
ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಚಂದಾ ಹಣ
ದಿಂದ ಕಾಲೇಜನ್ನು ನಿರ್ಮಿಸಿರುವುದನ್ನು ನೋಡ
ಬೇಕು. ಇದನ್ನು ನೋಡಿದರೇ, ಅಲ್ಲಿನ ಜನ ಬಹಳ
ವಾಗಿ ಮುಂದುವರಿದಿದ್ದಾರೆಂಬುದು ಅರಿವಾಗುತ್ತದೆ.
ನಮ್ಮ ಕಡೆ ಹಾಗಲ್ಲ. ನಮ್ಮ ಜನರು ಹೊಟ್ಟೆಗೆ ಹಿಟ್ಟಿಲ್ಲ
ದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವವರು.
ಬೆಂಗಳೂರು ಮೈಸೂರಿನಲ್ಲಿರತಕ್ಕ ಅನುಕೂಲ
ಹಳ್ಳಿಯಕಡೆ ಇಲ್ಲ. ನಮ್ಮ ಹಳ್ಳಿಗಳಕಡೆ ಸುಖ
ಸಂತೋಷವಿಲ್ಲ, ಏಕೆಂದರೆ, ನಮ್ಮ ದೇಶದಲ್ಲಿ
ಕಂಟ್ರೋಲ್ ಇದ್ದಾಗ 7-8 ಕೋಟಿ ರೂಪಾಯಿಗಳ
ದವಸವನ್ನು ಹೊರಗಿನಿಂದ ತರಿಸಿದರು. ಅದೇ ಧಾರ
ವಾಡ ಹುಬ್ಬಳ್ಳಿಕಡೆ ನೋಡಿ. ಅಲ್ಲಿ ಒಂದು ಪ್ರಾಂತ್ಯದಲ್ಲಿ
ಬೆಳೆಯತಕ್ಕ ಜೋಳ ಇಡೀ ಮೈಸೂರು ದೇಶವನ್ನೇ
ಕಾಪಾಡಬಲ್ಲದು. ಕರ್ಣಾಟಕದಲ್ಲಿ ಬೆಳೆಯತಕ್ಕ ದವಸ
ಇಡೀ ಮೈಸೂರು ದೇಶವನ್ನೇ ಕಾಪಾಡಬಲ್ಲದು.
ಶ್ರೀಮಾನ್ ಶಿವನಂಜೇಗೌಡರು ‘ಯಾಕಪ್ಪಾ ಹೀಗಾಡು
ತ್ತಾರೆ ಇವರು’ ಎಂದರು. ಒಂದು ಉದಾಹರಣೆ
ಹೇಳುತ್ತೇನೆ. ನಾಲ್ಕು ಜನ ಅಣ್ಣತಮ್ಮಂದಿರು ಒಟ್ಟಿ
ಗಿದ್ದರೆ ಹೇಗಿರುತ್ತದೆ, ಒಬ್ಬರೇ ಇದ್ದರೆ ಹೇಗಿರುತ್ತದೆ
ನೋಡಿ. ನಮ್ಮ ಮಾನ್ಯ ಸ್ನೇಹಿತರು ಅನೇಕರು ಹೇಳಿ
ದ್ದಾರೆ, ಒಡೆದುಹೋಗಿದ್ದ ದೇಶ ಅನ್ಯಾಯವಾಗುತ್ತಿದೆ
ಎಂದು. ನಾವೆಲ್ಲರೂ ಮತ್ತೊಮ್ಮೆ ಸೇರಿದರೆ ಆ
ಸಂತೋಷಕ್ಕೆ ಎಣೆಯಿರುವುದಿಲ್ಲ. ಮದುವೆಯಾಗದಿ
ರುವ ಒಬ್ಬಂಟಿಗನ ಸುಖವನ್ನೂ ನೋಡಿ, ಮದುವೆ
ಯಾಗಿ ಹೆಂಡಿರಿಂದ ಕೂಡಿದ ಸಂಸಾರಿ ಎಷ್ಟು ಸಂತೋ
ಷದಿಂದಿರುತ್ತಾನೆ ನೋಡಿ. ಮೈಸೂರಿನ ಒಂದು
ಕೋಟಿ ಜನತೆಯ ಜೊತೆಗೆ ಇನ್ನೊಂದು ಕೋಟಿ ಜನತೆ
ಸೇರಿದರೆ ಮೈಸೂರಿಗೆ ಹಿರಿಮೆಯಲ್ಲವೇ? ದೊಡ್ಡ
ದೊಡ್ಡ ಪ್ರಾಂತ್ಯಗಳಾಗಬೇಕೆಂದು ಇಂಡಿಯಾ ಸರ್ಕಾ
ರದವರೇ ಸುಮಾರು 560ರಷ್ಟಿದ್ದ ಸಣ್ಣಪುಟ್ಟ ಸಂಸ್ಥಾ
ನಗಳನ್ನೆಲ್ಲಾ ತೆಗೆಯಲಿಲ್ಲವೇ? ಹಿಂದೆ 560 ಪುಟ್ಟ
ಪುಟ್ಟ ಸಂಸ್ಥಾನಗಳು ಇಂಡಿಯಾ ದೇಶದಲ್ಲಿತ್ತು.
ಅವೆಲ್ಲವನ್ನೂ ಆಡಳಿತ ದೃಷ್ಟಿಯಿಂದ ಇಂಡಿಯಾ ಸರ್ಕಾ
ರದವರು ಒಂದುಗೂಡಿಸಲಿಲ್ಲವೇ? ಹೀಗಿರುವಾಗ
ಈಗ ಕಾಲವೊದಗಿರುವಾಗ ನಮ್ಮ ಮೈಸೂರಿನ ಕೆಲ
ಮಂದಿ ನಮ್ಮ ಮೈಸೂರು ಹೊರಗಡೆ ಒಂದು ಇಂಚು
ಕೂಡ ಹೋಗಕೂಡದೆಂದು ಹೇಳುವ ವಾದ ಎಷ್ಟು
ಸಮಂಜಸವಾಗಿರುತ್ತದೆಂಬುದನ್ನು ನೀವೇ ಯೋಚನೆ
ಮಾಡಿ. ನಾವೆಲ್ಲಾ ಭಾರತಮಾತೆಯ ಮಕ್ಕಳು,
ಒಂದೇ ದೇಶಕ್ಕೆ ಸಂಬಂಧಪಟ್ಟವರು; ಒಂದೇ ಗೃಹ
ಕೃತ್ಯಕ್ಕೆ ಸೇರಿದವರಂತಿರಬೇಕು. ಹೀಗಿರುವಾಗ
ಮೈಸೂರು ಇಷ್ಟೇ ಇರಲಿ ಎಂದು ಹೇಳಿದರೆ ಅವರ
ಭಾವನೆಗೆ ನಾನೇನು ಹೇಳಲಿ! ನಾಳೆ ಎಲ್ಲಾ ರಾಜ್ಯ
ಗಳೂಹೋಗಿ ಇಂಡಿಯಾ ಸರ್ಕಾರ ಒಂದೇ ಸರ್ಕಾರ
ವಾದರೆ ಮಾನ್ಯ ಮಿತ್ರರು ಏನು ಮಾಡುತ್ತಾರೋ
ಗೊತ್ತಿಲ್ಲ. ಮುಂದೆ ಸಣ್ಣ ಸಣ್ಣ ರಾಜ್ಯಗಳು, ಒಂದು
ಕೋಟಿ, 20 ಲಕ್ಷ, 30ಲಕ್ಷ ಜನಸಂಖ್ಯೆಯಿರತಕ್ಕ ರಾಜ್ಯ
ಗಳು ಬಹಳ ದಿವಸ ಇರಲಾರವು ಎಂದೇ ಇಂಡಿಯಾ
ಸರ್ಕಾರದವರು ಒಂದು ಪೀಠಿಕೆ ಹಾಕಿದ್ದಾರೆ.
ಅದಾದಮೇಲೆ ಈಗೊಂದು ಕಮಿಟಿ ಮಾಡಿದ್ದಾರೆ.
ಸಾಧ್ಯವಾದಷ್ಟು ಮಟ್ಟಿಗೆ ಒಂದು ಭಾಷೆಯಾಡುವ
ಜನ ಒಂದಾಗಿ ಸೇರುವಹಾಗೆ ಮಾಡಲು ಒಂದು
ಕಮಿಟಿ ಮಾಡಿದ್ದಾರೆ. ಆ ಕಮಿಟಿಯಂತೆ ಗುಜರಾತಿ
ಮಾತನಾಡುವವರು ಒಂದು ರಾಜ್ಯದಲ್ಲಿ ಸೇರುತ್ತಾರೆ,
ಮರಾಠಿ ಮಾತನಾಡುವವರು ಒಂದು ರಾಜ್ಯದಲ್ಲಿ
ಸೇರುತ್ತಾರೆ. ಇದನ್ನು ಯಾರೂ ಹೇಳಬೇಕಾಗಿಲ್ಲ.
ಒಂದು ಕೋಟಿ ಜನ ಇದ್ದರೇ ಒಳ್ಳೆಯದು ಎಂದು ಕೆಲ
ವರು ವಾದಮಾಡಿದ್ದಾರೆ. 6-7 ಕೋಟಿ ಜನರಿರುವ
ಬೇರೆ ಸರ್ಕಾರಗಳು ಈಗ ಚೆನ್ನಾಗಿ ನಡೆಯುತ್ತಿಲ್ಲವೇ?
ಆಂಧ್ರದಲ್ಲಿ ಮೂರು ಕೋಟಿ ಜನರಿದ್ದಾರೆ; ಅದು ನಡೆ
ಯುತ್ತಿಲ್ಲವೇ? ಹೈದರಾಬಾದು ಸರಿಯಾಗಿ ನಡೆಯು
ತ್ತಿಲ್ಲವೇ? ಬೊಂಬಾಯಿ ಸರ್ಕಾರ 7-8 ಕೋಟಿ ಪ್ರಜೆ
ಗಳನ್ನೊಳಗೊಂಡು ಸರಿಯಾಗಿ ನಡೆಯುತ್ತಿಲ್ಲವೇ?
ಹೀಗಿರುವಾಗ ಒಂದುಕೋಟಿ ಜನಸಂಖ್ಯೆಯಿರಬೇಕು,
ಹೆಚ್ಚಾಗಿ ಇರಬಾರದು ಎಂದು ಹೇಳುವುದಕ್ಕೆ ಕಾರಣ
ವೇನು? ಎಲ್ಲಿ ಮೈಸೂರಿನಲ್ಲಿ ಮೆಂಬರಾಗಿ ಬರತ
ಕ್ಕಂಥವರು ಕರ್ಣಾಟಕವಾದರೆ ಮೆಂಬರಾಗಿ ತಾವು
ಬರುವುದಿಲ್ಲವೋ ಎಂಬ ಹೆದರಿಕೆಯಮೇಲೆ, ಅವರವರ
ಸ್ಥಾನಮಾನಗಳು ಎಲ್ಲಿ ಸಿಕ್ಕುವುದಿಲ್ಲವೋ ಎಂಬ ಗಾಬ
ರಿಯ ಮೇಲೆ ಕೆಲವರು ಕರ್ಣಾಟಕ ಏಕೀಕರಣ ಬೇಡ
ಎಂದು ಹೇಳುತ್ತಿದ್ದಾರೆ. ಆರೀತಿ ಗಾಬರಿಯೇನೂ
ಪಡಬೇಕಾಗಿಲ್ಲ. ಆಯಾ ಕ್ಷೇತ್ರಗಳಲ್ಲಿ ದಕ್ಷತೆಯಿಂದ
ಯಾರು ಯಾರು ಕೆಲಸ ಕಾರ್ಯಗಳನ್ನು ಮಾಡುತ್ತಾರೋ
ಅವರು ಮೆಂಬರುಗಳಾಗಿ ಬಂದೇಬರುತ್ತಾರೆ.
ಹೈದರಾಬಾದಿನವರೇನೂ ನಮ್ಮ ಕ್ಷೇತ್ರಕ್ಕೆ ಬಂದು
ಮೆಂಬರಾಗಿ ನಿಲ್ಲುವುದಿಲ್ಲ. ಆದ್ದರಿಂದ ಆ ರೀತಿಯ
ಸಂಕುಚಿತ ಮನೋಭಾವನೆಯಿಂದ ವಾದಮಾಡ
ಕೂಡದೆಂದು ಹೇಳುತ್ತೇನೆ.

ಹೈಕೋರ್ಟಿಗೆ ಬಹಳ ದೂರವಾಯಿತು ಎಂದು
ಒಬ್ಬರು ಮಾನ್ಯ ಮಿತ್ರರು ಹೇಳಿದರು. ಹಳ್ಳಿಯವರು
ಹೈಕೋರ್ಟಿಗೆ ಸಾಮಾನ್ಯವಾಗಿ ಬರುತ್ತಾರೆಯೇ?
ಅನುಕೂಲಸ್ಥರು, ಲಾಯರುಗಳಿಗೆ ಹೆಚ್ಚಿಗೆ ದುಡ್ಡು
ಕೊಟ್ಟು ಹೈಕೋರ್ಟಿಗೆ ಹೋಗುವವರು ಮಾತ್ರ
ಬರುತ್ತಾರೆ. ಸಾಮಾನ್ಯ ಜನರು ಯಾರೂ ಬರುವುದಿಲ್ಲ.
ಈಗಲೂ ನಮ್ಮಲ್ಲಿ ಸುಪ್ರೀಂ ಕೋರ್ಟಿಗೆ ಡೆಲ್ಲಿಗೆ ಹೋಗು
ವವರು ಎಷ್ಟು ಜನರಿದ್ದಾರೆ? ಸುಪ್ರೀಂ ಕೋರ್ಟು
ದೂರವಾಗಿರುವುದರಿಂದ ನಮ್ಮ ಸಾಮಾನ್ಯ ಜನಕ್ಕೇ
ನಾದರೂ ತೊಂದರೆ ಯಾಗಿದೆಯೇನು? ಆದ್ದರಿಂದ
ಡೆಲ್ಲಿಗೆ ಸುಪ್ರೀಂ ಕೋರ್ಟಿಗೆ ಹೋಗುವವರಿಗೆ
ಬೆಂಗಳೂರಿನ ಹೈಕೋರ್ಟು ದೂರವಾಯಿತೇ?
ಹಾಗೆ ವಾದಮಾಡುವುದಾದರೆ ಒಂದೊಂದು
ಡಿಸ್ಟ್ರಿಕ್ಟಿಗೂ ಒಂದೊಂದು ರಾಜ್ಯವಾಗಬೇಕು;
ಒಬ್ಬೊಬ್ಬ ಮುಖ್ಯ ಮಂತ್ರಿಯಿರಬೇಕು, ಪ್ರತಿ
ಯೊಬ್ಬರೂ ಬೆಳ್ಳಿಯ ಕೋಲು ಹಿಡಿಸಿಕೊಂಡು

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಹೋಗಬೇಕು ಎಂದು ಹೇಳಬಹುದು. ಈಗ ನಮ್ಮ ಸಂಸ್ಥಾನದಲ್ಲಿ 9 ಜಿಲ್ಲೆಗಳಿರುವುದೇ ಜಾಸ್ತಿ, ಅದನ್ನು ಐದು ಡಿಸ್ಟ್ರಿಕ್ಟ್‌ಗಳಾಗಿ ಮಾಡಬೇಕೆಂದು ಹೇಳುತ್ತಿದ್ದೇವೆ. ಹೀಗಿರುವಾಗ ನಮ್ಮ ದೇಶವನ್ನು ವಿಶಾಲಮಾಡಕೂಡದೆಂದು ಹೇಳಿದರೆ ಹೇಗೆ? ಹೊರಗಡೆ ಪ್ರಾಂತ್ಯಗಳನ್ನು ನೋಡಿ. ಒಂದೊಂದು ಜಿಲ್ಲೆಯಲ್ಲಿ 10 ಲಕ್ಷ, 12 ಲಕ್ಷ ಜನರಿದ್ದಾರೆ. ನಮ್ಮಲ್ಲಾದರೆ ಮೂರು ಲಕ್ಷ, ಐದು ಲಕ್ಷ ಪ್ರಜಾಸಂಖ್ಯೆಗೆ ಒಬ್ಬೊಬ್ಬರು ಡೆಪ್ಯುಟಿ ಕಮಿಷನರನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದರೆ, ನಮ್ಮ ಡೆಪ್ಯುಟಿ ಕಮಿಷನರು ದಕ್ಷತೆಯಿಂದ ಕೆಲಸಮಾಡುತ್ತಿಲ್ಲವೆಂದು ಅರ್ಥವಾಗುವುದಿಲ್ಲವೇ? 12 ಲಕ್ಷ ಪ್ರಜಾಸಂಖ್ಯೆಯಿರತಕ್ಕ ಒಂದು ಜಿಲ್ಲೆಯಲ್ಲಿ ಒಬ್ಬ ಅಧಿಕಾರಿ ಎಷ್ಟು ಗೌರವದಿಂದ ಶಾಂತಿಯಿಂದ ಅಧಿಕಾರ ಮಾಡುತ್ತಿರುತ್ತಾರೆ, ನಾವು ಮೂರು ಲಕ್ಷ ಜನರಿರತಕ್ಕ ಜಿಲ್ಲೆಗೆ ಒಬ್ಬರು ಡೆಪ್ಯುಟಿ ಕಮಿಷನರನ್ನಿಟ್ಟುಕೊಂಡು ಎಷ್ಟರಮಟ್ಟಿಗೆ ರಾಜ್ಯಭಾರ ನಡೆಸುತ್ತಿದ್ದೇವೆ, ನೀವೇ ನೋಡಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ಚಂದ್ರಶೇಖರಯ್ಯನವರೇ ತಮ್ಮ ಜಿಲ್ಲೆಯನ್ನು ಬೇರೆ ಜಿಲ್ಲೆಗೆ ಸೇರಿಸುವುದಕ್ಕೆ ಒಪ್ಪಲಿಲ್ಲ!

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಖಿಲ ಕರ್ಣಾಟಕವಾಗುವುದಾದರೆ, ನಮ್ಮ ಡಿಸ್ಟ್ರಿಕ್ಟು ಒಡೆದು ಹೋಗುವುದಕ್ಕೂ ಒಪ್ಪುತ್ತೇನೆ. ಇಂದು ನೋಡಿ! ಮೈಸೂರು ದೇಶದ ಬಡ್ಜೆಟ್ಟು ನಾಲ್ಕು ಕೋಟಿ ರೂಪಾಯಿಗಳಷ್ಟು ಖೋತಾ ಆಗಿದೆ. ಅಖಿಲ ಕರ್ಣಾಟಕವಾದರೆ ಖೋತಾ ಎಂಟು ಕೋಟಿಯಾಗಬಹುದು ಅಷ್ಟೆ. ನಮಗೆ ತೊಂದರೆ ಬಂದರೆ ಅವರಿಗೂ ತೊಂದರೆಯಾಗುತ್ತದೆ ಅಷ್ಟೆ. ಒಂದು ಮನೆಯಲ್ಲಿ, ಒಂದು ಸಂಸಾರದಲ್ಲಿ 1,000 ರೂಪಾಯಿ ಸಾಲಮಾಡಿದರೆ ಅದರ ಹೊರೆ ಮನೆಯವರಿಗೆಲ್ಲರಿಗೂ ಬೀಳುತ್ತದೆ. ಕರ್ಣಾಟಕ ಏಕೀಕರಣವಾಗಲಿ, ಎಂಟು ಕೋಟಿಯಲ್ಲ, 12 ಕೋಟಿ ಸಾಲಬಂದರೂ ಎಲ್ಲರೂ ಸೇರಿ ತೀರಿಸುತ್ತಾರೆ. ನಮ್ಮ ಕಷ್ಟಕ್ಕೆ ಅವರು ಭಾಗಿಗಳು; ಅವರ ಕಷ್ಟಕ್ಕೆ ನಾವು ಭಾಗಿಗಳು. ಆದ್ದರಿಂದ ಹೊರಗಡೆ ಪ್ರಾಂತ್ಯಗಳ ಕನ್ನಡಿಗರೆಲ್ಲರೂ ಸೇರಿ ಒಂದು ಭಾಷೆಯ ರಾಜ್ಯವಾದರೆ, ಒಗ್ಗಟ್ಟಾಗಿ ಸೇರಿದರೆ, ನಮಗೆ ಸಾಲ ಬಂದರೂ, ಏನೇ ಕಷ್ಟಬಂದರೂ ಸಹಿಸುವುದಕ್ಕೆ ಹೆಚ್ಚಿನ ಧೈರ್ಯಬರುತ್ತದೆ. ಸಂಕುಚಿತ ಭಾವನೆ ಹೋಗುತ್ತದೆ. ಆದ್ದರಿಂದ ಅಖಂಡ ಕರ್ಣಾಟಕವಾದರೆ ಯಾವ ತೊಂದರೆಯೂ ಆಗುವುದಿಲ್ಲವೆಂದು ನನ್ನ ಭಾವನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದರ ಚರ್ಚೆಗೆ ಕಾಲಾವಕಾಶಸಾಲದೆಂದು ನಾನು ಮೊನ್ನೆಯೇ ಅರಿಕೆ ಮಾಡಿಕೊಂಡೆ. ಮಾರ್ಚಿ 31ನೆಯ ತಾರೀಖಿಗೆ ಬಡ್ಜೆಟ್ ಚರ್ಚೆಯನ್ನು ಪೂರೈಸಬೇಕಾಗಿರುವುದರಿಂದ, ಇದರ ಮೇಲಿನ ಚರ್ಚೆಯನ್ನು ಏಪ್ರಿಲ್ ತಿಂಗಳಿಗೆ ಮುಂದುವರಿಸಬೇಕೆಂದು ಹೇಳುತ್ತೇನೆ. ಮೊನ್ನೆಯೇ ಇದನ್ನು ತಿಳಿಸಿದ್ದೆ. ತಾವು ಪರ್ಯಾಲೋಚನೆ ನಡೆಸಿ ತಿಳಿಸುವುದಾಗಿ ಹೇಳಿದ್ದಿರಿ. ಈಗ ತಿಳಿಸುತ್ತೀರಾ?

Mr. SPEAKER.—As per the programme, it was scheduled for tomorrow also; but, tomorrow being a holiday, it is postponed to next day.

Sri M. V. MASCARENHAS (St. John's Hill).—Are you sure that the next day will come, Sir?

Mr. SPEAKER.—Next day will come.

ಶ್ರೀ ಇಜಾರಿ ಶಿರಸಪ್ಪ.—ನಾವು ಈ ಪ್ರಶ್ನೆಯನ್ನು ವೋಟ್ ತೆಗೆದುಕೊಂಡು ತೀರ್ಮಾನಮಾಡಬೇಕೆಂದು ಕೇಳಿದ್ದೆವು. ಬರೀ ಚರ್ಚೆಯಲ್ಲೇ ಮುಗಿಸಿದರೆ ಯಾರು ಹೆಚ್ಚಾಗಿ ಹೇಳಿದರು ಯಾರು ಕಡಮೆ ಹೇಳಿದರು ಎಂದು ಹೇಳುವುದು ಕಷ್ಟ. ಆದ್ದರಿಂದ ಮುಂದೆ, ನಾಲ್ಕು ದಿವಸವೇ ಆಗಲಿ, ಐದು ದಿವಸವೇ ಆಗಲಿ, ಅಭಿಪ್ರಾಯವನ್ನು ಸರಿಯಾಗಿ ಸಂಗ್ರಹಿಸುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

Sri M. PALANIYAPPAN.—I want to bring to the notice of the Chair whether we can table a motion to that effect to take a decision on the Fact Finding Committee Report?

Mr. SPEAKER.—You know the Government's point of view already; it is left to the Hon'ble Member to send any motion.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೊನ್ನೆ ಧರ್ಮಪ್ರಕಾಶ ಶ್ರೀ ಎಚ್. ರುದ್ರಯ್ಯನವರು, ಶ್ರೀ ಆ.ನ. ಕೃಷ್ಣರಾಯರು, ಪಂಡಿತರತ್ನ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು, ಶ್ರೀ ಬಸವಲಿಂಗಯ್ಯನವರು, ಶ್ರೀ ಎಜಮಾನ್ ಕೆಂಚಪ್ಪನವರು, ಶ್ರೀ ಎಂ. ಎಲ್. ಶ್ರೀಕಂಠಯ್ಯನವರು, ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳವರೂ ಮತ್ತು ಶ್ರೀ ಟಿ. ಎಲ್. ಗಂಗೋಜಿರಾಯರು ಇತ್ಯಾದಿ ಅನೇಕ ಮಹನೀಯರುಗಳು ಸೇರಿಕೊಂಡು ಈ ಸಭೆಯ ಮಾನ್ಯ ಸದಸ್ಯರುಗಳಿಗೆ ಹಂಚಿದ್ದ ಮೆಮೊರಾಂಡಮ್ಮಿನ ಬಗ್ಗೆ ಅದರಲ್ಲಿ ಅಡಕವಾಗಿರತಕ್ಕಂಥ ಸತ್ಯಾಂಶಗಳೇನೆಂಬುದನ್ನು ತಿಳಿದುಕೊಳ್ಳದೆ, ಅದರಲ್ಲಿರುವ ಸಾರವನ್ನು ಸಂಗ್ರಹಮಾಡದೆ, "ಹೀಗೆ ಮಾಡಿರತಕ್ಕದ್ದರ ಹಿನ್ನೆಲೆಯೇನು? ಏನೋ ಒಂದು ಹಿನ್ನೆಲೆಯನ್ನು ಅವರು ಇಟ್ಟುಕೊಂಡೇ ಹೀಗೆ ಮಾಡುತ್ತಿದ್ದಾರೆ. ಇದರಲ್ಲಿ ಇನ್ನೂ ಯಾರಾರು ಸೇರಿದ್ದಾರೋ ಏನೋ" ಎಂಬುದಾಗಿ ಶ್ರೀ ಶಿವನಂಜೇಗೌಡರು ಏನೇನೋ ಟೀಕೆ ಮಾಡಿದರು. ಅದೇ ಶ್ರೀ ಶಿವನಂಜೇಗೌಡರು ಹಾಗೆಲ್ಲಾ ಮಾತನಾಡಲು ಅವರು ಯಾವ ಹಿನ್ನೆಲೆಯನ್ನಿಟ್ಟುಕೊಂಡು ಹಾಗೆ ಮಾತನಾಡಿದರು? ಅವರೂ ಒಂದು ಹಿನ್ನೆಲೆಯನ್ನು ಇಟ್ಟುಕೊಂಡಿದ್ದುದರಿಂದಲೇ ಅಲ್ಲವೇ ಹಾಗೆಲ್ಲಾ ಅವರು ಕೂಗಾಡಿದ್ದು? ಅವರ ಹಿನ್ನೆಲೆ ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ಯಾವಾಗ ಅವರು ಈ ಕರ್ಣಾಟಕ ಆಗುವುದು ಬೇಡ ಎಂದು ಹೇಳಿದರೋ ಆಗಲೇ ಅವರೂ ಕೂಡ ಏನೋ ಒಂದು ಹಿನ್ನೆಲೆಯನ್ನು ಇಟ್ಟುಕೊಂಡೇ ಹಾಗೆ ಹೇಳಿರಬೇಕಲ್ಲವೇ? ಈ ಬಗ್ಗೆ ಈಗ ಇವರೆಲ್ಲರೂ ಸೇರಿಕೊಂಡು ಮೈಸೂರಿನಲ್ಲಿ ಒಂದು ಕೂಗೆಬ್ಬಿಸಿದ್ದಾರೆ. ಅನೇಕರಲ್ಲಿ ದುರ್ಭಾವನೆಗಳನ್ನು ಬೆಳೆಸುತ್ತಿದ್ದಾರೆ. ಈ ಮೈಸೂರು ಸೇರಿ ಕರ್ಣಾಟಕ ರಾಜ್ಯವಾಗಿ ಬಿಟ್ಟರೆ—ಆಗ ಇದೆಲ್ಲಾ ಲಿಂಗಾಯಿತರ ರಾಜ್ಯವಾಗಿ ಹೋಗಿಬಿಡುತ್ತದೆ ಎಂದು ಕೂಗೆಬ್ಬಿಸಿದ್ದಾರೆ. ಅವರು ಇದೇ ವಿಚಾರವಾಗಿ ಹೊರಗಡೆ ನನ್ನೊಡನೆ ವಿಶೇಷ ಚರ್ಚೆಮಾಡಿದ್ದಾರೆ. ಕರ್ಣಾಟಕ ಏಕೀಕರಣವಾದ ನಂತರ ಇಲ್ಲಿ 2 ಕೋಟಿ ಜನಸಂಖ್ಯೆ ಲಿಂಗಾಯಿತರೇ ಆಗಿಬಿಡುತ್ತಾರೆ ಎಂದು ಅವರ ಜನಗಳಲ್ಲಿ ತಪ್ಪು ಭಾವನೆ ಬರುವಂತೆ ಮಾತನಾಡುತ್ತಿದ್ದಾರೆ. ಆದರೆ ನಮಗೆ ಹೊರಗಡೆಯಿಂದ ಬರತಕ್ಕಂಥ ಜನಸಂಖ್ಯೆಯಾದರೋ ಕೇವಲ ಒಂದು ಕೋಟಿ ಇದ್ದರೆ

ಹೆಚ್ಚಾಯಿತು. ಆ ಒಂದು ಕೋಟಿ ಜನರೂ ಲಿಂಗಾಯಿತರೇ ಆಗಿದ್ದಾರೇನು? ಹಾಗೆ ಮೈಸೂರಿಗೆ ಸೇರತಕ್ಕ ಜನಸಂಖ್ಯೆಯಲ್ಲಿ ಲಿಂಗಾಯಿತರ ಎಷ್ಟಿರಬಹುದು, ಇತರ ಜನಾಂಗಗಳ ಸಂಖ್ಯೆ ಎಷ್ಟಿದೆ ಎನ್ನುವುದನ್ನು ವಿವೇಚನೆ ಮಾಡದೆ ಮಾತನಾಡುತ್ತಿದ್ದಾರೆ. ಅಮ್ಮಮ್ಮಾ ಅಂದರೆ ಇನ್ನು ಒಂದೆರಡು ಲಕ್ಷ ಜನ ಲಿಂಗಾಯಿತರು ಜಾಸ್ತಿ ಆಗಬಹುದು, ಹಾಗೆ ಒಂದೆರಡು ಲಕ್ಷ ಜನ ಲಿಂಗಾಯಿತರು ಬಂದರೆ ಶೇಕಡ 50ರಷ್ಟು ಲಿಂಗಾಯಿತರಾದರೇನು? ಹೀಗೆ ಅಲ್ಪಸ್ವಲ್ಪ ಅಲ್ಲಿಂದ ಬರತಕ್ಕ ಜನಾಂಗದಿಂದಲೇ ಇಲ್ಲಿಯ ಒಕ್ಕಲಿಗರು ಶೇಕಡ 50, ಬ್ರಾಹ್ಮಣರು ಶೇಕಡ 50, ಹರಿಜನರು ಶೇಕಡ 50 ಆಗುತ್ತಾರೇನು? "ಈಗ ಲಿಂಗಾಯಿತ ಸದಸ್ಯರು ಮಾತ್ರ ಕೇಳುತ್ತಿದ್ದಾರೆ—ಹಾಗೆ ಅವರು ಈ ಕರ್ಣಾಟಕ ಏಕೀಕರಣವಾಗಬೇಕು ಎಂದು ಏತಕ್ಕೆ ಕೇಳುತ್ತಿದ್ದಾರೆ ಎಂದರೆ ಮುಂದಕ್ಕೆ ಇಲ್ಲಿ ಅವರ ಜನಸಂಖ್ಯೆ ಶೇಕಡ 50ರಷ್ಟು ಆಗುತ್ತದೆ" ಎಂದು ಅವರು ಹೇಳಿದರು. ಹಾಗಾದರೆ ಈ ದಿವಸ ಈ ಅಖಂಡ ಕರ್ಣಾಟಕ ಸ್ಥಾಪನೆಯಾಗಬೇಕು ಎಂದು ಕೇಳತಕ್ಕವರಲ್ಲಿ ಬ್ರಾಹ್ಮಣರಿದ್ದಾರೆ, ಮುಸಲ್ಮಾನರಿದ್ದಾರೆ, ಹರಿಜನರಿದ್ದಾರೆ, ಒಕ್ಕಲಿಗರಿದ್ದಾರೆ, ವೈಶ್ಯರಿದ್ದಾರೆ, ಹೀಗೆ ಇಷ್ಟು ಜನ ಅನ್ಯಮತಗಳವರು ಇದು ಸ್ಥಾಪನೆಯಾಗಲೇ ಬೇಕು ಎಂದು ಕೇಳಿದರೆ—ಅದಕ್ಕೆ ಮುಂದೆ ಅವರ ಜನಸಂಖ್ಯೆ ಶೇಕಡ 50ಕ್ಕೆ ಏರುತ್ತದೆ ಅನ್ನುವ ಕಾರಣದಿಂದಲೇ ಅವರೆಲ್ಲರೂ ಹೀಗೆ ವಾದ ಮಾಡುತ್ತಿದ್ದಾರೇನು? ಹೀಗೆ ಅವರು ಮಾತನಾಡಿರತಕ್ಕದ್ದು ಶುದ್ಧಾಂಗವಾಗಿ ತಪ್ಪು. ಅವರು ಏತಕ್ಕಾಗಿ ಹಾಗೆ ಹೇಳುತ್ತಿದ್ದಾರೆ ಅಂದರೆ—ಮುಂದೆ ಕರ್ಣಾಟಕ ರಾಜ್ಯ ಸ್ಥಾಪನೆಯಾದಮೇಲೆ ಅವರಿಗೆ—ಈಗ ಇಲ್ಲಿರತಕ್ಕ ಅಲ್ಪ ಸಂಖ್ಯಾತರಿಗೆ ಯಾವ ಕಿರುಕುಳ ಕೊಡುತ್ತಿದ್ದಾರೋ ಅದನ್ನು ಮುಂದೆ ಕೊಡಲು ಸಾಧ್ಯವಾಗುವುದಿಲ್ಲವಲ್ಲಾ—ಆಗ ನಮಗೆ ಅನುಕೂಲಗಳೆಲ್ಲಾ ಕಡಮೆಯಾಗುತ್ತವಲ್ಲ—ಅನ್ನೋ ಒಂದು ಭಾವನೆಯಿಂದ ಇದನ್ನು ಕೋಮುವಾರು ಪ್ರಶ್ನೆಗೆ ತಿರುಗಿಸಲು ಪ್ರಯತ್ನಮಾಡಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆಲ್ ಇಂಡಿಯಾ ರೀ-ಆರ್ಗನೈಜೇಷನ್ ಸಮಿತಿಯ ಸ್ಥಾಪನೆಯ ಧ್ಯೇಯಗಳಲ್ಲಿ ಲಿಂಗಾಯಿಟ್ಸ್—ನಾನ್ ಲಿಂಗಾಯಿಟ್ಸ್ ಎಂಬ ಪ್ರಶ್ನೆಯೇ ಇಲ್ಲ. ಈ ವಿಚಾರವನ್ನು ಇಲ್ಲಿಗೆ ಕೈ ಬಿಡುವುದು ಸೂಕ್ತ ಎಂದು ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನನ್ನೊಡನೆ ಅನೇಕ ಒಕ್ಕಲಿಗ ಸದಸ್ಯರು ಇದನ್ನೇ ಚರ್ಚೆಮಾಡಿದ್ದಾರೆ. ಅದಕ್ಕಾಗಿ ನಾನು ಇದನ್ನೆಲ್ಲಾ ಹೇಳಬೇಕಾಗಿದೆ. ನಾನು ಈ ಮೊದಲೇ ಹೇಳಿದಹಾಗೆ ಅಣ್ಣತಮ್ಮನಿಗೆ ಲಗ್ನಮಾಡಿದರೆ ಸಾಲಮಾಡಬೇಕಾಗುತ್ತದೆ. ಒಂದು ಸಂಸಾರದಲ್ಲಿ ಒಂದು ಮದುವೆ ಮಾಡಿದರೆ ನಾಲ್ಕೈದು ಸಾವಿರ ರೂಪಾಯಿ ಸಾಲ ಆಗಬಹುದು. ಈ ಸಾಲವನ್ನು ಎಲ್ಲ ಅಣ್ಣತಮ್ಮಂದಿರೂ ತೀರಿಸಬೇಕು. ಮಕ್ಕಳೂ ಮೊಮ್ಮೊಕ್ಕಳೂ ತೀರಿಸಬೇಕು. ಮೈಸೂರು ದೇಶದಲ್ಲಿ ಈ ಸಭೆಯಲ್ಲಿ ನಾನು ನೋಡಿರುವಂತೆ ಬಡ್ಜೆಟ್ ಖೋತಾ ಇಲ್ಲದಿರುವ ಒಂದು ವರ್ಷ ಕೂಡ ಇಲ್ಲ. ಬಳ್ಳಾರಿಯನ್ನು ಸೇರಿಸಿಕೊಂಡರೆ ನಷ್ಟವಾಗುತ್ತದೆ ಎಂದು ಕೆಲವರು ಹೇಳುತ್ತಿದ್ದರು. ಆದರೆ ತುಂಗಭದ್ರ ಯೋಜನೆ ಪೂರ್ತಿಯಾದರೆ ಅದರಿಂದ ನೀರಾವರಿಯಾದ ಪ್ರದೇಶದಿಂದ ಬರತಕ್ಕ ಹಣ ಉಳಿಯುತ್ತದೆ. ಕರ್ನಾಟಕದ ಬೇರೆ ಪ್ರದೇಶಗಳಲ್ಲಿ ನಮ್ಮ ದೇಶಕ್ಕಿಂತ ಹೆಚ್ಚು ಸೌಕರ್ಯವಿದೆ. ಮೈಸೂರು ದೇಶದಲ್ಲಿ ಅನೇಕರು ಸಮುದ್ರವನ್ನೇ ಕಂಡಿಲ್ಲ. ಆ ಪ್ರದೇಶಗಳಲ್ಲಿ ಈ ಸೌಕರ್ಯವಿರುವುದರಿಂದ ಅವು ಮೈಸೂರಿಗೆ ಸೇರಿದರೆ ಬಂದರಿನ ಸೌಕರ್ಯ ಒದಗಿ ಬೇರೆ ದೇಶಗಳೊಡನೆ ಸಂಪರ್ಕ ಹೆಚ್ಚಾಗಿ ನಮ್ಮ ದೇಶಕ್ಕೆ ಹೆಚ್ಚಿನ ಲಾಭ ಸಿಕ್ಕುತ್ತದೆ. ಇಷ್ಟೇ ಪ್ರದೇಶಗಳು ಮೈಸೂರಿಗೆ ಸೇರಬಹುದೆಂಬ ಸಂಕುಚಿತ ಭಾವನೆಯನ್ನಿಟ್ಟುಕೊಳ್ಳಬಾರದು, ಕರ್ನಾಟಕವಲ್ಲದೆ ಬೇರೆ ಪ್ರದೇಶಗಳು ಮೈಸೂರು ದೇಶಕ್ಕೆ ಸೇರಿದರೂ ನಮಗೆ ಸಂತೋಷ. ದೊಡ್ಡದಾಗಿ ಬೆಂಗಳೂರು ರಾಜಧಾನಿಯಾಗಿ ಯಾರು ಬೇಕಾದರೂ ಬಂದು ಸೇರಲಿ. ಮೂರು ಕೋಟಿ ಜನಸಂಖ್ಯೆಯಾದರೂ ಬೇಡವೆನ್ನುವುದಿಲ್ಲ. ಈ ವಿಷಯವನ್ನು ಕಾಂಗ್ರೆಸ್‌ನವರು ಮೊದಲೇ ನಿರ್ಧಾರಮಾಡಿದ್ದಾರೆ. ಮೈಸೂರು ದೇಶಕ್ಕೆ ಅಕ್ಕಪಕ್ಕದ ಪ್ರದೇಶದವರು ಯಾರು ಬೇಕಾದರೂ ಬಂದು ಸೇರಬಹುದೆಂದು ತೀರ್ಮಾನಮಾಡಿದ್ದರೂ ಈಗ ಬೇಡವೆಂದರೆ ನಾಚಿಕೆಗೇಡು, ನನಗಂತೂ ಹಾಗೆ ಹೇಳಲು ನಾಚಿಕೆಯಾಗುತ್ತದೆ. ವಚನಭ್ರಷ್ಟರಾಗಬಾರದು. ಬೀರೂರು ಎಂ.ಪಿ.ಸಿ.ಸಿ.ಯಲ್ಲಿಯೂ, ರಾಜ್ಯಾಂಗ ಸಭೆಯಲ್ಲಿಯೂ ಏನು ತೀರ್ಮಾನಮಾಡಿದ್ದೇವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅಲ್ಲಿ ನಮ್ಮ ಅಕ್ಕಪಕ್ಕದ ಪ್ರದೇಶಗಳ ಅಣ್ಣತಮ್ಮಂದಿರು ನಮ್ಮೊಡನೆ ಸೇರಬಹುದೆಂದು ಮಾಡಿರುವ ತೀರ್ಮಾನವನ್ನು ನಮ್ಮ ಸ್ನೇಹಿತರು ಕೆಲವರು ಮರೆತಿರುವಂತೆ ಕಾಣುತ್ತದೆ.

ಅನೇಕ ಜನರು ಟೀಕೆ ಮಾಡಿದರು. ಆದರೆ ಅವರು ಏಕೀಕರಣ ಬೇಡವೆಂದು ಹೇಳುವುದಿಲ್ಲ. ತಾತ್ಕಾಲಿಕವಾಗಿ ಅಂಕಿ ಅಂಶಗಳನ್ನಿಟ್ಟುಕೊಂಡು ಹೇಳುತ್ತಾರೆ. ನಮ್ಮ ದೇಶದ ಅನೇಕ ಜನ ಸ್ನೇಹಿತರು ನನಗೆ ತಿಳಿದ ಹಾಗೆ ಮೈಸೂರು ದೇಶದವರನೇಕರು ಧಾರವಾಡ ಹುಬ್ಬಳ್ಳಿಯೊಡನೆ ಹೆಣ್ಣುಕೊಟ್ಟು ತಂದು ಸಂಬಂಧ ಬೆಳೆಸಿದ್ದಾರೆ. ಹೀಗೆ ಇನ್ನೂ ಬೆಳೆಯಬೇಕು. ಮೈಸೂರು ದೇಶದ ಜನರಿಗೂ ಅವರಿಗೂ ಸಂಪರ್ಕ ಇನ್ನೂ ಹೆಚ್ಚಬೇಕಾದರೆ, ಶ್ರೀಮಾನ್ ಗೋಪಾಲಗೌಡರು ಹೇಳಿದಹಾಗೆ, ಕರೀ ಕಂಬಳಿಯನ್ನು ಕರಡಿ ಎಂದು ಭಾವಿಸಿ ನಾವು ಹೆದರಿಕೊಂಡು ದೂರವಿರಬಾರದು, ನಾವು ಯಾರಿಗೂ ಹೆದರುವುದಿಲ್ಲ. ಅಕ್ಕಪಕ್ಕದ ಪ್ರದೇಶಗಳ ಜನರಿಗೆ ಸ್ವಾಗತ ಬಯಸುವಂತೆ ಎಲ್ಲ ಮಾನ್ಯ ಸದಸ್ಯರಿಗೂ ಒಳ್ಳೆಯ ಬುದ್ಧಿಯನ್ನು ಕೊಡಲೆಂದು ನನ್ನ ಪ್ರಾರ್ಥನೆ. ಅಖಂಡ ಕರ್ನಾಟಕವಾಗಬೇಕೆಂದು ಕಾಂಗ್ರೆಸ್‌ನವರು ಮಾಡಿದ ನಿರ್ಣಯ, ಕೊಟ್ಟ ಮಾತು ಉಳಿಯಬೇಕು. ರಾಜ್ಯಾಂಗ ಸಭೆಯಲ್ಲಿ ಈ ಸಭೆಯಲ್ಲಿರುವ ಅನೇಕ ಸದಸ್ಯರಿದ್ದರೆಂದು ಕಾಣುತ್ತದೆ. ಶ್ರೀಮಾನ್ ಚನ್ನಬಸಪ್ಪನವರೂ ಇದ್ದರೆಂದು ಕಾಣುತ್ತದೆ. ಅವರ ಮಾತು ಉಳಿಯಬೇಕು. ಆ ಹೊತ್ತು ಅಖಂಡ ಕರ್ಣಾಟಕವಾಗಬೇಕು, ನಮ್ಮ ದೇಶಕ್ಕೆ ಅಕ್ಕಪಕ್ಕದವರೆಲ್ಲ ಸೇರಬೇಕೆಂದು ಪುರಸ್ಕಾರ ಕೊಟ್ಟು ಈಗ ಬೇಡವೆಂದು ಯಾವ ಬಾಯಿಂದ ಹೇಳಬೇಕು? ದಾವಣಗೆರೆಯಲ್ಲಿ ಏನು ಭಾಷಣ ಮಾಡಿದರು? ಅಲ್ಲಿ All Parties Conference ಆಯಿತು. ಕರ್ಣಾಟಕ ಪ್ರಾಂತ್ಯದ ದೇಶದ ಎಲ್ಲಾ ನಾಯಕರೂ ಅಲ್ಲಿ ಸೇರಿದ್ದರು. ಅವರು ಏನೇನು ಮಾತನಾಡಿದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈ ಹೊತ್ತು ನಮ್ಮ ಕೈಗೆ ರಾಜ್ಯ ಬಂದಿದೆ. ನಾವು ಸದಸ್ಯರುಗಳಾಗಿದ್ದೇವೆ. ಈಗ ಅವರು ನಮ್ಮೊಡನೆ ಸೇರುವುದ, ಬೇಡ, ಇವರು ಬೇಡ, ಅವರು ಬರಲಿ, ಇವರು ಬರಲಿ, ಬಳ್ಳಾರಿ ನಮಗೆ ಬರಬೇಕು, ಹರಿಹರ ನಮಗೆ ಬೇಕು ಆದರೆ ದಾವಣಗೆರೆ ಬೇಡ. ಎನ್ನತಕ್ಕಂಥ ಮನೋಭಾವನೆಯನ್ನು ಬಿಟ್ಟುಬಿಡಬೇಕು. ಮೈಸೂರು

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ದೇಶದ ವೈಶಿಷ್ಟ್ಯ ಉಳಿಯಬೇಕಾದರೆ ಹಿಂದೆ ಆಡಿದ ಮಾತಿನಂತೆ ನಾವು ನಡೆಯಬೇಕು. ನಮ್ಮ ದೇಶ ಸುಭಿಕ್ಷವಾಗಿರಬೇಕು ಎನ್ನುವುದಾದರೆ ಅದಕ್ಕಾಗಿ ನಾವು ಹಿಂದೆ ಮಾಡಿದ ತೀರ್ಮಾನವನ್ನು ಜ್ಞಾಪಕದಲ್ಲಿಟ್ಟುಕೊಂಡು ಅಖಂಡ ಕರ್ಣಾಟಕವಾಗುವುದಕ್ಕೆ ನಮ್ಮ ಬೆಂಬಲ ಕೊಡಬೇಕು. ಹಿಂದೆ ಅಸೆಂಬ್ಲಿಯಲ್ಲಿದ್ದಾಗ ಸದಸ್ಯರು ಮತ್ತು ಸರ್ಕಾರದವರು ಏನು ವಾಗ್ದಾನಮಾಡಿದರು ಎಂಬುದು ನನಗೆ ಗೊತ್ತಿದೆ. ಹಾಗೆ ಮೈಸೂರು ಸರ್ಕಾರದವರು ಹಿಂದೆ ಮಾಡಿರತಕ್ಕ ವಾಗ್ದಾನವನ್ನೂ ಹಿಂದಿನ ಅಸೆಂಬ್ಲಿಯವರ ಮಾಡಿರತಕ್ಕ ತೀರ್ಮಾನವನ್ನು ನಾವು ಇವೊತ್ತು ಈಕ್ಷಿಸುವುದಾದರೆ ನಾವು ಎಷ್ಟುಮಟ್ಟಿಗೆ ಆ ವಾಗ್ದಾನ ಮತ್ತು ತೀರ್ಮಾನಗಳ ಪ್ರಕಾರ ಮುಂದುವರಿದು ಹೋಗುತ್ತಿದ್ದೇವೆಂಬದುನ್ನು ಯೋಚನೆಮಾಡಬಹುದು. ಎಲ್ಲರ ಗೌರವವೂ ಉಳಿಯಬೇಕಾದರೆ ಮೈಸೂರಿನ ವೈಶಿಷ್ಟ್ಯ ಉಳಿಯಬೇಕಾದರೆ ನಮ್ಮ ಇಡೀ ಕರ್ಣಾಟಕದಲ್ಲಿರತಕ್ಕಂಥ ಎಲ್ಲ ಮಹನೀಯರ ಮತ್ತು ಅಣ್ಣತಮ್ಮಂದಿರ ಸುಖ ಸಂಪತ್ತನ್ನು ಬೆಳೆಸಬೇಕಾದರೆ ನಮ್ಮಲ್ಲಿರತಕ್ಕ ಸಂಪರ್ಕ ಜಾಸ್ತಿ ಬೆಳೆಯಬೇಕು. ಹಾಗೆ ಜಾಸ್ತಿ ಬೆಳೆದು ಅಖಂಡ ಕರ್ಣಾಟಕ ಯಾವ ರೀತಿ ಆಗುತ್ತದೆ ಎಂಬುದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕು. ಈಗ ಸರ್ಕಾರ ಏನು ಮಾಡುತ್ತಾರೋ ಗೊತ್ತಿಲ್ಲ. ಆದರೆ ಹಿಂದೆ ಕೊಟ್ಟಿರತಕ್ಕಂಥ ವಾಗ್ದಾನಗಳನ್ನೂ ಭರವಸೆಗಳನ್ನೂ ನಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕಾದುದು ನಮ್ಮ ಕರ್ತವ್ಯ. ಈ ವಿಷಯವನ್ನು ನಾವು ಚರ್ಚೆಮಾಡುವಾಗ ಈ ಸಭೆಯಲ್ಲಿರತಕ್ಕ ಸದಸ್ಯರೆಲ್ಲ ಮಂತ್ರಿಗಳೂ ಮತ್ತು ಅಧ್ಯಕ್ಷರೂ ಸೇರಿ ಇರುವ ನಾವು 108 ಜನಗಳು ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವ ರೀತಿಯಲ್ಲಿ ನಮ್ಮ ಕಾರ್ಯಕ್ರಮವನ್ನು ನಡೆಸಿಯೇ ನಡೆಸಬೇಕಾಗುತ್ತದೆ. ಇಲ್ಲದಿದ್ದರೆ ಮೈಸೂರಿಗೆ ಅಪಕೀರ್ತಿ ಬರುತ್ತದೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಯಾಕೆಂದರೆ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರ ಯಾವುದೇ ಆಗಲಿ ಈಗ ಇರುವ ಕಾಂಗ್ರೆಸ್ ಸರ್ಕಾರ ಯಾವುದೇ ಆಗಿರಲಿ, ಆಗಿನ ಮೈಸೂರಿನ ಕಾಂಗ್ರೆಸ್ ಅಧ್ಯಕ್ಷರು ಯಾರೇ ಆಗಿರಲಿ ಈಗಿನ ಮೈಸೂರಿನ ಕಾಂಗ್ರೆಸ್ ಅಧ್ಯಕ್ಷರು ಯಾರೇ ಇರಲಿ, ಆಗ ಇದ್ದ ಸದಸ್ಯರು ಯಾರೇ ಆಗಲಿ ಈಗ ಯಾರೇ ಕಾಂಗ್ರೆಸ್ ಸದಸ್ಯರಿರಲಿ, ಅದನ್ನು ನಾವು ಗಣನೆಗೆ ತೆಗೆದುಕೊಳ್ಳದೆ ಮುಖ್ಯವಾಗಿ ಮೈಸೂರಿನ ಕಾಂಗ್ರೆಸ್ಸಿನ ಗೌರವವು ಉಳಿಯುವಂತೆ ವರ್ತಿಸಬೇಕಾದುದು ನಮ್ಮ ಕರ್ತವ್ಯ. ಅದನ್ನು ಬಿಟ್ಟು ಅಡ್ಡ ದಾರಿಗೆ ಹೋದದ್ದೇ ಆದರೆ ಅದರಿಂದ ನಮಗೆ ಧಕ್ಕೆ ಬರುತ್ತದೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಮೈಸೂರು ಸರ್ಕಾರದ ಜವಾಬ್ದಾರಿ ಇಡೀ ಮೈಸೂರು ದೇಶದ ಒಂದು ಕೋಟಿ ಜನಸಂಖ್ಯೆಯ ಅಭಿಪ್ರಾಯದ ಮೇರೆಗೆ ದೇಶವನ್ನು ಪರಿಪಾಲನೆ ಮಾಡಬೇಕಾಗಿದೆ. ಅವರ ಪೈಕಿ ಬಹುತೇಕ ಜನರು ಈ ಕರ್ಣಾಟಕ ಪ್ರಾಂತವಾಗಬೇಕು ಎಂಬುದಾಗಿ ಹೇಳುತ್ತಿದ್ದಾರೆ ಎಂಬುದು ನನ್ನ ಅನುಭವ. ಈ ಸಭೆಗೆ ಒಬ್ಬ ಸದಸ್ಯರು ಬರಬೇಕಾಗಿದ್ದರೆ, ಅವರು ಸುಮಾರು 75 ಸಾವಿರ ಜನಸಂಖ್ಯೆಯ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿರುತ್ತಾರೆ. ಅವರು ಅವರವರ ಕ್ಷೇತ್ರಗಳ ಬಹುತೇಕ ಜನರ ಅಭಿಪ್ರಾಯಗಳನ್ನು ತೆಗೆದುಕೊಂಡು ಅವನ್ನು ಈ ಸಭೆಯಲ್ಲಿ ಪ್ರತಿಪಾಧಿಸುತ್ತಾರೆ ಎಂಬುದು ನನ್ನ ಅನುಭವ. ಈ ವಿಷಯವನ್ನು ಓಟಿಗೆ ಹಾಕುವ ವಿಷಯದಲ್ಲಿ ಅಧ್ಯಕ್ಷರು ಏನು ರೂಲಿಂಗ್ ಕೊಡುತ್ತಾರೋ ಗೊತ್ತಿಲ್ಲ. ಸರ್ಕಾರದವರು ಈ ವಿಚಾರದಲ್ಲಿ ಏನು ಅಭಿಪ್ರಾಯಪಡುತ್ತಾರೋ ಅದು ನಮಗೆ ಬೇಕಿಲ್ಲ. ಆದರೆ ಇಲ್ಲಿ ಬಂದಿರುವ ನೂರಾರು ಜನ ಸದಸ್ಯರು ಈ ವಿಚಾರದಲ್ಲಿ ಒಂದು ತೀರ್ಮಾನ ಮಾಡಬೇಕೆ ಬೇಡವೇ ಎಂಬ ಬಗ್ಗೆ ಒಂದು ನಿರ್ಧಾರಕ್ಕೆ ಬರಲು ಈ ಸಭೆಗೆ ಅಧಿಕಾರವಿದೆ. ಆದ್ದರಿಂದ ಈ ಸಭೆ ಮುಗಿಯುವುದರೊಳಗಾಗಿ ನಾವು ಫಸಲಾಲಿ ಸಮಿತಿಯವರಿಗೆ ಮೈಸೂರು ದೇಶದ ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಕೊಟ್ಟೇ ತೀರಬೇಕಾಗುತ್ತದೆ. ಫಜಲಾಲಿ ಸಮಿತಿಯವರು ಮೈಸೂರು ದೇಶಕ್ಕೆ ಬಂದಾಗ ಕೆಲವು ಜನರು ಕರ್ಣಾಟಕ ಪ್ರಾಂತವಾಗಬೇಕೆಂದೂ. ಇನ್ನು ಕೆಲವರು ಬೇಡವೆಂದೂ. ತಮ್ಮ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದರೆ ಮೈಸೂರು ದೇಶದ ಜನಗಳ ಅಭಿಪ್ರಾಯವನ್ನು ಕ್ರೋಡೀಕರಿಸುವುದಕ್ಕೆ ಮೈಸೂರು ಸರ್ಕಾರದ ನೆರವು ದೊರೆಯಲಿಲ್ಲ ಎಂಬುದಾಗಿ ಕಮಿಷನ್ನಿನವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಮೈಸೂರು ದೇಶ ಈ ರೀತಿಯಾಗಿ ಅಭಿಪ್ರಾಯಪಟ್ಟಿದೆ ಎಂಬುದಾಗಿ ಫಜಲಾಲಿ ಸಮಿತಿಯವರಿಗೆ ತಿಳಿಸುವುದು ಸೂಕ್ತ ಎಂದು ಹೇಳುತ್ತೇನೆ. ಅದೇರೀತಿ ಅಖಂಡ ಕರ್ಣಾಟಕ ಆಗುವುದಕ್ಕೆ ಮೈಸೂರು ಸರ್ಕಾರದ ಮಂತ್ರಿಗಳಿಗೂ ಇಲ್ಲಿ ಸೇರಿರತಕ್ಕಂಥ ಎಲ್ಲಾ ಸದಸ್ಯರುಗಳಿಗೂ ಭಾರತ ಮಾತೆಯು ದೊಡ್ಡ ಮನಸ್ಸು ಕೊಡಲಿ, ಅಖಂಡ ಕರ್ಣಾಟಕವಾಗಿ ಅದರ ಸುಖ ಸಂಪತ್ತು ಬೆಳೆಯುವ ಸಂದರ್ಭ ಬರಲಿ ಎಂದು ಪ್ರಾರ್ಥನೆಮಾಡಿ, ಇಲ್ಲಿಯ ಎಲ್ಲಾ ಸದಸ್ಯರೂ, ಈ ಅಖಂಡ ಕರ್ಣಾಟಕಕ್ಕೆ ಬೆಂಬಲ ಕೊಡಬೇಕೆಂದು ಅರಿಕೆಮಾಡಿ, ಅಧ್ಯಕ್ಷರು ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಕೊಡುತ್ತಾ ಮತ್ತೊಮ್ಮೆ ಮಾನ್ಯ ಸದಸ್ಯರಿಗೆ ಅಖಂಡ ಕರ್ಣಾಟಕದ ಬಗ್ಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now rise and meet again at 12 NOON on Wednesday, the 9th March 1955.

I want to make an announcement. Tomorrow, the Office will be open between 9 A.M. and 1 P.M. to receive cut motions.

The House adjourned at Fifteen minutes past Five of the Clock to meet again at Tweleve Noon on Wednesday, the 9th March 1955.

WD 4508—GPB—550—25-4-55